ಐಕ್ಯರಂಗ

ಸಂಪುಟ 17 ಸಂಚಿಕೆ 10-11

12 ಮಾರ್ಚ್ 1995 ರೂ. 2.00



ಹುತಾತ್ಮ ಕಾಂ.ಮುಧುರಯ್ಯ ಧನ್ನೂರವರ ಸಮಾಧಿಯಲ್ಲಿ ಅವರ ಸ್ಮಾರಕದಿಂದ ಅವರ ಮಕ್ಕಳು ಹಾಗೂ ಇತರ ಸಂಗಾತಿಗಳು ಹುತಾತ್ಮ ಜ್ಯೋತಿಯನ್ನು ಜಾಥ ಯಾತ್ರೆಯಲ್ಲಿ ತಂದು ರಾಜ್ಯ ಕಾರ್ಯದರ್ಶಿ ಕಾಂ. ಪಿ.ರಾಮಚಂದ್ರರಾವ್ ಅವರಿಗೆ ನೀಡುತ್ತಿರುವುದು

ಒಳಪುಟಗಳಲ್ಲಿ

ದೇಶದ ರಾಜಕೀಯದಲ್ಲಿ ಪ್ರಮುಖ ಪಾತ್ರ ನಿರ್ವಹಿಸಲು ಪಕ್ಷ ಸಜ್ಜಾಗಬೇಕು

-ಪಿ. ರಾಮಚಂದ್ರನ್

ಸಿಪಿಐ(ಎಂ)ನ 15ನೇ ಮಹಾಧಿವೇಶನಕ್ಕೆ ಮುನ್ನಡೆಯೋಣ

ಸಿಪಿಐ(ಎಂ)ನ ಕರ್ನಾಟಕ ರಾಜ್ಯ ಸಮ್ಮೇಳನವು ಫೆಬ್ರವರಿ 24-27 ರಂದು ಗುಲ್ಬರ್ಗಾದಲ್ಲಿ ಯಶಸ್ವಿಯಾಗಿ ನಡೆದು ಇದೀಗ ನಾವೆಲ್ಲರೂ ಎಪ್ರಿಲ್ 3 ರಿಂದ 8ರವರೆಗೆ ಪಂಜಾಬಿನ ಚಂಡೀಗಢದಲ್ಲಿ ನಡೆಯಲಿರುವ ಪಕ್ಷದ 15ನೇ ಮಹಾಧಿವೇಶನಕ್ಕೆ ಮುನ್ನಡೆಯಲಿದ್ದೇವೆ.

ಈ ಸಂದರ್ಭದಲ್ಲಿ ರಾಜ್ಯ ಸಮ್ಮೇಳನದಲ್ಲಿ ನಾವು ಸಾಧಿಸಿದ ಅಂಶಗಳನ್ನು, ನಾವು ಸಾಧಿಸಲು ನಮ್ಮ ಮುಂದೆ ಇರಿಸಿಕೊಂಡ ಕರ್ತವ್ಯಗಳನ್ನು ಹಾಗೂ 15ನೇ ಮಹಾಧಿವೇಶನವು ಸಾಧಿಸಲು ತನ್ನ ಮುಂದೆ ಇರಿಸಿಕೊಂಡ ಗುರಿಗಳನ್ನು ತಿಳಿದುಕೊಳ್ಳುವುದು ಅತ್ಯವಶ್ಯಕವಾಗಿದೆ.

ಪಿ.ರಾಮಚಂದ್ರರಾವ್

ಕಾಂ. ಪಿ.ರಾಮಚಂದ್ರನ್ ರಾಜ್ಯ ಸಮ್ಮೇಳನವನ್ನು ಉದ್ಘಾಟಿಸುತ್ತಾ "ನಮ್ಮ ದೇಶದ ರಾಜಕೀಯ ಸ್ಥಿತ್ಯಂತರಕ್ಕೆ ಕರ್ನಾಟಕದಲ್ಲಿ ಇತ್ತೀಚೆಗೆ ನಡೆದ ಸಾರ್ವತ್ರಿಕ ಚುನಾವಣೆಯು ಮಹತ್ವದ ಕೊಡುಗೆ ಕೊಟ್ಟಿದೆ. ಕರ್ನಾಟಕ ರಾಜ್ಯ ಮೊನ್ನೆ ಮೊನ್ನೆಯ ತನಕ ಕಾಂಗ್ರೆಸ್(ಐ) ಪಕ್ಷದ ಆಧಾರ ನೆಲೆಯಾಗಿತ್ತು. ಈಗ ಅದು ಕಾಂಗ್ರೆಸ್(ಐ) ಪಕ್ಷದ ತೀವ್ರ ಅವನತಿಯನ್ನು ಸೂಚಿಸುವ ರಾಜ್ಯವಾಗಿದೆ. ರಾಜ್ಯದ ಜನತೆ ಕಾಂಗ್ರೆಸ್(ಐ) ಅನುಸರಿಸುತ್ತಿರುವ ಆರ್ಥಿಕ ಧೋರಣೆಗಳಿಂದಲೂ, ಅದು ಅನುಸರಿಸುತ್ತಾ ಬಂದ ಕೋಮುವಾದಿ ಶಕ್ತಿಗಳ ಜತೆ ಚೌಕಾಶಿ ಮಾಡಿಕೊಡಿಕೊಳ್ಳುವ ನೀತಿಗಳಿಂದಲೂ ಬೇಸತ್ತು ಆ ಪಕ್ಷಕ್ಕೆ ಆಘಾತವುಂಟುಮಾಡುವ ರೀತಿಯಲ್ಲಿ ಸೋಲಿಸಿದೆ" ಎಂದು ರಾಜ್ಯದ ರಾಜಕೀಯ ಪರಿಸ್ಥಿತಿಯನ್ನು ವಿಶ್ಲೇಷಿಸಿದರು. ಮುಂದುವರಿಸುತ್ತಾ ಈ ಕಾಂಗ್ರೆಸ್(ಐ) ಸೋಲಿಗೆ ಕಾರಣವಾದ ಜನಜಾಗೃತಿಯನ್ನು ಎಬ್ಬಿಸುವು ದರಲ್ಲಿ ಯಶಸ್ವಿಯಾದ ರಾಜ್ಯದ ಸಿಪಿಐ(ಎಂ) ಪಕ್ಷವು ರಾಜ್ಯದಲ್ಲಿ ವಿಸ್ತೃತ ಪ್ರಮಾಣದಲ್ಲಿ ಜನಪರ ಪ್ರಶ್ನೆಗಳನ್ನು ಎತ್ತಿಕೊಂಡು ತೀವ್ರ ಹೋರಾಟಗಳಲ್ಲಿ ಜನತೆಯ ವಿವಿಧ ವಿಭಾಗಗಳು ನಿರತರಾಗುವುದಕ್ಕೆ ಅವರನ್ನು ಅಣಿನೆರೆಸಿ ನೇತೃತ್ವ ಕೊಡಲು ಮುಂದಾಗಬೇಕೆಂದು ರಾಜ್ಯದ ಪಕ್ಷದ ಎಲ್ಲಾ ಘಟಕಗಳಿಗೆ ಕರೆಯಿತ್ತರು.

ಕಾಂ. ಪಿ.ರಾಮಚಂದ್ರನ್ ರಾಜ್ಯ ಸಮ್ಮೇಳನದ ಕಾರ್ಯಕಲಾಪಗಳನ್ನು ಮುಕ್ತಾಯಗೊಳಿಸುತ್ತಾ "ರಾಜ್ಯದಲ್ಲಿ ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಾರ್ಟಿಯನ್ನು ತೀವ್ರವಾಗಿ ಒಂದು ಬಲಿಷ್ಠ ಶಕ್ತಿಯಾಗಿ ಕಟ್ಟಿ ಬೆಳೆಸುವುದು ಇಂದು ನಮ್ಮ ಮುಂದಿನ ಚಾರಿತ್ರಿಕ ಕರ್ತವ್ಯವಾಗಿದೆ" ಎಂದು ಸಾರಿದರು.

ಇದನ್ನು ಸಾಧಿಸಲು ಬೇಕಾದ ಕರ್ತವ್ಯ ನಿಷ್ಠರತೆಯ ಅರಿವು ನಮ್ಮ ಹತ್ತಾರು ಸಾವಿರ ಕಾರ್ಯಕರ್ತರಲ್ಲಿ ಉಂಟಾಗಬೇಕಾಗಿದೆ. ಈ ಚಾರಿತ್ರಿಕ ಕರ್ತವ್ಯವನ್ನು ಕೈಗೂಡಿಸಲು ಅಗತ್ಯವಾದ ಮನೋದಾರ್ಢ್ಯತೆ, ತ್ಯಾಗಶೀಲತೆ ಮತ್ತು ರಾಜಕೀಯ ಬುದ್ಧಿವಂತಿಕೆಯನ್ನು ನಮ್ಮ ಕಾರ್ಯ

ಪುಟ 6 ನೋಡಿ

ಕಲ್ಬುರ್ಗಿ: ವೇಗವಾಗಿ ಬದಲಾಗುತ್ತಿರುವ ದೇಶದ ರಾಜಕೀಯದಲ್ಲಿ ಸಿಪಿಐ(ಎಂ) ಪ್ರಮುಖ ಪಾತ್ರ ನಿರ್ವಹಿಸಬೇಕಾದ ಪರಿಸ್ಥಿತಿ ಮೂಡಿಬರುತ್ತಿದ್ದು ಪಕ್ಷ ಅಂತಹ ಸವಾಲನ್ನು ಎದುರಿಸಲು ಸಜ್ಜಾಗಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಕಾಂ. ಪಿ. ರಾಮಚಂದ್ರನ್ ಹೇಳಿದ್ದಾರೆ. ಅವರು ಪಕ್ಷದ 15ನೇ ರಾಜ್ಯ ಸಮ್ಮೇಳನದ ಅಂಗವಾಗಿ ಗುಲ್ಬರ್ಗಾ ಸುಪರ್ ಮಾರ್ಕೆಟ್ ಪ್ರದೇಶದಲ್ಲಿ ಫೆ. 24 ರಂದು ಸಂಜೆ ಏರ್ಪಡಿಸಲಾಗಿದ್ದ ಬಹಿರಂಗ ಅಧಿವೇಶನದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು.

ಆಂಧ್ರ ಹಾಗೂ ಕರ್ನಾಟಕದ ಜನತೆ ಕಾಂಗ್ರೆ ಪಕ್ಷಕ್ಕೆ ಚೇತರಿಸಿಕೊಳ್ಳಲಾಗದ ಪೆಟ್ಟು ಕೊಟ್ಟಿದ್ದಾರೆ. ಮಹಾರಾಷ್ಟ್ರ, ಗುಜರಾತ್, ಬಿಹಾರ, ಒರಿಸ್ಸಾ, ರಾಜ್ಯಗಳಲ್ಲಿಯೂ ಕಾಂಗ್ರೆಗೆ ಅದೇ ಭವಿಷ್ಯ ಕಾದಿದೆ. ಇನ್ನು ಕೆಲವೇ ತಿಂಗಳುಗಳಲ್ಲಿ ಕಾಂಗ್ರೆ ಬಹುತೇಕ ರಾಜ್ಯಗಳಲ್ಲಿ ಅಧಿಕಾರ ಕಳೆದುಕೊಂಡು ಕೇಂದ್ರದಲ್ಲಿಯೂ ಅಧಿಕಾರ ಉಳಿಸಿಕೊಳ್ಳಲಾಗದ ಸ್ಥಿತಿಯನ್ನು ತಲುಪಲಿದೆ. ಆ ಪಕ್ಷದೊಳಗೆ ಉಲ್ಬಣಗೊಂಡಿರುವ ಆಂತರಿಕ ಕಚ್ಚಾಟ ಮತ್ತು ಗುಂಪುಗಾರಿಕೆಯಿಂದ ಅದು ಇಷ್ಟು ಸೊರಗಿದ್ದು ಈಗ ಅದನ್ನು ಯಾರಿಂದಲೂ ಬದುಕಿಸಲಾಗದು ಎಂದು ಕಾಂ. ಪಿ.ಆರ್.ಸಿ. ಹೇಳಿದರು.

ಕಾಂಗ್ರೆ ಪತನ ಖಚಿತವಾಗುತ್ತಿದ್ದಂತೆ ಅದರ ಲಾಭವನ್ನು ಬಿಜೆಪಿ ಪಡೆಯಲು ಹವಣಿಸುತ್ತದೆ. ಕೋಮುವಾದಿ ಶಕ್ತಿಗಳ ದುಷ್ಟ ಕನಸು ಜಾತ್ಯಾತೀತ ಮೌಲ್ಯಗಳು ಇನ್ನೂ ಪ್ರಬಲವಾಗಿರುವ ನಮ್ಮ ದೇಶದಲ್ಲಿ ನನಸಾಗುವುದು ಅಸಾಧ್ಯವಾಗಿದ್ದರೂ ಕೋಮುವಾದದ ವಿರುದ್ಧ ಪಕ್ಷದ ಹೋರಾಟ ನಿರಂತರವಾಗಿ ನಡೆಯಬೇಕಾಗಿದೆ ಎಂದು ಅವರು ಹೇಳಿದರು.

ಕಾಮ್ರೇಡ್ ಜ್ಯೋತಿಬಸು ಅವರು ಮುಂದಿನ ಪ್ರಧಾನಿಯಾಗಿ ದೇಶವು ವಿನಾಶದತ್ತ ಸಾಗುವುದನ್ನು ತಡೆಯಬೇಕೆಂದು ಕೆಲವೊಂದು ವಲಯಗಳಲ್ಲಿ ಕೇಳಿಬರುತ್ತಿರುವ ಮಾತನ್ನು ಪ್ರಸ್ತಾಪಿಸಿದ ಕಾಂ. ರಾಮಚಂದ್ರನ್ ಅವರು ಕೇಂದ್ರದಲ್ಲಿ ತಕ್ಷಣ ಸಿಪಿಐ(ಎಂ) ಅಧಿಕಾರಕ್ಕೆ ಬರುವ ಸಾಧ್ಯತೆ ಇಲ್ಲದಿದ್ದರೂ ಬದಲಾಗುತ್ತಿರುವ ರಾಜಕೀಯ ಪರಿಸ್ಥಿತಿಯಲ್ಲಿ ದೇಶದ ಜನತೆ ಹೆಚ್ಚೆಚ್ಚು ನಮ್ಮ ಪಕ್ಷದ ಕಡೆ ನೋಡಲಿದೆ ಎಂದು ಹೇಳಿದರು.

ಎಲ್ಲಾ ರಾಜಕೀಯ ಪಕ್ಷಗಳಲ್ಲಿ ಶೋಷಿತರ ಧ್ವನಿಯಾಗಿರುವ ಸಿಪಿಐ(ಎಂ) ಮಾತ್ರ ಒಂದು ಬೆಳೆಯುತ್ತಿರುವ ಪಕ್ಷವಾಗಿದ್ದು ಮುಂಬರುವ ದಿನಗಳಲ್ಲಿ ಜನತೆಯ ಹಿತಗಳಿಗೆ ರಕ್ಷಣೆ ಒದಗಿಸುವ ವಿಚಾರದಲ್ಲಿ ನಮ್ಮ ಪಕ್ಷವು ಭಾರೀ ಜವಾಬ್ದಾರಿಯನ್ನು ನಿರ್ವಹಿಸಬೇಕಾಗುವದು ಎಂದು ಕಾಮ್ರೇಡ್ ರಾಮಚಂದ್ರನ್ ಹೇಳಿದರು.



ಪ್ರಜಾಸತ್ತಾತ್ಮಕ ನೀತಿಗೆ ಬದ್ಧವಾಗಿರುವ ಏಕೈಕ ಪಕ್ಷ

ಸಿಪಿಐ(ಎಂ) ರಾಜ್ಯ ಸಭಾ ಸದಸ್ಯರೂ ಡಿವೈಎಫ್‌ಐ ಅಖಿಲ ಭಾರತ ಕಾರ್ಯದರ್ಶಿಯೂ ಆಗಿರುವ ಕಾಂ. ಮಹಮ್ಮದ್ ಸಲೀಂ ಅವರು ಮಾತನಾಡಿ 3 ವರ್ಷಕ್ಕೊಮ್ಮೆ ಪ್ರಾಥಮಿಕ ಘಟಕಗಳಿಂದ ಆರಂಭಿಸಿ ಕೇಂದ್ರ ಸಮಿತಿಯವರೆಗೆ ಸಮ್ಮೇಳನಗಳನ್ನು ನಡೆಸಿ, ಚಟುವಟಿಕೆಗಳ ವಿಮರ್ಶೆ ಮಾಡಿ ಮುಂದಿನ ಅವಧಿಗೆ ಕಾರ್ಯಕ್ರಮಗಳನ್ನು ರೂಪಿಸುವ ಹಾಗೂ ಎಲ್ಲಾ ಹಂತಗಳ ಮುಖಂಡತ್ವವನ್ನು ಚುನಾಯಿಸುವ ಪ್ರಜಾಸತ್ತಾತ್ಮಕ ಪದ್ಧತಿ ಕೇವಲ ಸಿಪಿಐ(ಎಂ) ಪಕ್ಷದಲ್ಲಿ ಮಾತ್ರ ಕಾಣಬಹುದಾಗಿದೆ ಎಂದರು. ಸಿಪಿಐ(ಎಂ) ಪಕ್ಷ ಉಳಿದ ಪಕ್ಷಗಳಂತೆ ಚುನಾವಣೆಯ ಸಮಯದಲ್ಲಷ್ಟೇ ಜನರ ಬಳಿ ಬರುವ ಪಕ್ಷವಲ್ಲ. ಸಿಪಿಎಂ ಸಮಾಜ ಬದಲಾವಣೆಯ ಗುರಿ ಹೊಂದಿದೆ. ಈ ಗುರಿ ಸಾಧಿಸಲು ಜನತೆಯ ಸಂಘಟಿತ ಹೋರಾಟ ಅವಶ್ಯವಿದೆ. ಆದ್ದರಿಂದ ಸಿಪಿಐ(ಎಂ) ಜನತೆಯ ಪ್ರಶ್ನೆಗಳನ್ನು ಎತ್ತಿಕೊಂಡು ಜನಸಂಘಟನೆಯ ಕೆಲಸದಲ್ಲಿ ತೊಡಗಿದೆ. ಆದ್ದರಿಂದ ಕಾಲಕಾಲಕ್ಕೆ ತನ್ನ ಚಟುವಟಿಕೆಗಳನ್ನು ವಿಮರ್ಶೆಗೆ ಒಳಪಡಿಸುವುದು ನಮ್ಮ ಪಕ್ಷಕ್ಕೆ ಅವಶ್ಯವಾಗುತ್ತದೆ ಎಂದರು.

ಲಕ್ಷ್ಸನಂತಹ ಸಾಬೂನಿಗೆ ಮಾರುಕಟ್ಟೆ

ಪುಟ 6 ನೋಡಿ

ಬಹಿರಂಗ ಸಭೆಗೆ ಮೊದಲು ಹೊರಡಿಸಲಾಗಿದ್ದ ಬೃಹತ್ ರ್‍ಯಾಲಿಯು ಗುಲ್ಬರ್ಗಾ ನಗರದ ಎಲ್ಲಾ ಮುಖ್ಯ ಬೀದಿಗಳಲ್ಲಿ ಸಂಚರಿಸಿ ನಗರವಾಸಿಗಳ ಗಮನ ಸೆಳೆಯಿತು. ಶಹಬಾದ್‌ನ ಎಬಿಎಲ್ ಕಾರ್ಖಾನೆಯ ಕಾರ್ಮಿಕರು, ಮಳಖೇಡದ ರಾಜಶ್ರೀ ಸಿಮೆಂಟ್ ಕಾರ್ಖಾನೆಯ ಕಾರ್ಮಿಕರು ಮತ್ತು ಆಳಂದ ತಾಲೂಕಿನ ಯುವ ರೈತರು ಕೆಂಪು ಸಮವಸ್ತ್ರಧಾರಿಗಳಾಗಿ ಮೆರವಣಿಗೆಯ ಮುಂಚೂಣಿಯಲ್ಲಿದ್ದರು. ಚಿಕ್ಕ ಮಕ್ಕಳ ಲೇಜಿಂ ಕುಣಿತ, ಡೊಳ್ಳು ಮತ್ತಿತರ ಗ್ರಾಮೀಣ ವಾದ್ಯಗಳು ಮೆರವಣಿಗೆ ವಿಶೇಷ ಶೋಭೆಯನ್ನುಂಟು ಮಾಡಿದವು.





15ನೇ ರಾಜ್ಯ ಸಮ್ಮೇಳನದ ನಿರ್ಣಯಗಳು

ಇದೇ ಫೆಬ್ರವರಿ 24-27ರವರೆಗೆ ಗುಲ್ಬರ್ಗಾದಲ್ಲಿ ನಡೆದ 15ನೇ ರಾಜ್ಯ ಸಮ್ಮೇಳನ 30 ನಿರ್ಣಯಗಳನ್ನು ಅಂಗೀಕರಿಸಿತು. ಈ ನಿರ್ಣಯಗಳ ಸಾರಾಂಶ ಈ ಪುಟ ಹಾಗೂ 7ನೇ ಪುಟದಲ್ಲಿದೆ. ಇನ್ನು 3 ನಿರ್ಣಯಗಳು ಪುಟ 4 ಹಾಗೂ 8ರಲ್ಲಿ ಇವೆ.

ರಾಜ್ಯಾದ್ಯಂತ ನೆನೆಗುದಿಗೆ ಬಿದ್ದಿರುವ ನೀರಾವರಿ ಯೋಜನೆಗಳಿಗಾಗಿ ವ್ಯಾಪಕ ಹೋರಾಟ

ಒಂದೆಡೆ ರಾಜ್ಯದ ಮುಕ್ಕಾಲು ಭಾಗ ಸಕಾಲಿಕ ಮಳೆಯ ಅಭಾವದಿಂದ ಸತತ ಬರಗಾಲದ ಬವಣೆಗೆ ತುತ್ತಾಗುತ್ತಿದ್ದರೆ ಇನ್ನೊಂದೆಡೆ ರಾಜ್ಯದಲ್ಲಿ ಹರಿಯುತ್ತಿರುವ ದೊಡ್ಡ ನದಿಗಳ, ಅವುಗಳ ಉಪನದಿಗಳ ನೀರಿನ ಲಾಭ ರಾಜ್ಯದ ರೈತರಿಗೆ ಲಭ್ಯವಾಗುತ್ತಿಲ್ಲ. ಚುನಾವಣೆಗಳು ಬಂದಾಗ ಮೊಸಳೆ ಕಣ್ಣೀರು ಹರಿಸುವುದು ಬಿಟ್ಟರೆ ಕಾಂಗ್ರೆ ಪಕ್ಷವಾಗಲಿ, 7 ವರ್ಷ ಅಧಿಕಾರದಲ್ಲಿದ್ದ ಜನತಾ ಸರ್ಕಾರ ಕೂಡಾ ನೀರಾವರಿ ಯೋಜನೆಗಳತ್ತ ಗಮನಹರಿಸಲಿಲ್ಲ. ಈಗ ಬಚಾವತ್ ಅವಾರ್ಡ್ ಪ್ರಕಾರ ರಾಜ್ಯಕ್ಕೆ ಸಲ್ಲತಕ್ಕ ನೀರನ್ನು 2000 ಇಸವಿಯೊಳಗೆ ಬಳಸಿಕೊಳ್ಳಬೇಕಾದೀತೆಂಬ ಅಂಜಿಕೆಯಿಂದ ಮೊಯಿಲಿ ಸರ್ಕಾರ, ಈಗಿನ ದೇವೇಗೌಡರ ಸರ್ಕಾರ ಮಾತನಾಡಲಾರಂಭಿಸಿದೆ. ಆದರೆ ಸಕಾಲದಲ್ಲಿ ರಾಜ್ಯದ ರೈತರಿಗೆ ನೀರಿನ ಉಪಯೋಗ ಸಿಗುತ್ತದೆಂಬ ಭರವಸೆ ಇಲ್ಲವಾಗಿದೆ. ಏಕೆಂದರೆ ಅವುಗಳಿಗೆ ಬೇಕಾದ ಸಂಪನ್ಮೂಲ ಕ್ರೋಢೀಕರಣ ಹೇಗೆ ಎಂಬುದರ ಕುರಿತು ಇವು ಏನೂ ಹೇಳಿಲ್ಲ.

ಕಪ್ಪು ಹಣ ಹೊರತೆಗೆದು, ಶ್ರೀಮಂತರ ಮೇಲೆ ನೇರ ಕರ ಹೇರಿ, ಲಂಚಗುಳಿತನ ನಿಲ್ಲಿಸಿ ಕೇಂದ್ರ ಸಂಗ್ರಹಿಸುವ ಹಣದಲ್ಲಿ ಶೇ. 75ನ್ನು ಪಡೆದು, ನಾನಾ ಪ್ರದೇಶದಲ್ಲಿ ಕಿಸಾನ್ ಪತ್ರ ಮುಂತಾದವುಗಳಲ್ಲಿ ಸಂಗ್ರಹವಾಗುವ ಹಣವನ್ನು ಒದಗಿಸಿದರೆ, ರೈತರಿಂದ ಬ್ಯಾಂಕ್‌ಗಳ ಮೂಲಕ ಕರಾರುಗಳಿಲ್ಲದೆ ಹಣ ಸಂಗ್ರಹಿಸುವುದು ಎಂದು ಸಮ್ಮೇಳನ ಹೇಳಿದೆ.

ರಾಜ್ಯಾದ್ಯಂತ ನೆನೆಗುದಿಗೆ ಬಿದ್ದಿರುವ ಎಲ್ಲ ನೀರಾವರಿ ಯೋಜನೆಗಳಿಗಾಗಿ ವ್ಯಾಪಕವಾದ ಹೋರಾಟದ ಕಾರ್ಯಕ್ರಮವನ್ನು ರೂಪಿಸಬೇಕೆಂದು ಸಮ್ಮೇಳನ ರಾಜ್ಯ ಸಮಿತಿಗೆ ಸೂಚನೆ ನೀಡಿದೆ.

ಮಂಡನೆ: ಭೀಮಸಿ ಕಲಾದಗಿ ಅನುಮೋದನೆ: ವಿ.ಪಿ.ಕುಲಕರ್ಣಿ

ಬೆಲೆಯೇರಿಕೆಯ ವಿರುದ್ಧ ನಿರಂತರ ಹೋರಾಟಕ್ಕೆ ಕರೆ

ಕಾಂಗ್ರೆ ಕೇಂದ್ರ ಸರ್ಕಾರದಿಂದಾಗಿ ಒಂದೇ ಸಮನೆ ಬೆಲೆಗಳು ಏರುತ್ತಿವೆ, ಅವನ್ನು ನಿಯಂತ್ರಣ ಮಾಡುವ ಶಕ್ತಿ ಕೂಡಾ ಆ ಸರಕಾರಕ್ಕೆ ಇಲ್ಲದಂತಹ ಪರಿಸ್ಥಿತಿಯಲ್ಲಿ ಜನ ಸಾಮಾನ್ಯ ಕೊಳ್ಳುವ ಶಕ್ತಿ ದಿನೇ ದಿನೇ ಕಡಿಮೆಯಾಗುತ್ತಿದೆ. ಆದರೂ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಉತ್ತಮ ಪಡಿಸುವ ಬದಲು ತೆಗೆದು ಹಾಕುವ ಧೋರಣೆ, ಆಹಾರ ಸಬ್ಸಿಡಿ ಪಡಿತರ ಧೋರಣೆಯೂ ಕಾಣುತ್ತದೆ. ಈಗ ಅಧಿಕಾರಕ್ಕೆ ಬಂದಿರುವ ಜನತಾದಳ ಇಂತಹ ಜನ-ವಿರೋಧಿ ನೀತಿಗಳನ್ನು ವಿರೋಧಿಸಿ ಜನಪರ ಜನಸಾಮಾನ್ಯನಿಗೆ ನ್ಯಾಯವಾದ ಕಡಿಮೆ ಬೆಲೆಯಲ್ಲಿ ಬಡ ಜನತೆಗೆ ಸಿಗುವಂತೆ ಕ್ರಮಕೈಗೊಳ್ಳಬೇಕು ಎಂದು ಸಮ್ಮೇಳನ ಆಗ್ರಹಿಸಿದೆ.

ಜನಸಾಮಾನ್ಯರ ಹಾಗೂ ಮಧ್ಯಮ ವರ್ಗದ ಜನರನ್ನು ತೀವ್ರವಾಗಿ ಬಾಧಿಸುವ ಬೆಲೆಯೇರಿಕೆಯ ವಿರುದ್ಧ ಸ್ಥಳೀಯವಾಗಿ ವಿವಿಧ ಜನ ವಿಭಾಗಗಳನ್ನು ಒಗ್ಗೂಡಿಸಿ ನಿರಂತರ ಹೋರಾಟಗಳನ್ನು ನಡೆಸಬೇಕು ಎಂದು ಸಮ್ಮೇಳನ ಪಕ್ಷದ ಎಲ್ಲಾ ಪ್ರಾಥಮಿಕ ಘಟಕಗಳಿಗೆ ಕರೆ ನೀಡಿದೆ.

ವಿಜಯನಗರ ಉಕ್ಕಿನ ಕಾರ್ಖಾನೆ: 60 ಸಾವಿರ ಉದ್ಯೋಗಾವಕಾಶಗಳ ಬದಲು ಕೇವಲ ಎರಡು ಸಾವಿರ ಉದ್ಯೋಗಗಳು!

25 ವರ್ಷಗಳ ಹಿಂದೆ ಆಗಿನ ಪ್ರಧಾನಿ ಇಂದಿರಾಗಾಂಧಿ ಸಾರ್ವಜನಿಕ ವಲಯದಲ್ಲಿ 4000 ಟನ್ ಉತ್ಪಾದನಾ ಸಾಮರ್ಥ್ಯದ ಉಕ್ಕು ಕಾರ್ಖಾನೆಗೆ ಅಡಿಗಲ್ಲು ಹಾಕಿದ್ದರೂ ಇವನ್ನು ಜಾರಿಗೆ ತರಲು ಸಿಪಿಐ(ಎಂ), ಡಿ.ವೈ.ಎಫ್.ಐ. ಮತ್ತಿತರ ಸಂಘಟನೆಗಳು ಸತತ ಹೋರಾಟ ನಡೆಸಬೇಕಾಯಿತು. ಆದರೆ ಇತ್ತೀಚೆಗೆ ರಾಜ್ಯ ಸರಕಾರ ಜಿಂದಾಲ್ ಕಂಪೆನಿಯೊಂದಿಗೆ ಜಂಟಿಯಾಗಿ ಆರಂಭಿಸಿರುವ ಉಕ್ಕು ಘಟಕ ಕೇವಲ 400 ಟನ್ ಉತ್ಪಾದನಾ ಸಾಮರ್ಥ್ಯದ ಮಧ್ಯಮ ಕೈಗಾರಿಕೆಯಾಗಿ ಬರುತ್ತದೆ. 60 ಸಾವಿರ ಉದ್ಯೋಗಾವಕಾಶಗಳ ಬದಲು ಕೇವಲ 2000 ಉದ್ಯೋಗಾವಕಾಶ ಮಾತ್ರ ನಿರ್ಮಿಸಲಿದೆ. ಇಷ್ಟೇ ಅಲ್ಲ ಕುದುರೆ ಸ್ವಾಮಿ ಗಣಿಗಳನ್ನು ಈ ಕಂಪೆನಿಗಳಿಗೆ ಹಸ್ತಾಂತರಿಸಲಾಗುವುದು ಎಂದು ತಿಳಿದು ಬಂದಿದೆ. ಈ ವಾಸ್ತವವಾಗಿ ಈ ಉತ್ತಮ ಕಬ್ಬಿಣದ ಅದುರಿನ ಅಗತ್ಯವಿಲ್ಲ, ಅದನ್ನು ಜಿಂದಾಲ್ ಕಂಪೆನಿ ರಫ್ತು ಮಾಡಿ ದುರುಪಯೋಗ ಪಡಿಸಿಕೊಳ್ಳಬಹುದೆಂಬ ಆತಂಕವಿದೆ. ಆದ್ದರಿಂದ ರಾಜ್ಯ ಸರಕಾರ ಜಿಂದಾಲ್ ಕಂಪೆನಿಯೊಂದಿಗೆ ಮಾಡಿಕೊಂಡ ಶರತ್ತುಗಳನ್ನು ಬಹಿರಂಗ ಪಡಿಸಬೇಕೆಂದು ಸಮ್ಮೇಳನ ಆಗ್ರಹಪಡಿಸಿದೆ.

ಸಾರ್ವಜನಿಕ ಕ್ಷೇತ್ರದಲ್ಲಿ ಕಾರ್ಖಾನೆಯನ್ನು ಸ್ಥಾಪಿಸುವುದಾಗಿ ಹೇಳಿ 25 ವರ್ಷಗಳ ಹಿಂದೆ ತೋರಣಗಲ್ಲು ಸುತ್ತಮುತ್ತದ ಗ್ರಾಮಗಳ ರೈತರ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿತ್ತು, ಈಗ ಆ ರೀತಿ ಸ್ವಾಧೀನ ಪಡಿಸಿಕೊಂಡ ಉದ್ದೇಶಕ್ಕೆ ಚ್ಯುತಿ ಬಂದಿರುವುದರಿಂದ, ಖಾಸಗಿ ಬಂಡವಾಳಗಾರರ ಲಾಭಕ್ಕಾಗಿ ಈ ಭೂಮಿ ಬಳಕೆಯಾಗುತ್ತದಾದ್ದರಿಂದ ರೈತರಿಗೆ ಈಗಿನ ಮಾರುಕಟ್ಟೆಯ ಬೆಲೆಗೆ ತಕ್ಕಂತೆ ಪರಿಹಾರ ನೀಡುವಂತಾಗಬೇಕು, ಹಿಂದೆ ಆಶ್ವಾಸನೆ ನೀಡಿದಂತೆ ಭೂಮಿ ಕಳೆದುಕೊಂಡ ಕುಟುಂಬದಲ್ಲಿ ಒಬ್ಬರಿಗಾದರೂ ಉದ್ಯೋಗ ನೀಡಬೇಕು ಎಂದು ಸಮ್ಮೇಳನ ಒತ್ತಾಯಿಸುತ್ತಾ ಈ ಬಗ್ಗೆ ರಾಜ್ಯ ಸರ್ಕಾರ ಕೂಡಲೇ ಮಧ್ಯಪ್ರವೇಶ ಮಾಡಬೇಕು ಎಂದಿದೆ. ಈ ಪ್ರದೇಶದಲ್ಲಿ ಔದ್ಯಮಿಕ ಬೆಳವಣಿಗೆಯ ಹಿನ್ನೆಲೆಯಲ್ಲಿ ನಗರಾಭಿವೃದ್ಧಿಗಾಗಿ ಯೋಜನೆಯನ್ನು ರೂಪಿಸಿ ಕ್ರಮಬದ್ಧ ಗಮನ ಕೊಡಬೇಕೆಂದು ಒತ್ತಾಯಿಸಿದೆ.

ಮಂಡನೆ: ಎಸ್.ವೈ. ಗುರುಶಾಂತ್ ಅನುಮೋದನೆ: ಗೋಪಾಲಕೃಷ್ಣ

ಸಮಗ್ರ ಶಿಕ್ಷಣ ಮಸೂದೆ ಚರ್ಚೆಗೆ ಕೂಡಲೇ ಸಭೆ ಕರೆಯಿರಿ

ಹಿಂದೆ ಜನತಾ ಪಕ್ಷ ಅಧಿಕಾರದಲ್ಲಿದ್ದಾಗ ಒಂದು ಶಿಕ್ಷಣ ಮಸೂದೆಯನ್ನು ತರಲು ಪ್ರಸ್ತಾಪಿಸಿತ್ತು. ಆಗ ಅದನ್ನು ಸಿಪಿಐ(ಎಂ) ಸ್ವಾಗತಿಸಿತು. ಈಗ ಅದನ್ನು ತಿದ್ದುಪಡಿಗಳೊಂದಿಗೆ ಜಾರಿಗೆ ತರಲು ಜನತಾದಳ ಸರ್ಕಾರ ನಿರ್ಧರಿಸಿದೆ. ಕೇಂದ್ರ ಸರ್ಕಾರದ ಹೊಸ ಆರ್ಥಿಕ ನೀತಿಯ ಭಾಗವಾದ, ಶಿಕ್ಷಣವನ್ನು ಸಾಮಾನ್ಯ ಜನರಿಂದ ಕಿತ್ತುಕೊಳ್ಳುವ, ಉನ್ನತ ಶಿಕ್ಷಣ ಹಾಗೂ ಪ್ರಾಥಮಿಕ ಶಿಕ್ಷಣ ಪರಸ್ಪರ ವಿರೋಧಿಗಳೆಂಬ ನಿಲುಮೆಯಲ್ಲಿ ಅವುಗಳಿಗೆ ಪ್ರಾಮುಖ್ಯ ಕಡಿಮೆ ಮಾಡುವ ಹೊಸ ಶಿಕ್ಷಣ ನೀತಿಯ ಹಿನ್ನೆಲೆಯಲ್ಲಿ ಈ ಮಸೂದೆ ತಿದ್ದುಪಡಿಯಾಗುವ ಸೂಚನೆಯಿರುವುದರಿಂದ ಇದರ ಬಗ್ಗೆ ಅನುಮಾನವಿದೆ.

ಶಿಕ್ಷಣದ ಮಾರಾಟಕ್ಕೆ ವಿಶ್ವದಲ್ಲೇ ಕುಪ್ರಸಿದ್ಧವಾಗಿರುವ ಕರ್ನಾಟಕದಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಹಣವನ್ನು ಮೀಸಲಿಡುವ, ಖಾಸಗೀಕರಣವನ್ನು ತಡೆಗಟ್ಟಬೇಕು, ಸಾರ್ವತ್ರಿಕ ಕಡ್ಡಾಯ ಶಿಕ್ಷಣವನ್ನು ಜಾರಿಗೊಳಿಸಬೇಕು, ಹಾಸ್ಟೆಲ್ ಗಳ ಸೌಲಭ್ಯವನ್ನು ಹೆಚ್ಚಿಸಬೇಕು ಹಾಗೂ ಉಚ್ಚ ಶಿಕ್ಷಣವನ್ನು ಸ್ವಂತ ಹಣದಲ್ಲೇ ಪಡೆಯಬೇಕೆಂಬ ನೀತಿಯನ್ನು ಕೈಬಿಡಬೇಕು. ತರಬೇಕೆಂದಿರುವ ಸಮಗ್ರ ಶಿಕ್ಷಣ ಮಸೂದೆಯ ಬಗ್ಗೆ ಸರ್ವ ಪಕ್ಷಗಳ, ವಿದ್ಯಾರ್ಥಿ-ಅಧ್ಯಾಪಕರ ಸಂಘಟನೆಗಳ ಜೊತೆ ಚರ್ಚಿಸದೆ ಜಾರಿಗೆ ತರಬಾರದು, ಈ ಕೂಡಲೇ ಸಭೆ ಕರೆಯಬೇಕು ಎಂದು ಸಮ್ಮೇಳನ ಒತ್ತಾಯಿಸಿದೆ.

ಮಂಡನೆ: ಪ್ರಕಾಶ್ ಅನುಮೋದನೆ: ಚಂದ್ರಪ್ಪ ಹೊಸ್ಕೆರಾ

ರೈಲು ಮಾರ್ಗಗಳು

ರೈಲು ಮಾರ್ಗಗಳು ಬಹಳ ಕಮ್ಮಿಯಿರುವ ರಾಜ್ಯ ಕರ್ನಾಟಕ ಆದ್ದರಿಂದ ರಾಜ್ಯದಲ್ಲಿ ಹಲವಾರು ರೈಲು ಮಾರ್ಗಗಳನ್ನು ಕೈಗೆತ್ತಿಕೊಳ್ಳಬೇಕಾಗಿದೆ. ರೈಲು ಮಾರ್ಗಗಳ ಗೇಜು ಪರಿವರ್ತನೆಯ ಕೆಲಸವನ್ನು ವಿಳಂಬ ಮಾಡದೆ ಮುಗಿಸಬೇಕೆಂದು ಸಮ್ಮೇಳನ ಒತ್ತಾಯಿಸಿದೆ.

ಹುಬ್ಬಳ್ಳಿಯಲ್ಲಿರುವ ಒಂದು ಶತಮಾನದಷ್ಟು ಹಳೆಯದಾದ ರೈಲ್ವೇ ಕಾರ್ಯಾಗಾರವನ್ನು ಮುಚ್ಚಬಾರದೆಂದು ಸಾವಿರಾರು ಕಾರ್ಮಿಕ ಕುಟುಂಬಗಳನ್ನು ಬದುಕಿಸುತ್ತಿರುವ ಈ ಕಾರ್ಯಾಗಾರವನ್ನು ಬ್ರಾಡ್ ಗೇಜ್ ಕಾರ್ಯಾಗಾರವಾಗಿ ಅಭಿವೃದ್ಧಿ ಪಡಿಸಬೇಕೆಂದು ಸಮ್ಮೇಳನ ಒತ್ತಾಯಿಸಿದೆ.

ಮಂಡನೆ: ಡಿ.ಜಿ. ಗೊಂದ್‌ಕರ್ ಅನುಮೋದನೆ: ಶಿವಶಂಕರ್

ಕೌಟುಂಬಿಕ ನ್ಯಾಯಾಲಯಗಳು: ಸ್ವಾಗತಾರ್ಹ ಹೆಜ್ಜೆ ಸ್ಪಷ್ಟ ಹೆಜ್ಜೆಯಾಗಲಿ

ವರ್ಗವಿಭಜಿತ ಸಮಾಜದಲ್ಲಿ ತೀವ್ರ ಶೋಷಣೆಗೆ ಒಳಗಾಗಿರುವ ಮಹಿಳೆ ಕೌಟುಂಬಿಕ ಕಿರುಕುಳಗಳನ್ನು ಗಣನೀಯ ಸಂಖ್ಯೆಯಲ್ಲಿ ಎದುರಿಸಬೇಕಾಗುತ್ತಿದೆ. ಇದರ ಪರಿಹಾರಕ್ಕಾಗಿ ಕೌಟುಂಬಿಕ ನ್ಯಾಯಾಲಯಗಳ ಸ್ಥಾಪನೆ ಸ್ವಾಗತಾರ್ಹ ಹೆಜ್ಜೆ, ಆದರೆ ಇಟ್ಟ ಹೆಜ್ಜೆ ಸ್ಪಷ್ಟ ಹೆಜ್ಜೆಯಾಗದಿರುವ ದೋಷ ನಿವಾರಣೆ ಮಾಡಲು ಕೆಲವು ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಇಂತಹ ನ್ಯಾಯಾಲಯಗಳ ಸ್ಥಾಪನೆ, ಅವುಗಳ ಪರಿಣಾಮಕಾರಿ ಕೆಲಸ, 15 ದಿನಗಳಿಗೊಮ್ಮೆ ತಾಲ್ಲೂಕು ಕೇಂದ್ರಗಳಲ್ಲೂ ಈ ನ್ಯಾಯಾಲಯಗಳ ಕಲಾಪಗಳು, ನಿಗದಿತ ಅವಧಿ ಯೊಳಗೆ ಪ್ರಕರಣಗಳ ಇತ್ಯರ್ಥಕ್ಕೆ ತಕ್ಷಣ ನ್ಯಾಯಾಧೀಶರ ನೇಮಕ-ಈ ತುರ್ತಿನ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಮ್ಮೇಳನ ಒತ್ತಾಯಿಸಿದೆ.

ಮಂಡನೆ: ವಿಮಲಾ ಅನುಮೋದನೆ: ಗೋಪಾಲಗೌಡ

ರಾಜ್ಯದಲ್ಲಿ ಮಹಿಳಾ ಆಯೋಗ

ಮಹಿಳೆಯರ ಮೇಲೆ ದೌರ್ಜನ್ಯಗಳು, ಅತ್ಯಾಚಾರಗಳು ಮೇರೆ ಮೀರಿತ್ತಿದ್ದು ಕಾನೂನುಗಳು ಪರಿಣಾಮಕಾರಿ ಫಲ ನೀಡುತ್ತಿಲ್ಲವಾದ್ದರಿಂದ, ಬಹಳಷ್ಟು ಪ್ರಕರಣಗಳು ವರದಿಯೇ ಆಗದೆ, ದಾಖಲು ಕೂಡಾ ಆಗದೆ, ದಾಖಲಾದ ಪ್ರಕರಣಗಳೂ ಇತ್ಯರ್ಥವಾಗಲು ವರ್ಷಗಟ್ಟಲೆ ಕಾಯಬೇಕಾದ ಪರಿಸ್ಥಿತಿಯಿರುವ ಹಿನ್ನೆಲೆಯಲ್ಲಿ ಶಾಸನ ಬದ್ಧ ಸ್ಥಾನಮಾನ ಪಡೆದ ಒಂದು ರಾಷ್ಟ್ರೀಯ ಮಹಿಳಾ ಆಯೋಗದ ಸ್ಥಾಪನೆಯಾಗಬೇಕೆಂಬ ಬೇಡಿಕೆಗೆ ಮನ್ನಣೆ ದೊರೆತು 1993ರಲ್ಲಿ ಆಯೋಗ ರಚನೆಯಾಯಿತು. ಆಗ ಎಲ್ಲಾ ರಾಜ್ಯಗಳಲ್ಲೂ ಇಂತಹ ಆಯೋಗ ರಚನೆಯಾಗಬೇಕೆಂಬ ಆದೇಶವೂ ಇತ್ತು. 1991ರಲ್ಲಿ ಕರ್ನಾಟಕದ ಕರಡು ಆಯೋಗದ ವರದಿ ರಚನೆಯಾಗಿದ್ದರೂ ಹಾಗೆಯೇ ಉಳಿದು ಹೋಯಿತು. ಈಗಿನ ರಾಜ್ಯ ಸರ್ಕಾರ ಅದನ್ನು ರಚಿಸುವ ಮುಂದಾಗಿರುವುದನ್ನು ಸ್ವಾಗತಿಸಿರುವ ಸಮ್ಮೇಳನ ಈ ಬಗ್ಗೆ ಮಹಿಳಾ ಸಂಘಟನೆಗಳೊಂದಿಗೆ ಚರ್ಚಿಸಬೇಕೆಂದು ಒತ್ತಾಯಿಸಿದೆ.

ಮಂಡನೆ: ಫ್ಲೋರಾ ಅನುಮೋದನೆ: ನೀಲಾ

ಮೀನುಗಾರರ ಹೋರಾಟಕ್ಕೆ ಬೆಂಬಲ

ಐ.ಎಂ.ಎಫ್.-ವಿಶ್ವ ಬ್ಯಾಂಕುಗಳಿಗೆ ತಲೆಬಾಗಿ ದೇಶವನ್ನು ಮಾರಾಟ ಮಾಡಲು ಹೊರಟ ಸರ್ಕಾರ ದೇಶದ ಸಾಗರ ಸೀಮೆಯನ್ನೂ ಮಾರಾಟ ಮಾಡಹೊರಟಿದೆ. ವಿದೇಶೀ ಹಡಗುಗಳು ಮೀನುಗಾರಿಕೆಯಲ್ಲಿ ತೊಡಗಿ ಲಕ್ಷಾಂತರ ಮೀನುಗಾರರು ನಿರುದ್ಯೋಗಿಗಳಾಗುವ ಭಯವಿದೆ. ಇದರ ವಿರುದ್ಧ ಪಶ್ಚಿಮ ಕರಾವಳಿಯುದ್ದಕ್ಕೂ ಮೀನುಗಾರರ ಸಂಘಟನೆಗಳು ಹಾಕಿರುವ ಜಂಟಿ ಹೋರಾಟದ ಕಾರ್ಯಕ್ರಮವನ್ನು ಸಮ್ಮೇಳನ ಸ್ವಾಗತಿಸಿದೆ. ಈ ಹೋರಾಟವನ್ನು ತೀವ್ರಗೊಳಿಸಬೇಕು, ಸಾಗರ ಸೀಮೆಯನ್ನು ರಕ್ಷಿಸಬೇಕು, ಮೀನುಗಾರರ ಉದ್ಯೋಗದ ಭದ್ರತೆಗೆ ಆದ್ಯತೆ ನೀಡಬೇಕು ಎಂದು ಸಮ್ಮೇಳನ ಕೇಂದ್ರ ಹಾಗೂ ರಾಜ್ಯ ಸರಕಾರಗಳನ್ನು ಒತ್ತಾಯಿಸಿದೆ.

ಮಂಡನೆ: ಬಿ. ವಿಷ್ಣು ಮೂರ್ತಿ ಅನುಮೋದನೆ: ಟಿ.ಎಸ್. ನಾಯಕ್

ಉದ್ಯೋಗಾವಕಾಶ ಹೆಚ್ಚಿಸಿ, ನಿರುದ್ಯೋಗ ಭತ್ತೆ ನೀಡಿ

ರಾಜ್ಯದ 1.75 ಕೋಟಿ ಯುವಜನರಲ್ಲಿ 9 ಲಕ್ಷ ವಿದ್ಯಾವಂತ ಯುವಜನರಿಗೆ ಕೆಲಸವಿಲ್ಲ, ಗ್ರಾಮಾಂತರ ಪ್ರದೇಶದಲ್ಲಿ ಈ ಸಂಖ್ಯೆ 20 ಲಕ್ಷ. ಜತೆಗೆ ಸರಕಾರದ ನೀತಿಗಳಿಂದಾಗಿ ಉದ್ಯೋಗವಿದ್ದರೂ ಕೆಲಸ ಕಳಕೊಂಡು ನಿರುದ್ಯೋಗಿಗಳಾಗುತ್ತಿದ್ದಾರೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಿ ಕಛೇರಿಗಳಲ್ಲಿ ಒಂದು ಲಕ್ಷ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಲ್ಲ, ಆದರೂ ಬೃಹತ್ ಕೈಗಾರಿಕಾ ಸ್ಥಾಪನೆಗಳ ಬಗ್ಗೆ ಸರ್ಕಾರ ಗಮನ ನೀಡುತ್ತಿಲ್ಲ. ಲಾಭದ ದೃಷ್ಟಿಯಿಂದಲಷ್ಟೇ ಬಹುರಾಷ್ಟ್ರೀಯ ಕಂಪೆನಿಗಳು ರಾಜ್ಯದಲ್ಲೂ ಲಗ್ಗೆ ಹಾಕುತ್ತಿದ್ದು ಇದರಿಂದ ಹೊಸ ಉದ್ಯೋಗಾವಕಾಶಗಳು ಸೃಷ್ಟಿಯಾಗುವುದಿಲ್ಲ ಮಾತ್ರವಲ್ಲ, ಇರುವ ಉದ್ಯೋಗಗಳೂ ನಾಶವಾಗುತ್ತಿವೆ. ಆದ್ದರಿಂದ ಔದ್ಯಮಿಕವಾಗಿ ಹಿಂದುಳಿದ ಪ್ರದೇಶಗಳಲ್ಲಿ ಸರಕಾರಿ ಕ್ಷೇತ್ರದಲ್ಲಿ ಬೃಹತ್ ಕೈಗಾರಿಕೆಗಳು, ನೀರಾವರಿ ಯೋಜನೆಗಳ, ಏತ ನೀರಾವರಿಯ ಜಾರಿ, ಖಾಲಿ ಹುದ್ದೆಗಳ ಭರ್ತಿ, ಕೃಷಿ ಆಧಾರಿತ ಕೈಗಾರಿಕೆ, ಗುಡಿ ಕೈಗಾರಿಕಗಳು, ಸ್ವ ಉದ್ಯೋಗಕ್ಕೆ ರಾಷ್ಟ್ರೀಕೃತ ಬ್ಯಾಂಕುಗಳ ಸಾಲ, ವಿದೇಶೀ ಮೀನುಗಾರಿಕೆಗೆ ನಿಷೇಧ. ಪಶ್ಚಿಮ ಬಂಗಾಳದಲ್ಲಾಗಿರುವಂತೆ ಪ್ರಗತಿಪರ ಭೂಸುಧಾರಣೆ ಹಾಗೂ ಉದ್ಯೋಗ ಸಿಗುವ ತನಕ ನಿರುದ್ಯೋಗ ಭತ್ಯೆ ಎಂದು ಒತ್ತಾಯಿಸಿರುವ ಸಮ್ಮೇಳನ ಇವನ್ನು ಈಡೇರಿಸಲು ಹಂತ ಹಂತಗಳ ಹೋರಾಟಗಳನ್ನು ನಡೆಸಲು ಕರೆ ನೀಡಿವೆ.

ಮಂಡನೆ: ಬಾಲಕೃಷ್ಣ ಶೆಟ್ಟಿ ಅನುಮೋದನೆ: ಕೆ. ಮಹಾಂತೇಶ

ಬಿ.ಜಿ.ಎಂ.ಎಲ್. ಮುಚ್ಚಬಾರದು

ಕರ್ನಾಟಕ್ಕೆ ಕಿರೀಟಪ್ರಾಯವಾದ ಕೋಲಾರದ ಚಿನ್ನದ ಗಣಿಗಳನ್ನು ಮುಚ್ಚುವ ಮಾತು ಮತ್ತೆ ಕೇಳಿಬರುತ್ತಿದೆ. ಇದು ಸುಮಾರು 7000 ಕುಟುಂಬಗಳನ್ನು ಬೀದಿ ಪಾಲು ಮಾಡುತ್ತದೆ. ಇದರ ವಿರುದ್ಧ ಸಿಐಟಿಯು ನೇತೃತ್ವದಲ್ಲಿ ನಡೆದ ಹೋರಾಟದಿಂದಾಗಿ ಬಿಜಿಎಂಎಲ್ ಬಗ್ಗೆ ವರದಿ ನೀಡಲು ಬಿಐಎಫ್‌ಆರ್‌ನ್ನು ಕೋರಿತು. ಬಿಐಎಫ್‌ಆರ್ ಮುಂದೆ ಎಲ್ಲಾ ಕಾರ್ಮಿಕ ಸಂಘಗಳು ಮುಚ್ಚುವ ವಿರುದ್ಧ ವಾದ ಮಂಡಿಸಲು ಸುಶೀಲಾ ಗೋಪಾಲನ್ ನೇತೃತ್ವದ ಸಂಸತ್ ಸದಸ್ಯರ ತಂಡವೂ ಅದನ್ನು ಮುಚ್ಚದಿರಲು ಶಿಫಾರಸು ಮಾಡಿತು. ಗಣಿತಜ್ಞರೂ ಬಿಜಿಎಂಎಲ್‌ನ್ನು ಲಾಭದಾಯಕವಾಗಿ ನಡೆಸಿಕೊಂಡು ಹೋಗುವ ಬಗ್ಗೆ ಸಲಹೆ-ಸೂಚನೆ ನೀಡಿದರು. ಆದರೆ ಇದುವರೆಗೆ ಸರಕಾರ ಯಾವುದೇ ಸಲಹೆಗೂ ಗಮನ ನೀಡಿಲ್ಲ, ಇತ್ತೀಚೆಗೆ ಬಾಗೇಪಲ್ಲಿಯಲ್ಲಿ ಚುನಾವಣಾ ಭಾಷಣದಲ್ಲಿ ಪ್ರಧಾನಿಗಳು ಅದನ್ನು ಮುಚ್ಚುವುದಿಲ್ಲ ಎಂದಿದ್ದರೂ ಮತ್ತೆ ಅದನ್ನು ಮುಚ್ಚುವ ಪ್ರಸ್ತಾಪ ಕೇಳಬರುತ್ತಿದೆ. ಆದ್ದರಿಂದ ಬಿಜಿಎಂಎಲ್‌ನ್ನು ಲಾಭದಾಯಕವಾಗಿ ನಡೆಸಿಕೊಂಡು ಹೋಗಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದೂ, ರಾಜ್ಯ ಸರಕಾರ ಈ ಬಗ್ಗೆ ಕೇಂದ್ರ ಸರಕಾರದ ಮೇಲೆ ಒತ್ತಡ ಹಾಕಬೇಕೆಂದೂ ಸಮ್ಮೇಳನ ಒತ್ತಾಯಿಸಿದೆ.

ಅಂಗನವಾಡಿ ನೌಕರರ ಬೇಡಿಕೆಗಳು ಈಡೇರಬೇಕು

ರಾಜ್ಯದಲ್ಲಿರುವ ಸುಮಾರು 70 ಸಾವಿರ ಅಂಗನವಾಡಿ ನೌಕರರು ಒಂದು ದೊಡ್ಡ ಶೋಷಿತ ಮಹಿಳಾ ಸಮುದಾಯ. ಅವರ ತುರ್ತಿನ ಬೇಡಿಕೆಗಳ ಬಗ್ಗೆ ಸರಕಾರ ಗಮನ ಕೊಡುತ್ತಿಲ್ಲ. ಹೊಸದಾಗಿ ಅಧಿಕಾರವಹಿಸಿಕೊಂಡ ಜನತಾದಳ ಸರಕಾರದ ಮಂತ್ರಿಗಳು ಜನವರಿ 16ರಂದು ಆರಂಭಿಸಬೇಕೆಂದಿದ್ದ ಅನಿರ್ದಿಷ್ಟ ಕಾಲದ ಮುಷ್ಕರ ನಡೆಸಬೇಡಿ ಎಂದು ಕೇಳಿ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸುವ ಆಶ್ವಾಸನೆ ನೀಡಿದರು. ಆದರೆ ಈ ನಿಟ್ಟಿನಲ್ಲಿ ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ, ಇನ್ನಷ್ಟು ವಿಳಂಬ ಮಾಡದೆ ಈ ಬೇಡಿಕೆಗಳನ್ನು ಈಡೇರಿಸಲು ಅದು ಮುಂದೆ ಬರಬೇಕೆಂದು ಸಮ್ಮೇಳನ ಒತ್ತಾಯಿಸಿದೆ.

ಮಂಡನೆ: ವರಲಕ್ಷ್ಮಿ ಅನುಮೋದನೆ: ಪ್ರಸನ್ನ ಕುಮಾರ್

ಸಮ್ಮೇಳನದಲ್ಲಿ ಕಾಂ. ಪಿ.ರಾಮಚಂದ್ರರಾವ್



“ಸಾಧನೆಯ ಭಾವದೊಂದಿಗೆ ನಡೆದ ಸಮ್ಮೇಳನ”

ಮೂರು ವರ್ಷಗಳ ಸತತ ಹೋರಾಟಗಳ, ಚಟುವಟಿಕೆಗಳ ನಂತರ ಸಾಧನೆಯ ಭಾವದೊಂದಿಗೆ ಈ ಸಮ್ಮೇಳನ ನಡೆಯುತ್ತಿದೆ” ಎಂದು ಪ್ರತಿನಿಧಿಗಳನ್ನು ಅಭಿನಂದಿಸುತ್ತಲೇ ಕಾಂ.ಪಿ. ರಾಮಚಂದ್ರನ್ ಗುಲ್ಬರ್ಗಾದಲ್ಲಿ 15ನೇ ರಾಜ್ಯ ಸಮ್ಮೇಳನವನ್ನು ಉದ್ಘಾಟಿಸಿದರು.

ಕಾಂಗ್ರೆಸ್ಸಿನ ಸಾವನ್ನು ತಡೆಯಲು ಯಾರಿಗೂ ಸಾಧ್ಯವಿಲ್ಲ. ಮತ್ತೆ ಯಾರಿಗೆ ಅಧಿಕಾರ? ಬಿಜೆಪಿಗೆ ಬರುವಂತಿಲ್ಲ. ಏಕೆಂದರೆ ಅದರರ್ಥ ಪ್ರಜಾಪ್ರಭುತ್ವದ ಕೊನೆ. ಹಲವರು ರಾಷ್ಟ್ರೀಯರಂಗ-ಎಡರಂಗ ಪರ್ಯಾಯ ಶಕ್ತಿಯಾಗಿ ಅಧಿಕಾರಕ್ಕೆ ಬರಬೇಕೆಂದು ಬಯಸುತ್ತಾರೆ. ಆದರೆ ಇದು ಅಷ್ಟು ಸರಳವಲ್ಲ. ಏಕೆಂದರೆ 1967ರಲ್ಲಿ, 1977ರಲ್ಲಿ, 1989ರಲ್ಲೂ ಪರ್ಯಾಯಗಳು ಬಂದಿವೆ. ಅವು ಉಳಿಯಲಿಲ್ಲ. ***ಪರ್ಯಾಯ ಸ್ಥಿರ ಸರ್ಕಾರ ಬೇಕು, ಜನಪರವಾಗಿರಬೇಕು. ಹೀಗಾಗಬೇಕಾದರೆ ಒಂದು ನಿರ್ದಿಷ್ಟ ಕಾರ್ಯಕ್ರಮದ ಆಧಾರದ ಮೇಲೆ ಎಡ, ಪ್ರಜಾಪ್ರಭುತ್ವ ಹಾಗೂ ಜಾತ್ಯಾತೀತ ಪಕ್ಷಗಳ ಐಕ್ಯತೆ ಅಗತ್ಯ*** ಎಂದು ಕಾಂ. ರಾಮಚಂದ್ರನ್ ಹೇಳಿದರು.

ಮಾರ್ಚ್ 13ರ ನಂತರ ಸನ್ನಿವೇಶ ಹೇಗಿರುತ್ತದೆ? ಈಗಲೇ ಹೇಳುವಂತಿಲ್ಲ. ಪೊಲಿಟ್ ಬ್ಯೂರೋ ಸಭೆ ಸೇರಿ ಮುಂದಿನ ಕಾರ್ಯತಂತ್ರದ ಬಗ್ಗೆ ನಿರ್ಣಯಿಸುತ್ತದೆ ಎಂದ ಕಾಂ. ರಾಮಚಂದ್ರನ್ ಇದಕ್ಕೆ ಮೊದಲು ಸನ್ನಿವೇಶ ಈ ರೀತಿ ಬದಲಾಗುವಲ್ಲಿ ನಮ್ಮ ಪಕ್ಷದ, ಎಡ-ಪ್ರಜಾಪ್ರಭುತ್ವ ಶಕ್ತಿಗಳ ನಿರಂತರ ಚಟುವಟಿಕೆಗಳು ಕಾರಣ ಎಂದರು. ಹೊಸ ಆರ್ಥಿಕ ನೀತಿಗಳನ್ನು ಆರಂಭಿಸಿದರೂ ವೇತನ ಸ್ತಂಭನ, ತುಟ್ಟಿಭತ್ಯೆ ಸ್ತಂಭನ ಮಾಡಲು ಸರ್ಕಾರಕ್ಕಾಗಲಿಲ್ಲ. ಕಾರ್ಮಿಕರನ್ನು ಬೀದಿಗೆ ಸೆಯುವ ಎಕ್ಸಿಟ್ ಪಾಲಿಸಿಯನ್ನು ಅಧಿಕೃತವಾಗಿ ತರುವುದು ಬಹುಮಟ್ಟಿಗೆ ಅದಕ್ಕಾಗಿಲ್ಲ. ಸಾರ್ವಜನಿಕ ವಲಯದ ಘಟಕಗಳನ್ನು ಮುಚ್ಚುವ ಅದರ ಪ್ರಯತ್ನವೂ ಸಾಗಲಿಲ್ಲ. ಪ್ರತಿಗಾಮೀ ಕಾರ್ಮಿಕ ಸಂಘ ಮಸೂದೆಯನ್ನು ತರಲೂ ಅದಕ್ಕಾಗಿಲ್ಲ. ಇವು ನಮ್ಮ ಆಂದೋಲನದ ಸಾಧನೆಗಳು. ದೇವೇಗೌಡರು ಸಬ್ಸಿಡಿಗಳನ್ನು ಏಕೆ ನಿಲ್ಲಿಸಬೇಕು ಎಂದು ಪ್ರಶ್ನಿಸುತ್ತಾರಾದರೆ, ಅರ್ಜುನ್ ಹೊಸ ಆರ್ಥಿಕ ನೀತಿಯ ಬಗ್ಗೆ ಪ್ರಧಾನಿಗಳಿಗೆ ಪತ್ರ ಬರೆಯುತ್ತಾರೆಂದರೆ ಇವೂ ಕೂಡಾ ನಮ್ಮ ಆಂದೋಲನದ ಪರಿಣಾಮ ಎಂದು ಕಾಂ. ಪಿ.ಆರ್.ಸಿ. ವಿವರಿಸಿದರು. ಆದರೂ ಹೋರಾಟ ಮುಗಿದಿಲ್ಲ, ಅದು ಮುಂದುವರಿಯಬೇಕು ಎಂದರು.

ಕಾಂಗ್ರೆಸ್(ಐ) ಲೋಕಸಭಾ ಸದಸ್ಯರನ್ನು ಖರೀದಿಸಿ ಅಲ್ಪಮತವನ್ನು ಬಹುಮತವಾಗಿಸಬಹುದು, ಆದರೆ ಜನತೆಯನ್ನು ಖರೀದಿಸಲು ಆದಕ್ಕಾಗಿಲ್ಲ, ಈಗಾಗಲೇ ಕರ್ನಾಟಕ, ಆಂಧ್ರ, ಸದ್ಯದಲ್ಲೇ ಮಹಾರಾಷ್ಟ್ರ, ಬಿಹಾರ, ಒರಿಸ್ಸಾ, ಗುಜರಾತ್ ಗಳಲ್ಲೂ ಆದು ಕಾಣಲಿದೆ.

ಅಂತರ್ರಾಷ್ಟ್ರೀಯ ರಂಗದಲ್ಲೂ ಕಳೆದ ಸಮ್ಮೇಳನದ ವೇಳೆಗೆ ಕಮ್ಯುನಿಸಂ ಸತ್ತು ಹೋಗಿದೆ ಎಂದವರು ಈಗ ನೆಟ್ಟಗೆ ಕೂತು ಯೋಚಿಸಬೇಕಾಗಿ ಬಂದಿದೆ. ಏಕೆಂದರೆ ಬಂಡವಾಳಶಾಹಿ ಮಾನವಕುಲದ ಸಮಸ್ಯೆಗಳನ್ನು ಪರಿಹರಿಸಲಾರದು ಎಂಬ ನಮ್ಮ ಮಾತು ನಿಜವಾಗಿದೆ. ಸಮಾಜವಾದಕ್ಕೆ ತೀವ್ರ ಹಿನ್ನಡೆಯಾಗುತ್ತಿದ್ದಾಗ ದೃಢವಾಗಿ ನಿಂತು ಒಂದು ಅಂತರ್ರಾಷ್ಟ್ರೀಯ ವಿಚಾರ ಸಂಕಿರಣವನ್ನು ನಾವು ನಡೆಸಿದೆವು. 30 ಕಮ್ಯುನಿಸ್ಟ್ ಪಕ್ಷಗಳು ನಮ್ಮ ಆಹ್ವಾನಕ್ಕೆ ಓಗೊಟ್ಟಿದ್ದವು. ಈಗ ನಮ್ಮ 15ನೇ ಮಹಾಧಿವೇಶನದಲ್ಲಿ ಮೊತ್ತಮೊದಲ ಬಾರಿಗೆ 30ಕ್ಕೂ ಹೆಚ್ಚು ಸೋದರ ಪಕ್ಷಗಳ ಸೌಹಾರ್ದ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದು ಕಾಂ. ರಾಮಚಂದ್ರನ್ ಹೇಳಿದರು.

ಮಾರ್ಚ್ 13ರ ನಂತರ ದೇಶದಲ್ಲಿ ಬದಲಾಗುವ ಸನ್ನಿವೇಶದಲ್ಲಿ ಹೊಸ ಘೋಷಣೆಗಳೊಂದಿಗೆ, ಹೊಸ ಕಾರ್ಯತಂತ್ರದೊಂದಿಗೆ ಪಕ್ಷವನ್ನು ಬಲಿಷ್ಠಗೊಳಿಸಬೇಕು, ಕರ್ನಾಟಕದಲ್ಲಿ ಪಕ್ಷ ತನ್ನ ಪಾತ್ರವಹಿಸಬೇಕು ಎಂದು ಕಾಂ. ಪಿ.ಆರ್.ಸಿ. ತಮ್ಮ ಉದ್ಘಾಟನಾ ಭಾಷಣವನ್ನು ಮುಕ್ತಾಯಗೊಳಿಸುತ್ತಾ ಕರೆ ನೀಡಿದರು.



15ನೇ ರಾಜ್ಯ ಸಮ್ಮೇಳನದಿಂದ

ಸಮ್ಮೇಳನ-ಒಂದು ಹಕ್ಕಿ ನೋಟ

ಸಿಪಿಐ(ಎಂ)ನ 15ನೇ ರಾಜ್ಯ ಸಮ್ಮೇಳನದ ಕಲಾಪಗಳು ಫೆಬ್ರವರಿ 25 ರಂದು ಬೆಳಿಗ್ಗೆ 10.30ಕ್ಕೆ “ಕಾಂ. ಎಂ. ಬಸವಪುನ್ನಯ್ಯ ನಗರ” ಎಂದು ನಾಮಕರಣ ಮಾಡಿದ್ದ ಸಭಾಂಗಣದ ಆವರಣದಲ್ಲಿ ಕೆಂಬಾವುಟ ಹಾರಿಸುವುದರೊಂದಿಗೆ ಆರಂಭವಾಯಿತು. ಪಕ್ಷದ ಹಿರಿಯ ಮುಖಂಡರೂ, ಸ್ವಾತಂತ್ರ್ಯ ಹೋರಾಟಗಾರರೂ ಆದ ಕಾಂ. ಎನ್.ಕೆ. ಉಪಾಧ್ಯಾಯರು ಧ್ವಜಾರೋಹಣ ಮಾಡಿ ಗುಲ್ಬರ್ಗಾದಲ್ಲಿ ನಡೆದ ಹಿಂದಿನ 9ನೇ ಸಮ್ಮೇಳನದ ಸನ್ನಿವೇಶವನ್ನು ನೆನಪಿಸಿ ಈ ಸಮ್ಮೇಳನದ ಮಹತ್ವದ ಬಗ್ಗೆ ಹೇಳಿದರು. ವರ್ಗ ಹೋರಾಟದ ಹುತಾತ್ಮರಿಗೆ ಕೆಂಪು ವಂದನೆ ಸಲ್ಲಿಸಿ ಪ್ರತಿನಿಧಿಗಳೆಲ್ಲಾ ಸಭಾಂಗಣದಲ್ಲಿ ನೆರೆಯುತ್ತಿದ್ದಂತೆ ಉದ್ಘಾಟನಾ ಅಧಿವೇಶನ ಆರಂಭವಾಯಿತು. -ಕಳೆದ ಸಮ್ಮೇಳನದ ನಂತರ ಹುತಾತ್ಮರಾದ ಕಾಂ. ಮಾಧುರಾವ್ ಧನ್ನೂರ್‌ರವರ ನೆನಪಿನ ವೇದಿಕೆಯ ಮೇಲೆ ಸಿ. ನಂಜುಂಡಪ್ಪ, ಅಬ್ರಹಾಂ ಕರ್ಕಡ, ನೀಲಾ ಹಾಗೂ ಶರಬಣ್ಣ ನಾಗಲಾಪುರ ಇವರುಗಳಿದ್ದ ಅಧ್ಯಕ್ಷ ಮಂಡಳಿಯನ್ನು ಆರಿಸಲಾಯಿತು. ಸ್ವಾಗತ ಸಮಿತಿಯ ಪರವಾಗಿ ಕಾಂ. ಮಾರುತಿ ಮಾನ್ಪಡೆ ಪ್ರತಿನಿಧಿಗಳನ್ನು ಸ್ವಾಗತಿಸುತ್ತಾ ಗುಲ್ಬರ್ಗಾದ ಇತಿಹಾಸ ಹಾಗೂ ಪ್ರಸ್ತುತ ಸನ್ನಿವೇಶದ ಬಗ್ಗೆ ತಿಳಿಸಿದರು.

ಶ್ರದ್ಧಾಂಜಲಿ

ಕಳೆದ ಮಹಾಧಿವೇಶನದ ನಂತರ ನಮ್ಮನ್ನಗಲಿದ ದೇಶದ ಕಮ್ಯುನಿಸ್ಟ್ ಆಂದೋಲನದ ಹಿರಿಯ ಮುಖಂಡ ಕಾಂ. ಎಂ. ಬಸವಪುನ್ನಯ್ಯರವರಿಗೆ ಹಾಗೂ ಅಂತರರಾಷ್ಟ್ರೀಯ ಕಾರ್ಮಿಕ ಆಂದೋಲನ, ವಿಮೋಚನಾ ಆಂದೋಲನದ ಮುಖಂಡರುಗಳಿಗೆ, ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರಿಗೆ, ದೇಶಾದ್ಯಂತ ವರ್ಗ ಹೋರಾಟದಲ್ಲಿ ಪ್ರಾಣವನ್ನರ್ಪಿಸಿದ ಕರ್ನಾಟಕದ ಮಾಧುರಾವ್ ಧನ್ನೂರು ಹಾಗೂ ಚಂದ್ರಶೇಖರ ಕೆಂಡದಮಠ ಇವರನ್ನು ಒಳಗೊಂಡಂತೆ ಬಿಹಾರ, ಕೇರಳ, ತ್ರಿಪುರಾ, ಪಶ್ಚಿಮ ಬಂಗಾಳದಲ್ಲಿ ವರ್ಗಶತ್ರುಗಳಿಗೆ ಆಹುತಿಯಾದ, ಜಮ್ಮು-ಕಾಶ್ಮೀರ, ಪಂಜಾಬ್‌ಗಳಲ್ಲಿ ಕೋಮು ಸಾಮರಸ್ಯ, ರಾಷ್ಟ್ರೀಯ ಐಕ್ಯತೆಯ ರಕ್ಷಣೆಗೆ ತಮ್ಮನರ್ಪಿಸಿಕೊಂಡ ಹುತಾತ್ಮರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಪೊಲಿಟ್ ಬ್ಯೂರೋ ಸದಸ್ಯರಾದ ಕಾಂ. ಪಿ. ರಾಮಚಂದ್ರನ್ ಉದ್ಘಾಟನಾ ಭಾಷಣ ಮಾಡಿದರು. ಸ್ವಾಗತ ಸಮಿತಿಯ ಪರವಾಗಿ ಕಾಂ. ಚಿನ್ನಪ್ಪ ಆನೆಗುಂದಿಯವರ ವಂದನಾರ್ಪಣೆಯೊಂದಿಗೆ ಉದ್ಘಾಟನಾ ಅಧಿವೇಶನ ಮುಕ್ತಾಯಗೊಂಡಿತು.

ಪ್ರತಿನಿಧಿ ಅಧಿವೇಶನ ಆರಂಭವಾಯಿತು. ನಾಲ್ಕು ಸಮಿತಿಗಳನ್ನು ರಚಿಸಲಾಯಿತು-ಕಾಂ. ನಿತ್ಯಾನಂದಸ್ವಾಮಿ ನೇತೃತ್ವದಲ್ಲಿ ಗೊತ್ತುವಳಿ ಸಮಿತಿ, ಕಾಂ.ಎಂ.ಎನ್.ಉಗ್ರಪ್ಪನವರ ನೇತೃತ್ವದಲ್ಲಿ ಅರ್ಹತಾ ಸಮಿತಿ, ಕಾಂ.ಸುಕುಮಾರ್ ನೇತೃತ್ವದಲ್ಲಿ ಮಿನಿಟ್ಸ್ ಸಮಿತಿ ಹಾಗೂ ಕಾಂ.ಜಿ.ಎಸ್. ನಾಗರಾಜ್ ನೇತೃತ್ವದಲ್ಲಿ ತರ್ಜುಮೆ ಸಮಿತಿ.

ವರದಿ ಮಂಡನೆ:

ರಾಜ್ಯ ಸಮಿತಿಯ ವರದಿಯನ್ನು ಮಂಡಿಸುತ್ತಾ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರ ರಾವ್ ಜಿಲ್ಲಾ ಸಮ್ಮೇಳನಗಳಲ್ಲಿ ಭಾಗವಹಿಸಿದವರಲ್ಲಿ 1990-94 ರ ನಡುವೆ ಪಕ್ಷವನ್ನು ಸೇರಿದವರೇ ಹೆಚ್ಚು ಎಂಬ ಅಂಶದತ್ತ ಗಮನ ಸೆಳೆಯುತ್ತಾ ಇದು ಒಂದು ಜೀವಂತ ಸಂಘಟನೆಯ ಲಕ್ಷಣ ಎಂದರು. ವರದಿಯ 8 ಭಾಗಗಳ ಬಗ್ಗೆ ಸ್ಥೂಲವಾಗಿ ಹೇಳಿದರು. ವರದಿಯ ಮೊದಲ ಭಾಗ ಸಮ್ಮೇಳನದ ಸಂದರ್ಭವನ್ನು ನೀಡಿತ್ತು. 2ನೇ ಹಾಗೂ 3ನೇ ಭಾಗ ಕರ್ನಾಟಕದ ಪ್ರಸ್ತುತ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಪರಿಸ್ಥಿತಿಗಳ ಬಗ್ಗೆ ಹೇಳಿದ್ದರೆ. 4ನೇ ಭಾಗ ಕಳೆದ ಮೂರು ವರ್ಷಗಳಲ್ಲಿ ವಿವಿಧ ಸಾಮೂಹಿಕ ಸಂಘಟನೆಗಳ ಮುನ್ನಡೆ, ಕೊರತೆಗಳ ಬಗ್ಗೆ ಹೇಳಿತ್ತು. 5ನೇ ಭಾಗ ಇದೇ ಅವಧಿಯಲ್ಲಿ ನಡೆಸಿದ ಸಾಮೂಹಿಕ ಚಳುವಳಿಗಳ ಬಗ್ಗೆ ವರದಿ ನೀಡಿತ್ತು. 6ನೇ ಭಾಗ ಪಕ್ಷದ ಪತ್ರಿಕೆ, ವಿಜ್ಞಾನ ರಂಗ, ಭಾಷೆ-ಕಲೆ-ಸಾಹಿತ್ಯ ರಂಗದಲ್ಲಿ ಮಾಡಿದ, ಮಾಡಬೇಕಾಗಿದ್ದ ಚಟುವಟಿಕೆಗಳ ಬಗ್ಗೆ ತಿಳಿಸಿತ್ತು. 7ನೇ ಭಾಗದಲ್ಲಿ ಪಕ್ಷದ ಸಂಘಟನಾ ಬೆಳವಣಿಗೆಯ ಮುನ್ನಡೆ, ಸಮಸ್ಯೆಗಳ ವಿಮರ್ಶೆ ನಡೆಸಲಾಗಿತ್ತು. 8ನೇ ಭಾಗ ಮುಂದಿನ ಮೂರು ವರ್ಷಗಳ ಅವಧಿಯಲ್ಲಿ ಪಕ್ಷದ ಮುಂದಿರುವ ಕರ್ತವ್ಯಗಳ ಸ್ಥೂಲ ನೋಟ ನೀಡಿತ್ತು.

ವರದಿಯ ಮೇಲೆ ಚರ್ಚೆ

ನಂತರ ವರದಿಯ ಮೇಲೆ 11 ಗಂಟೆಗಳ ಕಾಲ ಚರ್ಚೆ ನಡೆಯಿತು. ಒಟ್ಟು 63 ಸಂಗಾತಿಗಳು ತಮ್ಮ ಅನುಭವಗಳನ್ನು, ಅಭಿಪ್ರಾಯಗಳನ್ನು ಸಮ್ಮೇಳನದ ಮುಂದಿಟ್ಟರು. ವರದಿಗೆ ಉತ್ತರ ನೀಡುತ್ತಾ ಕಾಂ. ರಾಮಚಂದ್ರರಾವ್ ಒಟ್ಟು 220 ಪಾಯಿಂಟುಗಳನ್ನು ಚರ್ಚೆಯ ಸಮಯದಲ್ಲಿ ಎತ್ತಲಾಯಿತು ಎಂದು ತಿಳಿಸುತ್ತಾ ಪ್ರತಿನಿಧಿಗಳು ಎತ್ತಿದ್ದ ರಾಜಕೀಯ ಪ್ರಶ್ನೆಗಳಿಗೆ ಉತ್ತರ ನೀಡಿದರು. ಅವರ ಉತ್ತರದ ನಂತರ ವರದಿಯನ್ನು ಸಮ್ಮೇಳನ ಸರ್ವಾನುಮತದಿಂದ ಅಂಗೀಕರಿಸಿತು.

ಸಮ್ಮೇಳನದ ಒಟ್ಟು 30 ನಿರ್ಣಯಗಳನ್ನು ಅಂಗೀಕರಿಸಿತು. ಅರ್ಹತಾ ಪರಿಶೀಲನಾ ಸಮಿತಿಯ ಪರವಾಗಿ ಮಂಡಿಸಿದ ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. (ವಿವರ ಮುಂದಿನ ವಾರ) ನಂತರ ಸಮ್ಮೇಳನ ಹೊಸ ರಾಜ್ಯ ಸಮಿತಿಯನ್ನು ಆರಿಸಿತು. ಹೊಸ ರಾಜ್ಯ ಸಮಿತಿ ಕಾರ್ಯದರ್ಶಿ ಮತ್ತು ಕಾರ್ಯದರ್ಶಿ ಮಂಡಳಿಯನ್ನು ಆರಿಸಿತು. ಕಾಂ. ಪಿ.ಆರ್.ಸಿ.ಯವರ ಸಮಾರೋಪ ಭಾಷಣ ಹಾಗೂ ಸ್ವಾಗತ ಸಮಿತಿಯ ಪರವಾಗಿ ಕಾಂ. ಸಿ.ಎ. ಪಾಟೀಲ ವಂದನಾರ್ಪಣೆಯೊಂದಿಗೆ ಸಮ್ಮೇಳನದ ಕಲಾಪಗಳು ಮುಕ್ತಾಯಗೊಂಡವು. ಹೋರಾಟಶೀಲ ಜನಗಳಲ್ಲಿ ಸ್ಫೂರ್ತಿ ತುಂಬುತ್ತಾ ಬಂದಿರುವ ಅಂತರರಾಷ್ಟ್ರೀಯ ಪ್ರಖ್ಯಾತಿಯ ಹಾಡಿನ ಕನ್ನಡ ಅನುವಾದ- “ಗೆಲುವು ನಮ್ಮದು” ಈ ಹಾಡಿಗೆ ಪ್ರತಿನಿಧಿಗಳೆಲ್ಲರೂ ದನಿಗೂಡಿಸಿದರು.

ಮುಂದಿನ ವರ್ಷಗಳಲ್ಲಿ ಪಕ್ಷವನ್ನು ರಾಜ್ಯದಲ್ಲಿ ಒಂದು ಪ್ರಮುಖ ರಾಜಕೀಯ ಶಕ್ತಿಯಾಗಿ ಬೆಳೆಸುವ ಸ್ಫೂರ್ತಿಯೊಂದಿಗೆ ಸಮ್ಮೇಳನ ಮುಕ್ತಾಯಗೊಂಡಿತು.

“ಕರ್ನಾಟಕದಲ್ಲಿ ಪಕ್ಷದ ಮುನ್ನಡೆಯಲ್ಲೊಂದು ಮೈಲಿಗಲ್ಲಾಗಬಲ್ಲುದು”

ಎಂಬ ಉದ್ಗಾರದೊಂದಿಗೆ ಕಾಂ. ಪಿ.ರಾಮಚಂದ್ರನ್ 15ನೇ ರಾಜ್ಯ ಸಮ್ಮೇಳನದ ಸಮಾರೋಪ ಭಾಷಣವನ್ನು ಮುಗಿಸಿದರು. ರಾಜ್ಯದಲ್ಲಿ ಸಿಪಿಐ(ಎಂ)ನ 5000ಕ್ಕೂ ಹೆಚ್ಚು ಸದಸ್ಯರಿದ್ದಾರೆ. 3 ಲಕ್ಷಕ್ಕೂ ಹೆಚ್ಚು ಜನ ವಿವಿಧ ಸಾಮೂಹಿಕ ಸಂಘಟನೆಗಳಲ್ಲಿ ನಮ್ಮ ನೇತೃತ್ವದಲ್ಲಿದ್ದಾರೆ. 35 ಸಾವಿರಕ್ಕೂ ಹೆಚ್ಚು ಮಂದಿ ಜೈಲಿಗೆ ನುಗ್ಗುವಂತೆ ಮಾಡಲು ಸಾಧ್ಯವಾಗಿದೆ. ಈ ಶಕ್ತಿಯನ್ನು ಉಪಯೋಗಿಸಿಕೊಂಡು ಮುಂದಿನ ಸಮ್ಮೇಳನಕ್ಕೆ ಮೊದಲು ಸಿಪಿಐ(ಎಂ) ರಾಜ್ಯದಲ್ಲಿ ಒಂದು ಪ್ರಧಾನ ಶಕ್ತಿಯಾಗಬೇಕು ಎಂದು ಹೇಳಿದ ಕಾಂ. ಪಿ.ಆರ್.ಸಿ. ಸಿನಿಕತನದಿಂದ ಕಮ್ಯುನಿಸ್ಟ್ ಆಂದೋಲನ ಕಟ್ಟಲು ಸಾಧ್ಯವಿಲ್ಲ, ಕ್ರಾಂತಿಕಾರಿ ಸ್ಫೂರ್ತಿಯಿಂದ ನಾವು ಏನನ್ನಾದರೂ ಸಾಧಿಸಬಹುದು ಎಂದು ಕಿವಿಮಾತು ನುಡಿದರು.

“ಅಭಿನಂದನೆಗಳು-ಕೇವಲ ಆಡಂಬರದ ಮಾತುಗಳು ಇವು” ಎಂದು ಕಾಂ. ರಾಮಚಂದ್ರನ್ ಆರಂಭಿಸುತ್ತಾ ಕರ್ನಾಟಕದಲ್ಲಿ ಪಕ್ಷದ ಎಲ್ಲಾ ಹಂತಗಳಲ್ಲಿ ಐಕ್ಯತೆ ಸ್ಥಾಪನೆಗೊಂಡಿರುವುದನ್ನು ಈ ಸಮ್ಮೇಳನ ತೋರಿಸಿದೆ ಎಂದರು. 231ರಲ್ಲಿ 108 ಪ್ರತಿನಿಧಿಗಳು ಮೊದಲ ಬಾರಿಗೆ ರಾಜ್ಯ ಸಮ್ಮೇಳನದಲ್ಲಿ ಭಾಗವಹಿಸುತ್ತಿದ್ದಾರೆಯೆಂಬುದು ಪಕ್ಷಕ್ಕೆ ಹೊಸ ಹೊಸ ಸೇರ್ಪಡೆಯಾಗುತ್ತಿರುವುದನ್ನು ತೋರಿಸುತ್ತದೆ. ಸಮ್ಮೇಳನದ ಕಲಾಪಗಳು ಹಿಂದಿಗಿಂತ ಹೆಚ್ಚು ಸಕಾರಾತ್ಮಕ ಆರೋಗ್ಯಕರ ಜವಾಬ್ದಾರಿಯುತವಾಗಿದ್ದವು ಎಂದೂ ಅವರು ಹೇಳಿದರು.

ಈ ಸಮ್ಮೇಳನದಲ್ಲಿ ವ್ಯಕ್ತಗೊಂಡ ಐಕ್ಯತೆಗೆ ಆಧಾರ ನಿರಂತರವಾಗಿ 3 ವರ್ಷಗಳ ಕಾಲ ನಡೆಸಿಕೊಂಡು ಬಂದ ಚಟುವಟಿಕೆಗಳು ಎಂದ ಕಾಂ. ಪಿ.ಆರ್.ಸಿ. ಇದು ಕಮ್ಯುನಿಸ್ಟ್ ಆಂದೋಲನದ ಸಾಮಾನ್ಯ ಅನುಭವ ಎಂದು ಟಿಪ್ಪಣಿ ಮಾಡಿದರು.

ಈ ಸಮ್ಮೇಳನದಲ್ಲಿ ಭಾಗವಹಿಸಿದ ಮಹಿಳೆಯರ ಸಂಖ್ಯೆ 11-ಇದು ಕಮ್ಮಿಯೇ. ಆದರೆ ಇವರಲ್ಲಿ 8 ಮಹಿಳೆಯರು ಚರ್ಚೆಯಲ್ಲಿ ಭಾಗವಹಿಸಿದರು. ತುಂಬಾ ಚೆನ್ನಾಗಿಯೇ ಮಾತನಾಡಿದರು ಎಂದು ಪಿ.ಆರ್.ಸಿ. ಹೇಳಿದರು.

ನಮ್ಮ ಮುಂದಿರುವ ದಾರಿಯೇನು? ನಮ್ಮದುದರ ಮೂಲತಃ ರಾಜಕೀಯ ಕೆಲಸ - ಮೂರು ವಲಯಗಳಲ್ಲಿ ವರ್ಗ ಹೋರಾಟ ನಡೆಸಬೇಕಾಗಿದೆ. ಆರ್ಥಿಕ, ರಾಜಕೀಯ ಮತ್ತು ಸೈದ್ಧಾಂತಿಕ ವಲಯದಲ್ಲಿ. ನಮ್ಮ ಕೆಲಸಗಳಲ್ಲಿನ ಕುಂದು-ಕೊರತೆಗಳನ್ನು ಬೊಟ್ಟು ಮಾಡಿ ತೋರಿದ ಅವರು ಈಗ ಅವನ್ನೆಲ್ಲಾ ನಿವಾರಿಸಿಕೊಂಡು ಜನಗಳ ಮನವನ್ನು ಗೆಲ್ಲುವ ಸಮರದಲ್ಲಿ ತೊಡಗಬೇಕು ಎಂದರು. ಮುಂಬರುವ ದಿನಗಳಲ್ಲಿ ನಮ್ಮ ರಾಜಕೀಯ ಕೆಲಸ ಬಲಗೊಳ್ಳಬೇಕು. ಬಿಹಾರದ ಮಾದರಿಯಲ್ಲಿ ತೀವ್ರ ರೈತ ಹೋರಾಟಗಳನ್ನು, ಕೃಷಿ ಕೂಲಿಕಾರರ ಹೋರಾಟಗಳನ್ನು ನಡೆಸಬೇಕು ಎಂದು ಅವರು ಕರೆ ನೀಡಿದರು.

ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಚುನಾವಣೆಗಳಲ್ಲಿ ಸಿಪಿಐ(ಎಂ) ಅಭ್ಯರ್ಥಿಗಳನ್ನು ಗೆಲ್ಲಿಸಿ

15ನೇ ರಾಜ್ಯ ಸಮ್ಮೇಳನದ ನಿರ್ಣಯಗಳು

15ನೇ ರಾಜ್ಯ ಸಮ್ಮೇಳನದ ಮನವಿ

ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ ಬಹಳ ಕಾಲದಿಂದ ಸಿಪಿಐ(ಎಂ)ನ ಪ್ರಮುಖ ಬೇಡಿಕೆಗಳಲ್ಲೊಂದು. ತನಗೆ ಅಧಿಕಾರ ಸಿಕ್ಕಿದಲ್ಲೆಲ್ಲಾ ತನ್ನ ಈ ನೀತಿಯನ್ನು ಪ್ರಾಮಾಣಿಕವಾಗಿ ಜ್ಯಾರಿಗೆ ತರಲು ಪ್ರಯತ್ನಿಸಿದ ಏಕೈಕ ಪಕ್ಷ ಸಿಪಿಐ(ಎಂ). ಆದ್ದರಿಂದಲೇ ಪಶ್ಚಿಮ ಬಂಗಾಳ, ತ್ರಿಪುರಾದ ಪಂಚಾಯತೀ ರಾಜ್ಯ ವ್ಯವಸ್ಥೆ ಇಡೀ ದೇಶಕ್ಕೆ ಮಾದರಿಯಾಗಿದೆ. ಸಹಜವಾಗಿಯೇ ಪಂಚಾಯತೀ ರಾಜ್ಯ ವ್ಯವಸ್ಥೆಯನ್ನು ನೌಕರಶಾಹಿ ರಾಜ್ಯವಾಗಿ ಮಾಡಬಯಸಿದ ಕಾಂಗ್ರೆ ಪ್ರಯತ್ನದ ವಿರುದ್ಧ ಹೋರಾಟ ನಡೆಸಿರುವ ಸಿಪಿಐ(ಎಂ) ರಾಜ್ಯದಲ್ಲಿ ಭ್ರಷ್ಟ ಕಾಂಗ್ರೆಸ್(ಐ)ಗೆ ಮತ್ತು ಕೋಮುವಾದಿ ಬಿಜೆಪಿಗೆ ಬದಲಿಯಾಗಿ ಎಡ-ಪ್ರಜಾಸತ್ತಾತ್ಮಕ ಜಾತ್ಯಾತೀತ ತೃತೀಯ ರಂಗ ಗ್ರಾಮಾಂತರ ಪ್ರದೇಶದಿಂದ ಭದ್ರ ಬುನಾದಿಯೊಂದಿಗೆ ಮೂಡಿ ಬರಲು ಸಾಧ್ಯವಾಗುವಂತೆ ಮುಂಬರುವ ಚುನಾವಣೆಗಳಲ್ಲಿ ಸ್ಪರ್ಧಿಸಿರುವ ಎಲ್ಲಾ ಸಿಪಿಐ(ಎಂ) ಅಭ್ಯರ್ಥಿಗಳನ್ನು ಗೆಲ್ಲಿಸುವಂತೆ ಮನವಿ ಮಾಡಿಕೊಳ್ಳುವ ಒಂದು ನಿರ್ಣಯವನ್ನು ಗುಲ್ಬರ್ಗಾದಲ್ಲಿ ನಡೆದ ಸಿಪಿಐ(ಎಂ)ನ 15ನೇ ರಾಜ್ಯ ಸಮ್ಮೇಳನ ಅಂಗೀಕರಿಸಿತು. ಕಾಂ.ನಿತ್ಯಾನಂದ ಸ್ವಾಮಿ ಇದನ್ನು ಮಂಡಿಸಿದರು. ಕಾಂ.ಯು.ಬಸವರಾಜ್ ಅನುಮೋದಿಸಿದರು. ನಿರ್ಣಯದ ಪೂರ್ಣ ಪಾಠ ಹೀಗಿದೆ:

ಅಧಿಕಾರದ ವಿಕೇಂದ್ರೀಕರಣಕ್ಕಾಗಿ ಹಾಗೂ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವಾಗ ಮತ್ತು ಅವುಗಳ ಅನುಷ್ಠಾನದಲ್ಲಿ ಜನತೆಯ ಹೆಚ್ಚೆಚ್ಚು ಪಾಲ್ಗೊಳ್ಳುವಿಕೆಯನ್ನು ಖಚಿತಪಡಿಸಲು ಸಿಪಿಐ(ಎಂ) ಸತತವಾಗಿ ಒತ್ತಾಯಿಸುತ್ತಾ ಬಂದಿದೆ. ಅಧಿಕಾರ ಮತ್ತು ಯೋಜನಾ ವಿಕೇಂದ್ರೀಕರಣವನ್ನು ಕಾರ್ಯರೂಪಕ್ಕೆ ತಂದು ಪಶ್ಚಿಮ ಬಂಗಾಳ ಮತ್ತು ತ್ರಿಪುರಾ ರಾಜ್ಯಗಳಲ್ಲಿ ಮಾದರಿ ಪಂಚಾಯತ್ ರಾಜ್ಯ ವ್ಯವಸ್ಥೆಯನ್ನು ಜಾರಿಗೆ ತಂದಿರುವ ಕೀರ್ತಿ ಸಿಪಿಐ(ಎಂ)ಗೆ ಸಲ್ಲುತ್ತದೆ. ಈ ಎರಡು ರಾಜ್ಯಗಳಲ್ಲಿ ತಮ್ಮ ಅಭಿವೃದ್ಧಿಯನ್ನು ಸಾಧಿಸಲು ಸಾಮಾನ್ಯ ಜನರ ಕೈಯಲ್ಲಿ ಅಧಿಕಾರದ ಅಸ್ತ್ರ ದೊರಕಿದಂತಾಗಿದೆ.

ಕರ್ನಾಟಕದಲ್ಲಿ ಈ ಹಿಂದೆ ಅಧಿಕಾರದಲ್ಲಿದ್ದ ಕಾಂಗ್ರೆ ಪಕ್ಷವು ಪಂಚಾಯತ್ ಚುನಾವಣೆಗಳನ್ನು ತನ್ನ ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳಲು ಅವುಗಳನ್ನು ಮುಂದೂಡುತ್ತಾ ಬಂತು. ಗ್ರಾಮ ಪಂಚಾಯತ್ ಚುನಾವಣೆಗಳು ನಡೆದು ಅನೇಕ ತಿಂಗಳು ಕಳೆದರೂ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್ ಚುನಾವಣೆಗಳನ್ನು ನಡೆಸಲು ಮೊಯ್ಲಿ ಸರಕಾರ ಹಿಂದೇಟು ಹಾಕುತ್ತಾ ಬಂತು. ಕೊನೆಗೆ ಉಚ್ಛ ನ್ಯಾಯಾಲಯದ ಮಧ್ಯಪ್ರವೇಶದಿಂದಾಗಿ ಇನ್ನು ಹೆಚ್ಚು ಕಾಲ ಚುನಾವಣೆಗಳನ್ನು ಮುಂದೂಡುವುದು ಸಾಧ್ಯವಾಗದೆ ಈಗ ಜನತಾದಳ ಸರಕಾರ ಈ ಚುನಾವಣೆಗಳನ್ನು ನಡೆಸಲೇಬೇಕಾಗಿ ಬಂದಿದೆ.


ರಾಜ್ಯದಲ್ಲಿ ಹಿಂದಿನ ಕಾಂಗ್ರೆ ಸರಕಾರ ಪಂಚಾಯತ್ ರಾಜ್ಯ ವ್ಯವಸ್ಥೆಯ ಮೂಲಕ ಜನತೆಗೆ ಹೆಚ್ಚಿನ ಅಧಿಕಾರ ನೀಡುವ ಬದಲು ಎಲ್ಲಾ ಅಧಿಕಾರಗಳನ್ನು ಅಧಿಕಾರಿಗಳ ಕೈಯಲ್ಲಿಟ್ಟು ನೌಕರಶಾಹಿ ರಾಜ್ಯ ನಡೆಸಲು ಉದ್ದೇಶಿಸಿತ್ತು. ಇದನ್ನು ಸರಿಪಡಿಸಲು ಈಗ ಜನತಾದಳ ಸರಕಾರವು ಕ್ರಮ ಕೈಗೊಳ್ಳಲು ಹೊರಟಿರುವುದು ಸೂಕ್ತವಾದರೂ ಬದಲಾವಣೆಗಳನ್ನು ಸೂಚಿಸಲು ದಂತಗೋಪುರದ ಬುದ್ಧಿಜೀವಿಗಳ ಸಮಿತಿಯನ್ನು ರಚಿಸುತ್ತಿರುವುದು ಮತ್ತು ಗ್ರಾಮೀಣ ಜನತೆಯ ಮಧ್ಯದಲ್ಲಿ ಕೆಲಸ ಮಾಡಿ ಅನುಭವ ಇರುವವರನ್ನು ರಾಜಕೀಯ ವ್ಯಕ್ತಿಗಳು ಎಂಬ ನೆಪದಿಂದ ಹೊರಗೆ ಇಟ್ಟಿರು ವುದು ಖಂಡನೀಯವಾಗಿದೆ. ರಾ ಜಕೀಯವಾಗಿ ಭಾರೀ ಮಹತ್ವಪೂರ್ಣವಾದ ಈ ವಿಷಯದ ಬಗ್ಗೆ ಎಲ್ಲಾ ರಾಜಕೀಯ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಅವಶ್ಯವಾಗಿದೆ.

ಆದೇ ಸಂದರ್ಭದಲ್ಲಿ ಪಂಚಾಯತ್ ಚುನಾವಣೆಗಳಲ್ಲಿ ಮೀಸಲಾತಿ ಪ್ರಶ್ನೆಯನ್ನು ಎತ್ತಿಕೊಂಡು ಕಾಂಗ್ರೆ ಮತ್ತು ಬಿಜೆಪಿ ಪಕ್ಷಗಳು ಗುಲ್ಲು ಎಬ್ಬಿಸಿರುವುದು ಹಾಸ್ಯಾಸ್ಪದವಾಗಿದೆ. ಈ ಎರಡು ಪಕ್ಷಗಳಿಗೆ ದಲಿತರ ಮತ್ತು ಹಿಂದುಳಿದವರ ಬಗ್ಗೆ ಕನಿಕರ ಇದೆ ಎನ್ನುವುದು ತೋಳಗಳಿಗೆ ಕುರಿಮರಿಯ ಬಗ್ಗೆ ಕನಿಕರ ಉಂಟಾಗಿದೆ ಎಂದಂತಾಗುತ್ತದೆ. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ವೈಜ್ಞಾನಿಕವಾದ ಮೀಸಲಾತಿ ನೀತಿ ಅನುಸರಿಸುವುದು ಅವಶ್ಯ ಇದೆ. ಈಗಿನ ಜನತಾದಳ ಸರಕಾರ ನಿರ್ದಿಷ್ಟ ಜನಸಂಖ್ಯೆಯ ಆಧಾರದಲ್ಲಿ ಮೀಸಲಾತಿಯನ್ನು ಖಚಿತಪಡಿಸಲು ಕೈಗೊಂಡ ಕ್ರಮಗಳು ಸ್ವಾಗತಾರ್ಹವಾಗಿವೆ.

> **ರಾಜ್ಯದಲ್ಲಿ ಭ್ರಷ್ಟ ಕಾಂಗ್ರೆಗೆ ಮತ್ತು ಕೋಮುವಾದಿ ಬಿಜೆಪಿಗೆ ಬದಲಿಯಾಗಿ ಎಡ ಪ್ರಜಾಸತ್ತಾತ್ಮಕ ಜಾತ್ಯಾತೀತ ತೃತೀಯ ರಂಗ ಗ್ರಾಮಾಂತರ ಪ್ರದೇಶದಿಂದ ಭದ್ರ ಬುನಾದಿಯೊಂದಿಗೆ ಮೂಡಿಬರಬೇಕು.**

ಆದರೆ ಜನತಾದಳ ಸರಕಾರ ಈ ಚುನಾವಣೆಗಳ ಸಂದರ್ಭದಲ್ಲಿ ಗಮನಿಸಬೇಕಾಗಿದ್ದ ಅತ್ಯಂತ ಮಹತ್ವದ ವಿಷಯವೇನೆಂದರೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜನತೆ ಕಾಂಗ್ರೆ ಮತ್ತು ಬಿಜೆಪಿಯನ್ನು ತಿರಸ್ಕರಿಸಿ ಅವುಗಳಿಗೆ ಪ್ರಜಾಸತ್ತಾತ್ಮಕ ಮತ್ತು ಜಾತ್ಯಾತೀತ ಬದಲಿಯಾಗಿ ಜನತಾದಳ ಜನತಾದಳ ಸರಕಾರವನ್ನು ಅಧಿಕಾರಕ್ಕೆ ತಂದಿದೆ. ರಾಜ್ಯದ ಜನತೆಯ ನಾಡಿಬಡಿತವನ್ನು ಅರ್ಥ ಮಾಡಿಕೊಂಡು ರಾಜ್ಯದಲ್ಲಿ ಪ್ರಜಾಸತ್ತಾತ್ಮಕ ಜಾತ್ಯಾತೀತ ಬದಲಿಗೆ ಭದ್ರಬುನಾದಿಯನ್ನು ಹಾಕಲು ಸಾಧ್ಯವಾಗುವಂತೆ ಎಡಪಕ್ಷಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ಜನತಾದಳ ಮುಂದೆ ಬರಬೇಕಾಗಿತ್ತು. ಆದರೆ ಜನತಾದಳ ಈ ಬಗ್ಗೆ ಯೋಚನೆಯನ್ನೇ ಮಾಡಲಿಲ್ಲ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮಾಡಿದ ತಪ್ಪಿನ ಅರಿವು ಜನತಾದಳದ ಮುಖಂಡರಿಗೆ ಇವತ್ತಿಗೂ ಆಗಲಿಲ್ಲ. ಮಾತ್ರವಲ್ಲ ಜನತಾದಳವು ಕಾಂಗ್ರೆ ಪಕ್ಷದ ರೀತಿಯಲ್ಲಿ ಚುನಾವಣಾ ನೀತಿ ಸಂಹಿತೆಯನ್ನು ಉಲ್ಲಂಘಿಸಿ ಪಂಚಾಯತ್ ಅಧ್ಯಕ್ಷರಿಗೆ ಮತ್ತು ಉಪಾಧ್ಯಕ್ಷರಿಗೆ ಮಾಸಾಶನ ನೀಡುವ ಆಮಿಷವೊಡ್ಡಿರುವುದು ದುರದೃಷ್ಟಕರವಾಗಿದೆ.

ಆದ್ದರಿಂದ ರಾಜ್ಯದಲ್ಲಿ ಭ್ರಷ್ಟ ಕಾಂಗ್ರೆಗೆ ಮತ್ತು ಕೋಮುವಾದಿ ಬಿಜೆಪಿಗೆ ಬದಲಿಯಾಗಿ ಎಡ ಪ್ರಜಾಸತ್ತಾತ್ಮಕ ಜಾತ್ಯಾತೀತ ತೃತೀಯ ರಂಗ ಗ್ರಾಮಾಂತರ ಪ್ರದೇಶದಿಂದ ಬಧ್ರಬುನಾದಿಯೊಂದಿಗೆ ಮೂಡಿಬರಲು ಸಾಧ್ಯವಾಗುವಂತೆ ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಚುನಾವಣೆಗಳಲ್ಲಿ ಸ್ಪರ್ಧಿಸಿರುವ ಸಿಪಿಐ(ಎಂ) ಪಕ್ಷದ ಎಲ್ಲಾ ಅಭ್ಯರ್ಥಿಗಳನ್ನು ಗೆಲ್ಲಿಸಬೇಕೆಂದು ಫೆಬ್ರುವರಿ 24ರಿಂದ 27ರವರೆಗೆ ಕಲ್ಬುರ್ಗಿಯಲ್ಲಿ ನಡೆದ ಸಿಪಿಐ(ಎಂ) ಕರ್ನಾಟಕ ರಾಜ್ಯದ 15ನೇ ಸಮ್ಮೇಳನವು ರಾಜ್ಯದ ಗ್ರಾಮಾಂತರ ಮತದಾರರಲ್ಲಿ ಕಳಕಳಿಯ ಮನವಿ ಮಾಡುತ್ತದೆ.



ಪ್ರತಿನಿಧಿ ಅಧಿವೇಶನದ ಒಂದು ದೃಶ್ಯ

ರಾಜ್ಯ ಸಮ್ಮೇಳನದ ಎಚ್ಚರಿಕೆ

ಭೂಸುಧಾರಣಾ ಕಾಯ್ದೆಗೆ ಪ್ರತಿಗಾಮೀ ತಿದ್ದುಪಡಿ ಬೇಡ

1961ರ ಭೂ ಸುಧಾರಣಾ ಕಾಯ್ದೆಯ ಸೆಕ್ಷನ್ 79(A), (B), ಮತ್ತು 109ಗಳಿಗೆ ತಿದ್ದುಪಡಿ ಮಾಡಲು ರಾಜ್ಯದ ಜನತಾದಳ ಸರಕಾರ ಉದ್ದೇಶಿಸಿದೆ ಎಂಬ ಸುದ್ದಿಗೆ ಪ್ರತಿಕ್ರಿಯಿಸುತ್ತಾ ಗುಲ್ಬರ್ಗಾ ಸಮ್ಮೇಳನ ಒಂದು ನಿರ್ಣಯವನ್ನು ಅಂಗೀಕರಿಸಿ ಕಾಂಗ್ರೆಸ್(ಐ)ಗೆ ವಿರುದ್ಧ ಮತ ನೀಡಿ ರಾಜ್ಯದ ಜನತೆ ಜನತಾದಳ ಸರಕಾರವನ್ನು ಆರಿಸಿಕೊಂಡಿರುವಾಗ ಈ ಸರಕಾರ ಕೂಡಾ ಕಾಂಗ್ರೆಸ್(ಐ)ನಂತೆ ಕೃಷಿ ಕ್ಷೇತ್ರವನ್ನು ದೇಶೀ-ವಿದೇಶೀ ಬಂಡವಾಳಿಗರಿಗೆ ದೊಡ್ಡದಾಗಿ ತೆರೆದಿಡುವ ದಾರಿಯನ್ನು ಅನುಸರಿಸುವುದು ಅತ್ಯಂತ ಖಂಡನೀಯ ಎಂದಿದೆ. ಈ ನಿರ್ಣಯವನ್ನು ಕಾಂ.ಜಿ.ಎನ್.ನಾಗರಾಜ್ ಮಂಡಿಸಿದರು. ಕಾಂ. ಚಂದ್ರಶೇಖರ್ ಬಾಳೆ ಅನುಮೋದಿಸಿದರು. ನಿರ್ಣಯದ ಪೂರ್ಣ ಪಾಠ ಹೀಗಿದೆ.

ಉದಾರೀಕರಣದ ನೀತಿಯ ಅಂಗವಾಗಿ ಭೂ ಮಿತಿಯನ್ನು ತೆಗೆದುಹಾಕುವ, ಕೃಷಿ ಭೂಮಿಯನ್ನು ಕೃಷಿಯೇತರರು ಬಳಕೆ ಮಾಡುವಲ್ಲಿರುವ ಅಡೆತಡೆಗಳನ್ನು ತೆಗೆಯುವ, ವಿದೇಶೀ ಮತ್ತು ದೇಶೀಯ ಬಂಡವಾಳಗಾರರಿಗೆ ಕೃಷಿ ಕ್ಷೇತ್ರವನ್ನು ದೊಡ್ಡದಾಗಿ ತೆರೆದಿಡುವ ಪ್ರಯತ್ನಗಳನ್ನು ಕಾಂಗ್ರೆಸ್(ಐ) ಕೇಂದ್ರ ಸರಕಾರಗಳು ಮಾಡುತ್ತಿರುವಾಗ ಕರ್ನಾಟಕದಲ್ಲಿ ಜನತೆ ಕಾಂಗ್ರೆಸ್(ಐ)ಗೆ ವಿರುದ್ಧವಾಗಿ ಮತ ನೀಡಿ ಆಯ್ಕೆ ಮಾಡಿದ ಜನತಾದಳ ಸರಕಾರ ಸಹ 1961ರ ಕರ್ನಾಟಕ ಭೂ ಸುಧಾರಣೆ ಕಾಯ್ದೆಗೆ ಪ್ರತಿಗಾಮಿ ತಿದ್ದುಪಡಿಗಳನ್ನು ಮಾಡಲು ಹೊರಟಿರುವ ಬಗ್ಗೆ ಗುಲ್ಬರ್ಗಾದಲ್ಲಿ ಫೆಬ್ರುವರಿ 24ರಿಂದ 27ರವರೆಗೆ ನಡೆಯುತ್ತಿರುವ ಸಿಪಿಐ(ಎಂ)ನ 15ನೇ ರಾಜ್ಯ ಸಮ್ಮೇಳನವು ತೀವ್ರವಾಗಿ ಖಂಡಿಸುತ್ತದೆ.

1961ರ ಭೂ ಸುಧಾರಣಾ ಕಾಯ್ದೆಯ ಸೆಕ್ಷನ್ 79(a), (b), 80 ಮತ್ತು 109ಗಳಿಗೆ ತಿದ್ದುಪಡಿ ಮಾಡಲು ದೇವೇಗೌಡರ ಸರಕಾರ ಉದ್ದೇಶಿಸಿದೆ ಎಂದು ತಿಳಿದು ಬಂದಿದೆ.

ಕೃಷಿಯೇತರ ವಾರ್ಷಿಕ ಆದಾಯ ರೂ. 12,000ಕ್ಕೂ ಹೆಚ್ಚಿಗೆ ಇರುವವರು ಕೃಷಿ ಭೂಮಿಯನ್ನು ಕೊಳ್ಳುವುದನ್ನು ಸೆಕ್ಷನ್ 79(A) ನಿರ್ಬಂಧಿಸುತ್ತದೆ. ಈ ಆದಾಯ ಮಿತಿಯನ್ನು 1991ರಲ್ಲಿ ವೀರೇಂದ್ರ ಪಾಟೀಲರ ಸರಕಾರ ರೂ. 50,000ಕ್ಕೆ ಏರಿಸಿತ್ತು. ಈಗ ದೇವೇಗೌಡರ ಸರಕಾರ ಈ ಮಿತಿಯನ್ನು ಒಂದು ಲಕ್ಷ ರೂಪಾಯಿಗಳಿಗೆ ಏರಿಸಲು ಉದ್ದೇಶಿಸಿದೆ.

ಈ ಕಾಯ್ದೆಯ ಸೆಕ್ಷನ್ 79(B) ಕೃಷಿ ಉದ್ಯೋಗಿಯಲ್ಲದಿರುವವರು ಕೃಷಿ ಭೂಮಿಯನ್ನು ಹೊಂದಿರಲು ಅವಕಾಶ ನೀಡುವುದಿಲ್ಲ. ಇದು ಕೃಷಿ ಮಾಡದವನ್ನು ಭೂ ಮಾಲಿಕನಾಗುವುದನ್ನು ತಪ್ಪಿಸುತ್ತದೆ. ಆದರೆ ರಾಜ್ಯ ಜನತಾದಳ ಸರಕಾರ ಗುತ್ತೇದಾರಿ ಹಾಗೂ ಬಹುರಾಷ್ಟ್ರೀಯ ಕಂಪನಿಗಳಿಗೆ ಹೂ ಬೆಳೆಗಾರರಿಗೆ, ತೋಟಗಾರಿಕೆಗೆ, ಮೀನುಗಾರಿಕೆಗೆ ಜಮೀನು ಒದಗಿಸುವ ನೆಪದಲ್ಲಿ ಈ ಸೆಕ್ಷನ್‌ಗೆ ತಿದ್ದುಪಡಿ ಮಾಡಲು ಯೋಚಿಸುತ್ತಿದೆ. ಕೃಷಿ ಕೂಲಿಕಾರ, ಬಡರೈತರು ಸರಕಾರಿ ಭೂಮಿಯಲ್ಲಿ ಕೃಷಿ ಮಾಡಿದರೆ ಅವರನ್ನು ಒಕ್ಕಲೆಬ್ಬಿಸುವ ಸರಕಾರ 200 ಎಕರೆಗಳವರೆಗೆ ಸರಕಾರಿ ಭೂಮಿಯನ್ನು ಭೋಗ್ಯಕ್ಕೆ ಕೊಡಲು ಅನುವು ಮಾಡಿಕೊಡಲು ಉದ್ದೇಶಿಸಿದೆ.

ಸೆಕ್ಷನ್ 80 ಕೃಷಿಯೇತರರಿಗೆ ಕೃಷಿ ಭೂಮಿ ವರ್ಗಾವಣೆಯನ್ನು ನಿರ್ಬಂಧಿಸುತ್ತದೆ. ಕೃಷಿಗಾಗಿ ಭೂಮಿಯನ್ನು ಪಡೆದು ಅದನ್ನು ಕೃಷಿಗೆ ಉಪಯೋಗಿಸದೇ ಇದ್ದಲ್ಲಿ ಆ ಜಮೀನನ್ನು ಸರಕಾರ ಮುಟ್ಟುಗೋಲು ಹಾಕಿಕೊಳ್ಳಬಹುದು. ಈಗ ಈ ನಿರ್ಬಂಧವನ್ನು ತೆಗೆದು ಹಾಕಲು ಉದ್ದೇಶಿಸಲಾಗಿದೆ.

ಸೆಕ್ಷನ್ 109ರ ಪ್ರಕಾರ ನಗರ ಪ್ರದೇಶಗಳ ಭೂಮಿಯನ್ನು ಕೃಷಿಯೇತರ ಕಾರ್ಯಗಳಿಗೆ ಅಥವಾ ಉದ್ದಿಮೆಗಳ ಅಭಿವೃದ್ಧಿಗೆ ನೀಡಲು ಸರಕಾರಕ್ಕೆ ಒಂದು ಮಿತಿಯೊಳಗೆ ಮಾತ್ರ ಅಧಿಕಾರ ನೀಡುತ್ತದೆ. 1992ರಲ್ಲಿ ಮಾಡಲಾದ ತಿದ್ದುಪಡಿ ಪ್ರಕಾರ ಔದ್ಯಮಿಕ ಅಭಿವೃದ್ಧಿ ಅಥವಾ ಕೃಷಿಯೇತರ ಚಟುವಟಿಕೆಗಳಾದ ಶಿಕ್ಷಣ ಸಂಸ್ಥೆ ಕಟ್ಟಲು ಇತ್ಯಾದಿಗಳಿಗೆ ಭೂಮಿ ನೀಡುವ ಅಧಿಕಾರ ನೀಡಲಾಯಿತು. ಈ ಅಧಿಕಾರ ಎರಡುಯೂನಿಟ್ ಭೂಮಿ ನೀಡುವುದಕ್ಕೆ ಸೀಮಿತವಾಗಿತ್ತು(ಅಂದರೆ 10.8 ಎಕರೆ ಭೂಮಿ) ಈಗ ಈ ಮಿತಿಯನ್ನು 10 ಯೂನಿಟ್‌ಗಳಿಗೆ ಏರಿಸಲು ಉದ್ದೇಶಿಸಲಾಗಿದೆ.

1974ರ ತಿದ್ದುಪಡಿ ಕರ್ನಾಟಕ ಭೂ ಸುಧಾರಣಾ ಕಾಯ್ದೆ ಕೃಷಿ ಕ್ಷೇತ್ರಕ್ಕೆ ಬಂಡವಾಳಗಾರರು ಪ್ರವೇಶ ಮಾಡಿ ಬಡ ರೈತರ ಜಮೀನನ್ನು ಕಸಿದುಕೊಂಡು ಬಂಡವಾಳಶಾಹಿ ಭೂಮಾಲಕರಾಗಿರುವ ಪ್ರಯತ್ನಗಳಿಗೆ ತಡೆವೊಡ್ಡಿತ್ತು. ದೇವೇಗೌಡರು ಹೇಳುವಂತಹ ತಿದ್ದುಪಡಿಗಳು ಬಂದರೆ ರಾಜ್ಯದಲ್ಲಿನ ಭೂಸಂಬಂಧಗಳೆಲ್ಲಾ ತೀವ್ರವಾಗಿ ಬಂಡವಾಳಿಗರ ಪರವಾಗಿ ಬದಲಾವಣೆ ಹೊಂದುವ ಅಪಾಯವಿದೆ.

ಆದ್ದರಿಂದ ಸಿಪಿಐ(ಎಂ)ನ ರಾಜ್ಯ ಸಮ್ಮೇಳನವು ದೇವೇಗೌಡರು ಮಾಡಲು ಹೊರಟಿರುವ ತಿದ್ದುಪಡಿಗಳಿಗೆ ತೀವ್ರ ವಿರೋಧ ವ್ಯಕ್ತಪಡಿಸುತ್ತದೆ. ಮಾತ್ರವಲ್ಲ ಸರಕಾರ ರಾಜ್ಯದ ಕೃಷಿ ಕ್ಷೇತ್ರದ ಹಿತವನ್ನು ಕಡೆಗಣಿಸಿ ಇಂತಹ ತಿದ್ದುಪಡಿಗಳನ್ನೇನಾದರೂ ತಂದದ್ದೆ ಆದರೆ ರಾಜ್ಯಾದ್ಯಂತ ತೀವ್ರ ಚಳುವಳಿಯನ್ನು ಎದುರಿಸಬೇಕಾಗುವುದು ಎಂದು ಎಚ್ಚರಿಸುತ್ತದೆ. ಕರ್ನಾಟಕದಲ್ಲಿ ಪಶ್ಚಿಮ ಬಂಗಾಳದ ಮಾದರಿಯಲ್ಲಿ ಅತ್ಯಂತ ಪ್ರಗತಿಪರ ಭೂ ಸುಧಾರಣೆ ಜಾರಿಗೆ ಬರಬೇಕು ಎಂದು ಸಿಪಿಐ(ಎಂ) ಮತ್ತು ರೈತ ಸಂಘಟನೆಗಳು ಹೋರಾಟ ನಡೆಸುತ್ತಿರುವಾಗಲೇ ದೇವೇಗೌಡರು ರಾಜ್ಯದ ಕೃಷಿ ಭೂಮಿಯನ್ನು ಲೂಟಿ ಮಾಡಲು ಬಂಡವಾಳಗಾರರಿಗೆ ಅವಕಾಶ ಕೊಡುತ್ತಿರುವುದು ತೀರಾ ಆಘಾತಕಾರಿ ವಿಷಯವಾಗಿದೆ. ಪಶ್ಚಿಮ ಬಂಗಾಳದಲ್ಲಿ ಇಂದು ಆಹಾರ ಉತ್ಪಾದನೆಯಲ್ಲಿ ಸಾಧಿಸಲಾದ ಕ್ರಾಂತಿಕಾರಿ ಮುನ್ನಡೆಗೆ ಅಲ್ಲಿನ ಭೂ ಸುಧಾರಣಾ ಕ್ರಮಗಳೇ ಕಾರಣವೆಂದು ಇಂದು ದೃಢಪಟ್ಟಿರುವಾಗ ರಾಜ್ಯ ಜನತಾದಳ ಸರಕಾರದ ಈ ಕ್ರಮ ರಾಜ್ಯದ ಜನತೆಯ ಹಿತಕ್ಕೆ ಭಾರಿ ಧಕ್ಕೆಯಾಗುವುದರಲ್ಲಿ ಸಂಶಯವಿಲ್ಲ.

ಪಂಚಾಯತ್ ರಾಜ್ಯವೆಂದರೆ ಜನರ ರಾಜ್ಯ ಅದು ಇರುವುದು ಪ. ಬಂಗಾಳದಲ್ಲಿ

೩

ಪಂಚಾಯತ್ ಚುನಾವಣೆಗಳ ಸಂದರ್ಭದಲ್ಲಿ ವಿಶೇಷ ಲೇಖನ



ಹದಿನೇಳು ವರ್ಷಗಳ ಹಿಂದೆ ಪಶ್ಚಿಮ ಬಂಗಾಳ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಸಿಪಿಐ(ಎಂ) ನೇತೃತ್ವದ ಎಡರಂಗ ಸರಕಾರ ತಂದ ಆರ್ಥಿಕ ಮತ್ತು ಆಡಳಿತ ವಿಕೇಂದ್ರೀಕರಣ ದೇಶದೊಳಗಷ್ಟೇ ಅಲ್ಲದೆ ವಿದೇಶೀಗಳಲ್ಲೂ ಕುತೂಹಲ ಮೂಡಿಸಿದೆ. ಮೂರು ಹಂತಗಳ ಪಂಚಾಯತ್ ಪದ್ಧತಿ ಅದರಲ್ಲಿನ ಆಡಳಿತ ನೀತಿ, ಅಲ್ಲಿ ಅನುಸರಿಸಿರುವ ಅಭಿವೃದ್ಧಿ ತಂತ್ರ ಇವೆಲ್ಲವೂ ಹೊಸತು. ಜನಸಾಮಾನ್ಯನ ಅವಶ್ಯಕತೆಗಳಿಗನುಗುಣವಾಗಿ ಅಭಿವೃದ್ಧಿಪಡಿಸಿರುವ ನವೋನವೀನ ವ್ಯವಸ್ಥೆ ಇದು. ಅಂತೆಯೇ ಇಂದು ಪಶ್ಚಿಮ **ಬಂಗಾಳದಲ್ಲಿ ಪಂಚಾಯತ್ ರಾಜ್ಯ ವ್ಯವಸ್ಥೆ ಬಡತನ ನಿವಾರಿಸಿ ಸಾಮಾಜಿಕ ನ್ಯಾಯವನ್ನು ಎಲ್ಲರಿಗೂ ತಲುಪಿಸುವ ಒಂದು ಪರ್ಯಾಯ ವ್ಯವಸ್ಥೆಯಾಗಿ ಪುಟಿದೆದ್ದು ನಿಂತಿದೆ. ಇಲ್ಲಿನ ಪ್ರಜಾಪ್ರಭುತ್ವ ಬುಡವಿಲ್ಲದ್ದಲ್ಲ, ಬದಲಿಗೆ ಬುಡಮಟ್ಟದಿಂದ ಬೆಳೆದು ಅಖಂಡವಾಗಿ ಬೆಳೆದು ನಿಂತಿರುವಂತಹದ್ದು.**

1977ರಲ್ಲಿ ಎಡರಂಗ ಸರ್ಕಾರ ಅಧಿಕಾರಕ್ಕೆ ಬಂದ ನಂತರ ನಾಲ್ಕು ಪಂಚಾಯತ್ ಚುನಾವಣೆಗಳಾಗಿವೆ. 1978ರಲ್ಲಿ ಮೊದಲನೇ ಚುನಾವಣೆ ನಡೆದ ನಂತರ ಪ್ರತಿ ಐದು ವರ್ಷಗಳಿಗೊಮ್ಮೆ ತಪ್ಪದೇ ಈ ಚುನಾವಣೆಗಳು ನಡೆದಿವೆ. ಇತ್ತೀಚೆಗೆ ನಡೆದ ಚುನಾವಣೆ ಮೇ 1993ರಲ್ಲಿ ನಡೆದದ್ದು. ಈ ಚುನಾವಣೆಯಲ್ಲಿ ಎಡರಂಗ ಮೂರನೇ ಎರಡರಷ್ಟು ಸ್ಥಾನಗಳನ್ನು ಗೆದ್ದುಕೊಂಡಿತು. ಗ್ರಾಮಪಂಚಾಯತಿ, ಪಂಚಾಯತ್ ಸಮಿತಿ ಮತ್ತು ಜಿಲ್ಲಾ ಪರಿಷತ್ತುಗಳಲ್ಲಿ ಎಡರಂಗ ಬಹುತೇಕ ಸ್ಥಾನಗಳನ್ನು ಪಡೆದಿವೆ. ಪಂಚಾಯತ್ ಸಮಿತಿಗಳಲ್ಲಿ ಶೇ. 35ಕ್ಕೂ ಹೆಚ್ಚು ಸದಸ್ಯರು ಮಹಿಳೆಯರು. ಶೇ. 28ರಷ್ಟು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಸೇರಿದವರು.

ಜನಸಾಮಾನ್ಯನ ಪರವಾದ ಕಣ್ಣೋಟ

ಈ ಪಂಚಾಯತ್ ಸಂಸ್ಥೆಗಳು ರಾಜ್ಯ ಸರ್ಕಾರದೊಂದಿಗೆ ನಿಕಟ ಸಂಬಂಧವಿರಿಸಿಕೊಂಡು ಯೋಜನೆ, ಆಡಳಿತ ಮತ್ತು ಅಭಿವೃದ್ಧಿ ಯೋಜನೆಗಳ ಅನುಷ್ಠಾನ ಇವೆಲ್ಲವುಗಳನ್ನು ಕೈಗೆತ್ತಿಕೊಂಡಿವೆ. ಇದಲ್ಲದೆ ಸಾಮಾಜಿಕ ಬದಲಾವಣೆ ತರುವ ದಿಸೆಯಲ್ಲಿ ಈ ಸಂಸ್ಥೆಗಳು ತಮ್ಮನ್ನು ಬಹಳ ಬಲಿಷ್ಠವಾಗಿ ರೂಪಿಸಿಕೊಂಡಿವೆ. ಜನ ಸಾಮಾನ್ಯನನ್ನು ಆತ ತನ್ನ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಗುರಿ ಮುಟ್ಟುವಲ್ಲಿ ಸ್ವತಂತ್ರನಾಗಿರುವಂತೆ ರೂಪಿಸುತ್ತಿವೆ.

ರಾಜ್ಯ ಸರ್ಕಾರ ಈ ಪಂಚಾಯತುಗಳ ಮೂಲಕವೇ ತನ್ನ ವಾರ್ಷಿಕ ಬಜೆಟ್‌ನ ಅರ್ಧದಷ್ಟನ್ನು ಖರ್ಚು ಮಾಡುತ್ತಿದೆ. ಪಂಚಾಯತುಗಳ ಮೂಲಕ ಈ ಹಣ ಉದ್ಯೋಗ ಸೃಷ್ಟಿ ಮತ್ತು ಸ್ಥಳೀಯ ಅಭಿವೃದ್ಧಿಗೆ ಹೋಗುತ್ತದೆ. **ಪಶ್ಚಿಮ ಬಂಗಾಳದಲ್ಲಿ ಗ್ರಾಮ ಪಂಚಾಯತಿಗಳ ಮುಖಂಡರು ಕಳೆದ ರಡು ದಶಕಗಳಲ್ಲಿ ತಮ್ಮ ಜನತೆಯ ಸ್ಥಿತಿಗತಿಗಳನ್ನು ನಿರ್ಧರಿಸುವ ಪ್ರೌಢ ಚಿಂತಕರಾಗಿ ಬೆಳೆದಿದ್ದಾರೆ.**

ಇನ್ನೊಂದು ಗಮನ ಸೆಳೆವ ಅಂಶವೆಂದರೆ ಜಮೀನುದಾರಿಗಳ ಪ್ರಭಾವ ಕುಂಠಿತವಾಗಿ ಹೋಗಿದೆ. ಈ ಸಾಧನೆಯನ್ನು ಭಾರತದ ಇನ್ನಾವುದೇ ಭಾಗದಲ್ಲಿ ನಾವು ಕಾಣಲು ಸಾಧ್ಯವಿಲ್ಲ. ಕೇಂದ್ರ ಸರ್ಕಾರ ಮತ್ತು ವಿಶ್ವ ಬ್ಯಾಂಕ್‌ನ ವಿವಿಧ ಅಂಗ ಸಂಸ್ಥೆಗಳ ಪಶ್ಚಿಮ ಬಂಗಾಳದ ಈ ಪಂಚಾಯತ್ ವ್ಯವಸ್ಥೆಯನ್ನು ಶ್ಲಾಘಿಸಿದ್ದಾರೆ.

ಏಕೆ ಯಶಸ್ವಿಯಾಗಿದೆ?

ಇಲ್ಲಿ ಒಂದು ಪ್ರಶ್ನೆ ಉದ್ಭವವಾಗುತ್ತದೆ. ದೇಶದ ಬೇರೆ ಕೆಲವು ರಾಜ್ಯಗಳಲ್ಲೂ ಪಂಚಾಯತ್ ವ್ಯವಸ್ಥೆಯಿದೆ. ಆದರೆ ಅದೇಕೆ ಅಷ್ಟು ಯಶಸ್ವಿಯಾಗಿಲ್ಲ? ಮೊದಲನೆಯದಾಗಿ, ಬೇರೆ ರಾಜ್ಯಗಳ ವ್ಯವಸ್ಥೆಗಳೇ ಬೇರೆ ರಚನಾತ್ಮಕ ಚೌಕಟ್ಟು ಹೊಂದಿವೆ. ಎರಡನೇಯದಾಗಿ ಈ ರಾಜ್ಯಗಳಲ್ಲಿ ಜನಪರ ಕಾಳಜಿಯುಳ್ಳ ಎಡರಂಗದಂತಹ ಸರ್ಕಾರಗಳಿಲ್ಲ.

ಪ.ಬಂಗಾಳದ ಪಂಚಾಯತ್ ರಾಜ್ಯ ಸಂಸ್ಥೆಗಳು ಬಡಜನರ ಪರವಾಗಿರುವುದು ಅದರ ಸದಸ್ಯರ ವರ್ಗ ಮೂಲ ಹುಡುಕಿದರೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಒಂದು ನೂರು ಪಂಚಾಯತಿಗಳನ್ನು ಸಿಬ್ಬಂದಿ ಅಭಿವೃದ್ಧಿ ಇಲಾಖೆ ಸಮೀಕ್ಷೆ ಮಾಡಿತು. ಈ ಸಮೀಕ್ಷೆಯ ಪ್ರಕಾರ ಶೇ. 71ಕ್ಕೂ ಹೆಚ್ಚು ಪಂಚಾಯತ್ ಸದಸ್ಯರು ಸಣ್ಣ ಮತ್ತು ಅತಿ ಸಣ್ಣ ರೈತರು. ದೇಶದ ಇತರೆ 14 ರಾಜ್ಯಗಳ 23 ತಾಲ್ಲೂಕುಗಳಲ್ಲಿ ಇಂತಹದ್ದೇ ಸಮೀಕ್ಷೆ ನಡೆಸಿದಾಗ ಕಂಡು ಬಂದದ್ದು. ಇದಕ್ಕೆ ಪೂರ್ತಿ ವಿರುದ್ಧವಾದದ್ದು ಈ ರಾಜ್ಯಗಳಲ್ಲಿ ಶೇ. 88ರಷ್ಟು ಸದಸ್ಯರು ಮತ್ತು ಶೇ. 95ರಷ್ಟು ಪಂಚಾಯತ್ ಅಧ್ಯಕ್ಷರುಗಳು ಜಮೀನ್ದಾರಿ ಕುಳಗಳು. ಪ.ಬಂಗಾಳದ ಪಂಚಾಯತ್ ರಾಜ್ ವ್ಯವಸ್ಥೆಗೂ ಉಳಿದ ರಾಜ್ಯಗಳ ಪಂಚಾಯತ್ ರಾಜ್ಯ ವ್ಯವಸ್ಥೆಗಳಿಗೂ ಇರುವ ವ್ಯತ್ಯಾಸಗಳನ್ನು ಇದು ಸ್ಪಷ್ಟವಾಗಿ ತೋರಿಸುತ್ತದೆ. ಭೂ ಸುಧಾರಣೆ ಪ. ಬಂಗಾಳದಲ್ಲಿ ಎಲ್ಲರ ಅಭಿವೃದ್ಧಿಗೂ ಮೂಲವಾಗಿರುವುದನ್ನು ಇದು ತೋರುತ್ತದೆ.

ಸಾಮಾಜಿಕವಾಗಿ ನೋಡಿದರೆ ಪಂಚಾಯತ್ ವ್ಯವಸ್ಥೆಯ ಮೂರು ಹಂತಗಳಿಗೆ ಎರಡು ಮಹಿಳಾ ಮತ್ತು ಎರಡು ಪ.ಜಾತಿ/ಪ.ಪಂಗಡದ ಸದಸ್ಯರುಗಳನ್ನು ಆಯಾಯ ಹಂತಗಳಲ್ಲೇ ಆರಿಸಿಕೊಳ್ಳುವ(ಕೋಆಪ್ಟ್ ಮಾಡುವ) ಅವಕಾಶವನ್ನು ಮೊದಲಿನಿಂದಲೇ ಇಡಲಾಗಿತ್ತು. ವರ್ಗ ಅಸಮಾನತೆಗಳಿರುವವರೆಗೂ ಜಾತಿ ಮತ್ತು ಲಿಂಗ ಅಸಮತೆ ಇದ್ದೇ ಇರುತ್ತದೆ. ಆದ್ದರಿಂದ ಇದನ್ನು ಪ್ರಜ್ಞಾಪೂರ್ವಕ ಪ್ರಯತ್ನಗಳಿಂದ ತೊಡೆದು ಹಾಕಬೇಕೆಂಬ ಸರ್ಕಾರದ ಅರಿವು ಇಂತಹ ಅವಕಾಶ ಕಲ್ಪಿಸಲು ಇದ್ದ ಪ್ರೇರಣೆ.

ಹಣಕಾಸು ವಿಕೇಂದ್ರೀಕರಣ ಕೂಡಾ

ಎಡರಂಗ ಸರ್ಕಾರ ಬರೀ ಅಧಿಕಾರದ ವಿಕೇಂದ್ರೀಕರಣವನ್ನು ಮಾಡಲಿಲ್ಲ, ಜೊತೆಗೆ ಸಂಪನ್ಮೂಲದ ವಿಕೇಂದ್ರೀಕರಣವನ್ನು ಮಾಡಿತು. ಉದಾಹರಣೆ ತೆಗೆದುಕೊಳ್ಳುವುದಾದರೆ ಪಂಚಾಯತ್ ಸಮಿತಿ ಮತ್ತು ಗ್ರಾಮ ಪಂಚಾಯತಿಗಳಿಗೆ ಪ್ರತಿ ವರ್ಷವೂ ಹೆಚ್ಚೆಚ್ಚು ಹಣ ನೀಡಲಾಗುತ್ತಿದೆ. 1987¥88ರಲ್ಲಿ ಪ್ರತಿ ಪಂಚಾಯತ್ ಸಮಿತಿ ಮತ್ತು ಗ್ರಾಮ ಪಂಚಾಯತಿಗೆ ಅನುಕ್ರಮವಾಗಿ 21.20 ಲಕ್ಷ ಮತ್ತು 1.87 ಲಕ್ಷ ರೂಪಾಯಿಗಳು ಸಿಗುತ್ತಿದ್ದವು. ಮುಂದೆ ಎರಡೇ ವರ್ಷಗಳಲ್ಲಿ ಈ ಹಣದ ಪ್ರಮಾಣ ಶೇ. 250 ಕ್ಕೂ ಹೆಚ್ಚಾಯಿತು.

ಇದಲ್ಲದೆ ಪಂಚಾಯತ್ ಸಂಸ್ಥೆಗಳು ಲೋಕೋಪಯೋಗಿ, ನೀರಾವರಿ, ವಿದ್ಯುತ್‌ನಂತಹ ವಲಯಗಳಲ್ಲೂ ಪ್ರವೇಶಿಸಿದವು. ವಿಕೇಂದ್ರೀಕರಣ ಎಷ್ಟು ಆಳವಾಗಿದೆ ಎಂಬುದನ್ನು ಇದು ತೋರಿಸಿಕೊಡುತ್ತದೆ.

ಪಂಚಾಯತ್ ಸಂಸ್ಥೆಗಳಿಗೆ ಸಿಬ್ಬಂದಿ ಬೆಂಬಲವನ್ನು ಹೆಚ್ಚಿಸಲಾಗಿದೆ. ಜಿಲ್ಲಾ ಮ್ಯಾಜಿಸ್ಟ್ರೇಟರುಗಳನ್ನು (ನಮ್ಮಲ್ಲಿನ ಡೆಪ್ಯುಟಿ ಕಮೀಷನರ್ ಯಾ ಡಿ.ಸಿ) ಜಿಲ್ಲಾ ಪರಿಷತ್‌ನ ಕಾರ್ಯಕಾರಿ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ. ಹೆಚ್ಚುವರಿ ಕಾರ್ಯಕಾರಿ ಅಧಿಕಾರಿಯೊಬ್ಬರನ್ನು ನೀಡಲಾಗಿದೆ. ಜಿಲ್ಲಾ ಪರಿಷತ್ತುಗಳಿಗೆ ರಾಜ್ಯದ ಹಿರಿಯ ಅಧಿಕಾರಿಗಳನ್ನು ಕಾರ್ಯದರ್ಶಿಗಳನ್ನಾಗಿ ನೇಮಿಸಲಾಗಿದೆ. ತಾಂತ್ರಿಕ ಅಧಿಕಾರಿಗಳು ಇಂಜಿನಿಯರ್‌ಗಳೆಲ್ಲ ಈ ಜಿಲ್ಲಾ ಪರಿಷತ್ತುಗಳ ಅಧೀನಕ್ಕೆ ಒಳಪಡುತ್ತವೆ. ತಾಲೂಕು ಅಭಿವೃದ್ಧಿ ಕಛೇರಿಯ ಸಿಬ್ಬಂದಿಗಳೆಲ್ಲ ಜಿಲ್ಲಾ ಪರಿಷತ್‌ನ ಅಧೀನದೊಳಗೆ.

ಹೀಗೆ ವಿಕೇಂದ್ರೀಕರಣವೆಂಬುದು ಇಲ್ಲಿ ಒಂದೇ ಒಂದು ಅಂಶದ್ದಲ್ಲ, ಎಲ್ಲ ತರಹದ ವಿಕೇಂದ್ರೀಕರಣವನ್ನು ಮಾಡಲಾಗಿದೆ.

ಇದಲ್ಲದೆ ಚುನಾಯಿತ ಸಭಾಧಿಪತಿಗಳು ಜಿಲ್ಲಾ ಯೋಜನಾ ಸಮಿತಿ ಜಿಲ್ಲಾ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೀನುಗಾರರ ಅಭಿವೃದ್ಧಿ ಸಂಸ್ಥೆ ಇತ್ಯಾದಿ ಜಿಲ್ಲಾ ಮಟ್ಟದ ಸಂಸ್ಥೆಗಳಿಗೆ ಮುಖ್ಯಸ್ಥರಾಗಿರುತ್ತಾರೆ. ಆದ್ದರಿಂದ ಎಲ್ಲ ತರಹದ ಅಭಿವೃದ್ಧಿ ಕಾರ್ಯಗಳನ್ನು ಈ ಜಿಲ್ಲಾ ಪರಿಷತ್ತುಗಳು ಕೈಗೆತ್ತಿಗೊಳ್ಳಬಹುದು.

ಯೋಜನಾ ಪದ್ಧತಿಯ ವಿಕೇಂದ್ರೀಕರಣ ಏಳನೇ ಪಂಚವಾರ್ಷಿಕ ಯೋಜನೆಯ ಆರಂಭದಲ್ಲೇ ಎಡರಂಗ ಸರ್ಕಾರ ಯೋಜನಾ ಪ್ರಕ್ರಿಯೆಯನ್ನು ಪೂರ್ಣವಾಗಿ ವಿಕೇಂದ್ರೀಕರಿಸುವ ಕ್ರಮವನ್ನು ಕೈಗೊಂಡಿತು. ಯೋಜನಾ ಸಮಿತಿಗಳನ್ನು ರಚಿಸಿದ್ದು ಆಗಲೇ (1983-86). ಇವುಗಳಿಗೆ ಅನುಕ್ರಮವಾಗಿ ಸಭಾಪತಿ ಮತ್ತು ಸಭಾಧಿಪತಿ ಮುಖ್ಯಸ್ಥರು.

ಈಗ ಈ ಸಮಿತಿಗಳಿಗೆ ವಾರ್ಷಿಕ ಬಜೆಟ್ಟಿನಲ್ಲಿ ಅವಕಾಶ ಮಾಡಲಾಗುತ್ತದೆ. ಇದಲ್ಲದೆ ಜಿಲ್ಲಾ ವಿಶೇಷ ಯೋಜನೆಗಳನ್ನು ಈ ಜಿಲ್ಲಾ ಯೋಜನಾ ಸಮಿತಿ ರೂಪಿಸಿದ್ದರೆ ಅವುಗಳಿಗೆ ವಿಶೇಷ ಬಜೆಟ್ಟನ್ನು ಮಾಡಲಾಗುತ್ತದೆ. ಈ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುವಲ್ಲಿನ ತೀರ್ಮಾನ ಕೈಗೊಳ್ಳುವಲ್ಲಿ ಜಿಲ್ಲಾ ಯೋಜನಾ ಸಮಿತಿ ಅಥವಾ ಕ್ಷೇತ್ರ ಯೋಜನಾ ಸಮಿತಿ ಪರಮಾಧಿಕಾರ.

ಪಶ್ಚಿಮ ಬಂಗಾಳದಲ್ಲಿ ಎಡರಂಗದ ನೇತೃತ್ವದಲ್ಲಿ ಪಂಚಾಯತೀ ರಾಜ್ಯ ಸಾಧಿಸಿದ್ದೇನು?

- ಪಂಚಾಯತು ಸಮಿತಿಗಳಲ್ಲಿ 35 ಶೇಕಡಕ್ಕೂ ಹೆಚ್ಚು ಮಹಿಳೆಯರು 28 ಶೇ. ದಷ್ಟು ಪರಿಶಿಷ್ಟ ಜಾತಿ/ಬುಡಕಟ್ಟುಗಳಿಗೆ ಸೇರಿದವರು.
- 71 ಶೇ.ಕ್ಕೂ ಹೆಚ್ಚು ಪಂಚಾಯತು ಸದಸ್ಯರುಗಳೂ ಮತ್ತು ಅತೀ ಸಣ್ಣ ರೈತರು. ತದ್ವಿರುದ್ಧವಾಗಿ ಇತರ ರಾಜ್ಯಗಳಲ್ಲಿ ಶೇ. 88 ಪಂಚಾಯತೀ ಸದಸ್ಯರು ಮತ್ತು ಶೇ. 95 ಪಂಚಾಯತು ಅಧ್ಯಕ್ಷರುಗಳು ಜಮೀಂದಾರಿ ಕುಳಗಳು.
- 1981-91ರ ನಡುವೆ ಇಲ್ಲಿ ಗ್ರಾಮೀಣ ಉದ್ಯೋಗರಹಿತರ ಸಂಖ್ಯೆ ಕಡಿಮೆಯಾಗಿದೆ.
- ಆಹಾರಧಾನ್ಯ ಉತ್ಪಾದನೆ ದುಪ್ಪಟ್ಟಾಗಿದೆ. ಈಗ ಅದು ದೇಶದಲ್ಲೇ ಅತೀ ಹೆಚ್ಚು ಆಹಾರಧಾನ್ಯ ಉತ್ಪಾದನೆ ಮಾಡುವ ರಾಜ್ಯ.
- ಬೇರೆಡೆ ಕೃಷಿಕೂಲಿಕಾರರ ಸಂಖ್ಯೆ ಹೆಚ್ಚುತ್ತಿದ್ದರೆ ಇಲ್ಲಿ ಮಾತ್ರ ಕಮ್ಮಿಯಾಗಿದೆ.
- ಬಡತನದ ರೇಖೆಯ ಕೆಳಗಿರುವವರ ಸಂಖ್ಯೆ ಇಳಿಮುಖಗೊಳ್ಳುತ್ತಿದೆ.

ಸಮಾಜ ವಿಜ್ಞಾನಿಗಳು ಏನನ್ನುತ್ತಾರೆ?

ಪ.ಬಂಗಾಳದ ಪಂಚಾಯತ್ ರಾಜ್ಯ ವ್ಯವಸ್ಥೆ ಭೂಸುಧಾರಣೆ ಇತ್ಯಾದಿಗಳನ್ನು ನಾವೇ ಹೊಗಳಿದರೆ ಅದು ಸ್ವಪ್ರಶಂಸೆಯಾಗಿಬಿಡುತ್ತದೆ. ವಸ್ತುನಿಷ್ಠತೆಯುಳ್ಳ ಬೇರೆಯವರು (ಸಮಾಜ ವಿಜ್ಞಾನಿಗಳು) ಏನು ಹೇಳುತ್ತದೆಂದು ನೋಡೋಣ.

● ಜಿ.ಕೆ. ಲಿಟನ್ ಎಂಬುವರು ಹೀಗೆ ಹೇಳುತ್ತಾರೆ -"ಪಶ್ಚಿಮ ಬಂಗಾಳದಲ್ಲಿ ಕಮ್ಯುನಿಸ್ಟರ ಮುಂದಾಳತ್ವದ ಎಡರಂಗದ ಸರ್ಕಾರ ಕಳೆದ ಸುಮಾರು ಎರಡು ದಶಕಗಳ ಕಾಲ ಅಧಿಕಾರದಲ್ಲಿರುವುದು ಹಲವು ವೀಕ್ಷಕರಿಗೆ ಅಶ್ಚರ್ಯಕರವಾಗಿದೆ. ಹಲವು ಪ್ರಾದೇಶಿಕ, ಸ್ಥಳೀಯ ಹಾಗೂ ರಾಷ್ಟ್ರೀಯ ಚುನಾವಣೆಗಳ ಪರೀಕ್ಷೆಯಲ್ಲಿ ಅದು ಗೆದ್ದಿದೆ. ಭಾರತದ ತೀವ್ರ ಬದಲಾವಣೆಯ ರಾಜಕೀಯ ಬಿರುಗಾಳಿಯಲ್ಲಿ ಅದು ಅಚಲವಾಗಿ ನಿಂತಿದೆ. ವಿವೇಚಿಸದೆ ಹೊಗಳುವವರು ಮತ್ತು ತಿರಸ್ಕಾರದಿಂದ ಖಂಡಿಸುವವರುಗಳ ದಾರಿ ಹಿಡಿಯದೆ ವಸ್ತುನಿಷ್ಠವಾಗಿ ನೋಡಿದರೆ ಪಶ್ಚಿಮ ಬಂಗಾಳದ ಪಂಚಾಯತ್ ರಾಜ್ ವ್ಯವಸ್ಥೆ ಯಶಸ್ಸಿನ ಹಿಂದೆ ಅದು ಇದೆ ಎಂಬುದು ಎದ್ದು ಕಾಣುತ್ತದೆ." (ಇಕಾನಾಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿಯ ಜುಲೈ 16, 1994ರ ಸಂಚಿಕೆಯಲ್ಲಿ ಪ್ರಕಟವಾದ 'ಪಶ್ಚಿಮ ಬಂಗಾಳದ ಕುರಿತು ಒಂದು ಹೊಸ ಚರ್ಚೆಗಾಗಿ' ಎಂಬ ಸಂಶೋಧನಾ ಲೇಖನದಲ್ಲಿ).

● ಪಂಚಾಯತ್ ಪದ್ಧತಿ ಗ್ರಾಮೀಣ ಮಹಿಳೆಯರು, ಪ.ಜಾತಿ/ ಪ.ಪಂಗಡಗಳು ಮುಂದುವರಿಯುವಂತೆ ಹೇಗೆ ಮಾಡಿತು ಎಂಬುದನ್ನೂ ಅವರು ವಿವರಿಸುತ್ತಾರೆ.

"ಪ.ಬಂಗಾಳದ ಈ ಪ್ರಯೋಗದಿಂದ ಗ್ರಾಮೀಣ ಅಭಿವೃದ್ಧಿ ಆಗಿದೆ ಎಂಬುದನ್ನು ತೋರಿಸುತ್ತದೆ. ಇಲ್ಲಿ ಹಲವು ಸೂಚಿಗಳನ್ನು ಉಪಯೋಗಿಸಬಹುದು.

1. ಹಳ್ಳಿಗಳಿಂದ ಬೇರೆ ಪ್ರದೇಶಕ್ಕೆ ಗುಳೇ ಹೋಗುವುದು ಪೂರ್ತಿ ನಿಂತಿದೆ.
2. ದೇಶದ ಬೇರೆ ಪ್ರದೇಶಗಳಲ್ಲಿ 1981-91ರ ನಡುವೆ ಗ್ರಾಮೀಣ ಉದ್ಯೋಗರಹಿತರ ಸಂಖ್ಯೆ ಹೆಚ್ಚಾಗಿದ್ದರೆ ಪಶ್ಚಿಮ ಬಂಗಾಳದಲ್ಲಿ ಅದು ಕಡಿಮೆಯಾಗಿದೆ.
3. ಕೃಷಿ ಉತ್ಪಾದನೆ ಎಪ್ಪತ್ತರ ದಶಕದ ಮಧ್ಯಭಾಗದಿಂದ ತೊಂಬತ್ತರ ದಶಕದ ಮೊದಲ ಭಾಗದವರೆಗೆ ದುಪ್ಪಟ್ಟು ಹೆಚ್ಚಾಗಿದೆ. 1985-90ರ ನಡುವೆ ಆಹಾರ ಧಾನ್ಯ ಉತ್ಪಾದನೆಯಲ್ಲಿ ಪ.ಬಂಗಾಳ ದೇಶದಲ್ಲೇ ಮೊದಲ ಸ್ಥಾನಕ್ಕೆ ಏರಿದೆ.
4. ಧ್ರುವೀಕರಣ ಮತ್ತು ರೈತರು ಕೂಲಿಕಾರರಾಗುವುದು ಪೂರ್ತಿ ನಿಂತಿದೆ. ಒಟ್ಟಾರೆ ದುಡಿವ ಜನಸಂಖ್ಯೆ ತೆಗೆದುಕೊಂಡರೆ ಪ.ಬಂಗಾಳದಲ್ಲಿ ಮಾತ್ರ ಕೃಷಿಕೂಲಿಕಾರರ ಸಂಖ್ಯೆ ಕಡಿಮೆಯಾಗಿರುವುದು.
5. ಜನರ ದಿವಾಳೀಕರಣವೂ ಬದಲಾಗಿದೆ. ಬಡತನ ಇದೆ ಆದರೆ ಜನ ಬೀದಿ ಪಾಲಾಗಿಲ್ಲ. ಗ್ರಾಮೀಣ ಮಟ್ಟದ ಅಧ್ಯಯನಗಳು ಕೃಷಿ ಕೂಲಿಕಾರರು ಮತ್ತು ಬಡರೈತರು ಕೃಷಿ ಉತ್ಪಾದನೆಯ ಹೆಚ್ಚಳದಿಂದ ಲಾಭ ಪಡೆದಿರುವುದನ್ನು ತೋರಿಸುತ್ತದೆ. ಬಡತನ ರೇಖೆಗಿಂತ ಕೆಳಗಿರುವ ಜನಸಂಖ್ಯೆ ಬಹಳ ವೇಗದಲ್ಲಿ ಕಡಿಮೆಯಾಗಿದೆ. ಶೇ.27.7. ಈ ಸಂಖ್ಯೆ ಪಕ್ಕದ ರಾಜ್ಯಗಳಾದ ಒರಿಸ್ಸಾ ಮತ್ತು ಬಿಹಾರಗಳಲ್ಲಿ (ಶೇ. 44.7 ಮತ್ತು ಶೇ. 40.8) ಹೆಚ್ಚಾಗೇ ಇದೆ.

● ಲೀಟನ್‌ಗಿಂತ ಹೆಚ್ಚು ನಿಷ್ಠುರ ಟೀಕಾಕಾರ ನೀಲ್ ವೆಬ್ಸ್ಟರ್ "ಹಿಂದೆಲ್ಲ ಅಭಿವೃದ್ಧಿ ಕಾರ್ಯಕ್ರಮಗಳು ನಿರ್ಲಕ್ಷಿಸಿದ ಅಥವಾ ಈ ಕಾರ್ಯಕ್ರಮಗಳಿಂದ ತಪ್ಪಿಸಿಕೊಂಡ ಗ್ರಾಮೀಣ ಜನತೆಯ ಭೌತಿಕ ಮತ್ತು ರಾಜಕೀಯ ಸ್ಥಿತಿಗಳಲ್ಲಿ ಗುಣಾತ್ಮಕ ಬದಲಾವಣೆ ಆಗಿದೆ" ಎಂದಿದ್ದಾರೆ.

15ನೇ ರಾಜ್ಯ ಸಮ್ಮೇಳನದ ಪೂರ್ವಭಾವಿಯಾಗಿ

ಸಿಪಿಐ(ಎಂ) 15ನೇ ಬೆಂಗಳೂರು ಜಿಲ್ಲಾ ಸಮ್ಮೇಳನ

ಮಾರ್ಕ್ಸ್‌ವಾದ-ಲೆನಿನ್‌ವಾದಕ್ಕೆ ಎಂದಿಗೂ ಸೋಲಿಲ್ಲ, ಬಂಡವಾಳಶಾಹಿ ವ್ಯವಸ್ಥೆಗೆ ಮಾನವನ ಮೂಲಭೂತ ಸಮಸ್ಯೆಗಳಿಗೆ ಪರಿಹಾರ ನೀಡಲು ಸಾಧ್ಯವಿಲ್ಲ, ಸಮಾಜವಾದಿ ಸೋವಿಯತ್ ರಷ್ಯಾ ಹಾಗೂ ಪೂರ್ವ ಯುರೋಪ್‌ನ ಪತನ ಕೇವಲ ತಾತ್ಕಾಲಿಕ ಹಿನ್ನಡೆ ಎಂಬುದು ಇತ್ತೀಚಿನ ದಿನಗಳಲ್ಲಿ ಪೂರ್ವ ಯುರೋಪ್, ನೇಪಾಳ ದಕ್ಷಿಣ ಆಫ್ರಿಕಾ, ಇಟಲಿ, ರಷ್ಯಾ ಮುಂತಾದ ಕಡೆಗಳಲ್ಲಿ ಆದ ಬೆಳವಣಿಗೆಗಳಿಂದ ಸಾಬೀತಾಗಿದೆ, ಮಾರ್ಕ್ಸ್‌ವಾದ ಲೆನಿನ್‌ವಾದ ಇಂದಿಗೂ ಅತ್ಯಂತ ಪ್ರಸ್ತುತ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಪಿ. ರಾಮಚಂದ್ರರಾವ್ ಹೇಳಿದರು.

ಅವರು ಸಿಪಿಐ(ಎಂ)ನ 15ನೇ ಬೆಂಗಳೂರು ಜಿಲ್ಲಾ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಇದೇ ಸಂದರ್ಭದಲ್ಲಿ ಸಿಪಿಐ(ಎಂ) ರಾಜ್ಯ ಮುಖಂಡರಾದ ಎಸ್. ಸೂರ್ಯನಾರಾಯಣ ರಾವ್ ಅವರು ಮಾತನಾಡಿ ವೈಜ್ಞಾನಿಕ ಸಮಾಜವಾದಿ ಸಿದ್ಧಾಂತದ ಆಧಾರದಲ್ಲಿ ಬಲಿಷ್ಠವಾದ ಕ್ರಾಂತಿಕಾರಿ ಪಕ್ಷವನ್ನು ಕಟ್ಟಿ ಬೆಳೆಸಬೇಕೆಂದು ಕರೆ ನೀಡಿದರು.

ನಗರದ ಶ್ರೀರಾಮಪುರದ ಸಾಯಿಬಾಬಾ ಕಲ್ಯಾಣ ಮಂಟಪದಲ್ಲಿ ಫೆಬ್ರವರಿ 14 ರಿಂದ 16ರವರೆವಿಗೂ ನಡೆದ ಈ ಸಮ್ಮೇಳನದ ಉದ್ಘಾಟನಾ ಅಧಿವೇಶನದಲ್ಲಿ ಸಿಪಿಐ(ಎಂ) ರಾಜ್ಯ ಮುಖಂಡರಾದ ವಿ.ಜೆ.ಕೆ. ನಾಯರ್ ಜಿಲ್ಲಾ ಕಾರ್ಯದರ್ಶಿ ಆರ್. ಶ್ರೀನಿವಾಸ್ ಸಹ ಮಾತನಾಡಿದರು.

ಸೈದ್ಧಾಂತಿಕ, ಸಂಘಟನಾತ್ಮಕ, ಜನರ ಸಮಸ್ಯೆಗಳ ಪ್ರಶ್ನೆಗಳ ವಿವಿಧ ಶಾಖೆ, ರಂಗಗಳಿಂದ ಬಂದ ಪಕ್ಷ 60 ಪ್ರತಿನಿಧಿಗಳು ಚರ್ಚಿಸಲಾಗಿದೆ. ಬೆಂಗಳೂರು ಜಿಲ್ಲೆಯಲ್ಲಿ ಚಳುವಳಿಯನ್ನು ಮುನ್ನಡೆಸಲು ೨೫ ಜನರ ಹೊಸ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಿತು. ಆರ್. ಶ್ರೀನಿವಾಸ್ ಅವರು ಕಾರ್ಯದರ್ಶಿಯಾಗಿ ಪುನರಾಯ್ಕೆಗೊಂಡಿದ್ದಾರೆ. ಒಟ್ಟು 119 ಜನ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು.

ಬೀದರ್

ಸಿಪಿಐ(ಎಂ)ನ 2ನೇ ಬೀದರ್ ಜಿಲ್ಲಾ ಸಮ್ಮೇಳನ ಫೆಬ್ರವರಿ 11 ಮತ್ತು 12 ರಂದು ನಡೆಯಿತು. ಸಮ್ಮೇಳನಕ್ಕೆ ಮುನ್ನ ನಡೆದ ಬೃಹತ್ ಮೆರವಣಿಗೆಯು ಹಳೆ ಬಸ್ ನಿಲ್ದಾಣದ ಎದುರು ಸಮಾವೇಶಗೊಂಡಿತು. ಸಭೆಯನ್ನು ಉದ್ದೇಶಿ ಕಾಂ. ಕೆ. ನೀಲ ಕಾಂ. ಸಂಗ್ರಾಮ್ ಮಾತನಾಡಿದರು. ಸಭೆಯ ಸಂಚಾಲನೆಯನ್ನು ಎಂ.ಎಸ್. ಮನೋಹರ ನಡೆಸಿಕೊಟ್ಟರು. ಸಭೆಯ ಅಧ್ಯಕ್ಷತೆಯನ್ನು ಕಾಂ. ಮೌಲಾನ ವಹಿಸಿದ್ದರು.

ಬೀದರ್ ಜಿಲ್ಲಾ ಸಮಿತಿ ಕಾರ್ಯದರ್ಶಿಯಾಗಿ ಕಾಂ. ಸಂಗ್ರಾಮ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಗುಲ್ಬರ್ಗಾ

ಜನತೆಯ ಆಶೋತ್ತರಗಳನ್ನು ಕಡೆಗಣಿಸಿದಲ್ಲಿ ಹಿಂದಿನ ಕಾಂಗ್ರೆ ಸರಕಾರಕ್ಕೆ ಆದ ಗತಿಯೇ ಆದೀತೆಂದು ಮಾರ್ಕ್ಸ ವಾದಿ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಸಮ್ಮೇಳನ ರಾಜ್ಯ ಜನತಾದಳ ಸರಕಾರಕ್ಕೆ ಎಚ್ಚರಿಕೆ ನೀಡಿದೆ.

ಫೆಬ್ರವರಿ 3 ರಿಂದ 5ರವರೆಗೆ ಶಹಾಪುರದಲ್ಲಿ ನಡೆದ ಈ ಸಮ್ಮೇಳನದಲ್ಲಿ ಕಾಂಗ್ರೆ ಸರಕಾರದ ಅಧಿಕಾರದ ಅವಧಿಯಲ್ಲಿ ಜಿಲ್ಲೆಯ ರೈತರು ಹಾಗೂ ರಾಜಶ್ರೀ ಸಿಮೆಂಟ್ ಕಾರ್ಖಾನೆ ಕಾರ್ಮಿಕರ ವಿರುದ್ಧ ಹಾಕಲಾದ ಮೊಕದ್ದಮೆಗಳನ್ನು ವಾಪಸು ಪಡೆಯುವಂತೆ ಹಾಗೂ ಅಕ್ರಮ ಸಾಗುವಳಿ ಮಾಡಿದ ಭೂ ಹೀನರಿಗೆ ಪಟ್ಟಾ ಕೊಡುವದೂ ಸೇರಿದಂತೆ 12 ಬೇಡಿಕೆಗಳ ಈಡೇರಿಕೆಗೆ ಸರಕಾರವನ್ನು ಒತ್ತಾಯಿಸುವ ನಿರ್ಣಯ ಸ್ವೀಕರಿಸಲಾಯಿತು ಎಂದು ಜಿಲ್ಲಾ ಸಮಿತಿ ಪ್ರಕಟಣೆ ತಿಳಿಸಿದೆ.

ಸಮ್ಮೇಳನಾರಂಭಕ್ಕೆ ಮುಂಚೆ ನಡೆದ ಬೃಹತ್ ರ್‍ಯಾಲಿಯನ್ನುದ್ದೇಶಿಸಿ ಪಕ್ಷದ ರಾಜ್ಯಕಾರ್ಯದರ್ಶಿ ಪಿ. ರಾಮಚಂದ್ರರಾವ್ ಹಾಗೂ ಎನ್.ಕೆ. ಉಪಾಧ್ಯಾಯ ಮಾತನಾಡಿದರು. ಕಾರ್ಮಿಕ ಮುಖಂಡ ಎ.ಬಿ. ದಾಸ್ ಸಮ್ಮೇಳನವನ್ನು ಉದ್ಘಾಟಿಸಿದರು.

ಇದೇ ಸಂದರ್ಭದಲ್ಲಿ ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯರಾಗಿ ಮಾರುತಿ ಮಾನ್ಪಡೆ, ಎ.ಬಿ.ದಾಸ್, ಚನ್ನಪ್ಪ ಕಲ್ಲಪ್ಪ ಕಿರಣಗಿ, ಬಾಬು ಹಿರಮಶೆಟ್ಟಿ, ಶಾಂತಕುಮಾರ, ಮೇಘರಾಜ ಕಠಾರೆ, ಬಸವರಾಜ ಮರಡಿ, ಸಿ.ಎ. ಪಾಟೀಲ, ಗುಲಾಂ ಇಬ್ರಾಹಿಂ, ಅಬ್ದುಲ್ ... ಹುನ್ನಬಾಯಿ, ಹಳ್ಳೆಪ್ಪಾ ಹವಾಲ್ದಾರ್, ಗಂಗೂಬಾಯಿ ಸಾಲ್ಗಿ, ಸುಧಾಮ ಧನ್ನಿ, ರಾಜಶೇಖರ ಜಕ್ಕಾ ಹಾಗೂ ಚಂದು ಜಾಧವ್ ಅವರನ್ನು ಆಯ್ಕೆ ಮಾಡಲಾಯಿತು.

ಮಾರುತಿ ಮಾನ್ಪಡೆಯವರನ್ನು ಮುಂದಿನ ಮೂರು ವರ್ಷದ ಅವಧಿಗೆ ಜಿಲ್ಲಾ ಸಮಿತಿ ಕಾರ್ಯದರ್ಶಿಯಾಗಿ ಅವಿರೋಧವಾಗಿ ಆಯ್ಕೆ ಮಾಡಿತು.

ಸಿಪಿಐ(ಎಂ) ತಾಲೂಕು ಸಮ್ಮೇಳನ

ಕುಂದಾಪುರ: ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್ ವಾದಿ)ದ ಕುಂದಪುರ ತಾಲೂಕಿನ ೧೫ನೇ ಸಮ್ಮೇಳನವು ಕುಂದಾಪುರ ನೆಹರು ಸ್ಪೋರ್ಟ್ಸ ಪೆವಿಲಿಯನ್‌ನಲ್ಲಿ ಫೆಬ್ರವರಿ 14 ರಂದು ಅಬ್ರಹಾಂ ಕರ್ಕಡರವರ ಅಧ್ಯಕ್ಷತೆಯಲ್ಲಿ ಸೇರಿತು. ಪಕ್ಷದ ಹಿರಿಯ ಸದಸ್ಯರಾದ ಕಾಂ.ಸಿ.ನಾರಾಯಣರವರು ಆರಂಭದಲ್ಲಿ ಧ್ವಜಾರೋಹಣ ಮಾಡಿದ ಬಳಿಕ, ತಾಲೂಕಿನ ಕಾರ್ಯದರ್ಶಿಯವರಾದ ಕೆ. ಶಂಕರ್‌ರವರು ಪ್ರತಿನಿಧಿ ಸಂಗಾತಿಗಳನ್ನು ಸ್ವಾಗತಿಸಿ, ಕಳೆದ ೩ ವರ್ಷಗಳ ಸಂಘಟನೆ ಮತ್ತು ಹೋರಾಟದ ಕುರಿತು ಲಿಖಿತ ವರದಿಯನ್ನು ಸಮ್ಮೇಳನದ ಮುಂದೆ ಮಂಡಿಸಿದರು.

ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯ ಸದಸ್ಯರಾದ ಕಾಂ. ಡೇವಿಡ್ ಕರ್ಕಡರವರು ಸಮ್ಮೇಳನದ ಉದ್ಘಾಟನೆ ಮಾಡಿ, ಪಕ್ಷದ ಮತ್ತು ಸಾಮೂಹಿಕ ಸಂಘಟನೆಗಳ ಬೆಳವಣಿಗೆ ಹಾಗೂ ದೇಶದ ರಾಜಕೀಯ ಪರಿಸ್ಥಿತಿಯ ಕುರಿತು ವಿವರಣೆ ನೀಡಿದರು.

ಮುಖ್ಯ ಅತಿಥಿಯಾಗಿ ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿಯವರಾದ ಕೆ.ಆರ್. ಶ್ರೀಯಾನ್‌ರವರು ಭಾಗವಹಿಸಿದ್ದರು.

13 ಮಂದಿ ಸದಸ್ಯರಿರುವ ತಾಲೂಕು ಸಮಿತಿಯನ್ನು ರಚಿಸಿ, ಸಮಿತಿಯ ಕಾರ್ಯದರ್ಶಿಯಾಗಿ ಕೆ. ಶಂಕರ್ ರವರನ್ನು ಆಯ್ಕೆ ಮಾಡಲಾಯಿತು.

ಮಹಾನಗರ ಪಾಲಿಕಾ ಸಮಿತಿಯ ಸಮ್ಮೇಳನ

ಮಂಗಳೂರು: ಸಿಪಿಐ(ಎಂ) ಮಂಗಳೂರು ಮಹಾ ನಗರಪಾಲಿಕಾ ಸಮಿತಿಯ ಸಮ್ಮೇಳನವು ಫೆಬ್ರವರಿ 16 ರಂದು ದೇರೆಬೈಲು ಕೊಂಚಾಡಿ ಯುವಕ ಕಲಾ ಮಂಡಳಿಯ ಸಭಾ ಭವನದಲ್ಲಿ ನಡೆಯಿತು.

ಮಾಜಿ ಪಂಚಾಯತ್ ಅಧ್ಯಕ್ಷರೂ ಹಿರಿಯ ಸಂಗಾತಿಯೂ ಆದ ಕಾಜಾರಪ್ಪನವರು ಧ್ವಜಾರೋಹಣಗೈದರು. ಉದ್ಘಾಟನ ಸಮಾರಂಭದ ಅಧ್ಯಕ್ಷತೆಯನ್ನು ಕಾಜಾರಪ್ಪನವರು ವಹಿಸಿದ್ದರು. ಪಕ್ಷದ ಜಿಲ್ಲಾ ಸಮಿತಿ ಸದಸ್ಯ ಕಾಂ. ಬಾಲಕೃಷ್ಣ ಶೆಟ್ಟಿಯವರು ಹುತಾತ್ಮರಿಗೆ ಶ್ರದ್ಧಾಂಜಲಿಯನ್ನರ್ಪಿಸುವ ನಿರ್ಣಯವನ್ನು ಮಂಡಿಸಿ ಒಂದು ನಿಮಿಷದ ಮೌನ ಪ್ರಾರ್ಥನೆ ಸಲ್ಲಿಸಲಾಯಿತು. ಪಕ್ಷದ ಜಿಲ್ಲಾ ಸಮಿತಿ ಸೆಕ್ರೆಟಾರಿಯೆಟ್ ಸದಸ್ಯ ಕಾಂ.ಬಿ.ಮಾಧವರವರು ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು.

ಆರಂಭದಲ್ಲಿ ಕಾಂ. ಬಾಬು ದೇವಾಡಿಗರು ಸ್ವಾಗತಿಸಿ, ನಗರ ಸಮಿತಿ ಕಾರ್ಯದರ್ಶಿ ಕಾಂ ಕಮಲಾಕ್ಷ ಬಂಗೇರರು ಧನ್ಯವಾದವಿತ್ತರು.

15ನೇ ಮಹಾಧಿವೇಶನಕ್ಕೆ ಮುನ್ನಡೆಯೋಣ

ಪುಟ 1ರಿಂದ

ಕರ್ತರು ಮೈಗೂಡಿಸಿಕೊಳ್ಳಬೇಕಾಗಿದೆ. ಅದೂ ಅತಿ ಶೀಘ್ರವಾಗಿ!

ನಮ್ಮ ಕಾರ್ಯಕರ್ತರ ನೇತೃತ್ವದಲ್ಲಿ ಪೇಟೆ ಪಟ್ಟಣಗಳಲ್ಲಿ ನಾವು ಸಂಘಟಿಸುತ್ತಾ ಬಂದ ಕಾರ್ಮಿಕ-ನೌಕರರ ವಿಭಾಗಗಳನ್ನು ಒಂದೆಡೆ, ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ನಾವು ಸಂಘಟಿಸುತ್ತಾ ಬಂದ ಬಡ ರೈತ-ಕೃಷಿ ಕೂಲಿಕಾರರ ವಿಭಾಗಗಳನ್ನು ಇನ್ನೊಂದೆಡೆ, ರಾಜಕೀಯವಾಗಿ ಜಾಗ್ರತಗೊಳಿಸಿ, ಅವ್ಯಾಹತವಾಗಿ ನಡೆಯುತ್ತಿರುವ ಅನ್ಯಾಯಗಳ ವಿರುದ್ಧ ಸತತವಾಗಿ ಈ ಹೋರಾಟಗಳು ನಡೆಯುತ್ತಾ ಹೋದಂತೆ ಈ ಜನವಿಭಾಗಗಳ ರಾಜಕೀಯ ನೇತೃತ್ವವನ್ನು ವಿಶಾಲ ವಿಭಾಗದ ಜನತೆ ತಮ್ಮ ಅನುಭವದ ಆಧಾರದಲ್ಲಿ ಒಪ್ಪಿಕೊಳ್ಳುವಂತಾಗುತ್ತದೆ. ಆ ಮೂಲಕ ಪ್ರಜಾಪ್ರಭುತ್ವ ಶಕ್ತಿಗಳು ಬೆಳೆದು ಬಂದು ಸಮಾಜದ ಆಗುಹೋಗುಗಳ ದಿಕ್ಕನ್ನು ನಿರ್ಧರಿಸುವ ಶಕ್ತಿಗಳಾಗುವಂತಾಗುತ್ತದೆ. ಕ್ರಮೇಣ ಈ ಶಕ್ತಿಗಳು ಎಡ ರಾಜಕೀಯ ಕಾರ್ಯಕ್ರಮವನ್ನು ಹಮ್ಮಿಕೊಂಡು ನಡೆಯುವಂತಾಗುತ್ತದೆ.

ಈ ಕರ್ತವ್ಯ ಪೂರೈಕೆಗೆ ಅವಶ್ಯಕವಾದ ಬಾಹ್ಯ ಪರಿಸ್ಥಿತಿ ಮತ್ತು ಆಂತರಿಕ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಒಟ್ಟಾಗಿ ಒದಗಿ ಬರುತ್ತಿದೆ ಎಂಬುದನ್ನು ರಾಜ್ಯ ಸಮ್ಮೇಳನದ ವರದಿ, ವರದಿಯ ಮೇಲೆ ನಡೆದ ಚರ್ಚೆ, ಅಲ್ಲಿ ಅಂಗೀಕರಿಸಲಾದ ಠರಾವುಗಳು... ಇವೆಲ್ಲವೂ ದೃಢಪಡಿಸಿವೆ.

5 ಲಕ್ಷಕ್ಕೂ ಅಧಿಕ ಜನರ ಬೆಂಬಲ ನಮ್ಮ ಪಕ್ಷಕ್ಕೆ ಇದೆ. ಹತ್ತು ಸಾವಿರಕ್ಕಿಂತಲೂ ಅಧಿಕ ಸಂಖ್ಯೆಯಲ್ಲಿ ರಾಜ್ಯದಲ್ಲಿ ನಮ್ಮ ರಾಜ್ಯದ ವಿವಿಧ ಸಂಘಟನೆಗಳ ಕಾರ್ಯಕರ್ತರುಗಳು ಇದ್ದಾರೆ. 1937ರಿಂದ ರಾಜ್ಯದ ವಿವಿಧ ಭಾಗಗಳಲ್ಲಿ ಜನತೆಯ ಹೋರಾಟಗಳನ್ನು ನಡೆಸಿದ ಅನುಭವವಿದೆ. ದೇಶದಲ್ಲಿ ಮಾತ್ರವಲ್ಲ ವಿಶ್ವದಲ್ಲೆ ಮಾರ್ಕ್ಸ್‌ವಾದಿ ಚಿಂತನೆಯನ್ನು ದೇಶದ ವಿಶಿಷ್ಟ ಪರಿಸ್ಥಿತಿಗಳಿಗೆ ಅನ್ವಯಿಸಲು ಸಮರ್ಥವಾದ ನೇತೃತ್ವವುಳ್ಳ ಸಿಪಿಐ(ಎಂ) ಪಕ್ಷವಿದೆ, ಆ ಪಕ್ಷದ 6000ದಷ್ಟು ಸದಸ್ಯರು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ 500ಕ್ಕೂ ಹೆಚ್ಚಿನ ಶಾಖೆಗಳಲ್ಲಿ, 14ಕ್ಕೂ ಅಧಿಕ ಜಿಲ್ಲಾ ಸಮಿತಿಗಳಲ್ಲಿ ಸಂಘಟಿತರಾಗಿದ್ದಾರೆ. ರಾಜ್ಯದ ಬಹು ಭಾಗದ ಜನತೆ ಬೆಲೆಯೇರಿಕೆ, ನಿರುದ್ಯೋಗ, ಬಡತನ, ಭೂರಹಿತತೆ, ದಬ್ಬಾಳಿಕೆ, ದಮನ. ಇವುಗಳಿಂದ ಬಳಲಿ ಬೆಂಡಾಗಿ ಜೀವನದ ಭವಿಷ್ಯದ ಕುರಿತು ಚಿಂತಾಜನಕರಾಗಿರುವ ಬಾಹ್ಯ ಪರಿಸ್ಥಿತಿಯೂ ಇದೆ. ದೃಢವಾಗಿ ಈ ಜನ ವಿಭಾಗಗಳ ಮಧ್ಯೆ ಹಾಸುಹೊಕ್ಕಾಗಿ ಜೀವನನಾಡಿ ಜನತೆಯ ನಾಡಿಬಡಿತವನ್ನು ಅರಿತು ಅದಕ್ಕನುಸಾರವಾಗಿ ಬೇಡಿಕೆಗಳನ್ನು ರೂಪೀಕರಿಸಿ ತೀವ್ರ ವರ್ಗ ಹೋರಾಟಗಳನ್ನು ನಡೆಸಲು ಮುಂದಾದರೆ ಮಾರ್ಕ್ಸ್‌ರವರು ತಮ್ಮ ಉದ್ಗ್ರಂಥಗಳಲ್ಲಿ ಸ್ಪಷ್ಟಪಡಿಸಿದಂತೆ "ಪ್ರಜಾಸತ್ತಾತ್ಮಕ ಶಕ್ತಿಗಳು ವರ್ಗ ಶಕ್ತಿಗಳಾಗಿ ಪರಿಣಮಿಸಿ ಸಮಾಜದ ಬದಲಾವಣೆಗೆ" ಅನುವಾಗುವುದರಲ್ಲಿ ಸಂಶಯವಿಲ್ಲ.

ಪಶ್ಚಿಮ ಬಂಗಾಳದ ಎಡರಂಗದ ಸರಕಾರವು ನಮ್ಮ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಕಾಂ. ಜ್ಯೋತಿಬಸುರವರ ನೇತೃತ್ವದಲ್ಲಿ "ಕಮ್ಯುನಿಸ್ಟರು ಒಂದು ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ ಅಲ್ಲಿ ಎಂತಹ ಭೂ ಸುಧಾರಣೆಗಳು ಜಾರಿಗೆ ಬರುವವು, ಗ್ರಾಮಾಂತರ ಪ್ರದೇಶಗಳಲ್ಲಿ ಹೇಗೆ ಪಂಚಾಯತುಗಳು ನೆಲ ನಿಲ್ಲುವವು, ಅವು ಹೇಗೆ ಬಡವರಲ್ಲಿ ಬಡವರಾದ ಗ್ರಾಮಾಂತರ ಬಹುಭಾಗದ ಜೀವನ ಜ್ಯೋತಿಗಳಾಗಿ ಕೆಲಸಮಾಡುವವು, ಆಹಾರ ಉತ್ಪಾದನೆಯಲ್ಲಿ ಇಡೀ ದೇಶದಲ್ಲಿ ಹೇಗೆ ಮೇಲ್ಮೆ ಸಾಧಿಸಿ ತೋರಿಸುವವು ಎಂಬುದನ್ನು ಜನತೆಯ ಎದುರು ಮಾದರಿಯಾಗಿ ಇರಿಸಿ ಕರ್ನಾಟಕ ರಾಜ್ಯದಲ್ಲಿ ಜನತೆಯ ಮುನ್ನಡೆಯನ್ನು ಸಾಧಿಸಲು ನಾವು ಮುಂದಾಗಬಹುದು.

ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವಾಗಲೇ ಏಪ್ರಿಲ್‌ನಲ್ಲಿ ನಡೆಯುವ ಪಕ್ಷದ 15ನೇ ಮಹಾಧಿವೇಶನವು ನಮ್ಮ ಅನುಭವದ ಆಧಾರದಲ್ಲಿ ಚರ್ಚೆಗೆ ಮುಂದಿರಿಸಿದ ಕರಡು ರಾಜಕೀಯ ಠರಾವನ್ನು ಎಲ್ಲಾ ಶಾಖೆಗಳಲ್ಲೂ ಸಮಿತಿಗಳಲ್ಲೂ, ಅನುಭವಿಗಳ ಮಧ್ಯೆಯೂ ಚರ್ಚಿಸಿ, ತಿದ್ದುಪಡಿಗಳನ್ನು ಕಳುಹಿಸಿಕೊಡುವ (ಕೇಂದ್ರಸಮಿತಿಗೆ) ಕೆಲಸವನ್ನು ಅದೇ ಸಂದರ್ಭದಲ್ಲಿ ನಡೆಸಲು ಮುಂದಾಗೋಣ.

15ನೇ ಮಹಾಧಿವೇಶನವು ಖಂಡಿತವಾಗಿ ಮುಂದಿನ 3 ವರ್ಷಗಳಲ್ಲಿ ಕೇಂದ್ರದಲ್ಲೇ ಎಡಪಕ್ಷಗಳೂ ಸೇರಿರುವ ಪರ್ಯಾಯ ಸರಕಾರವು ಏರ್ಪಡುವ ದಾರಿಯನ್ನು ಸೂಚಿಸಲಿಕ್ಕಿದೆ ಎಂಬ ವಿಶ್ವಾಸದಿಂದ ನಾವು ರಾಜಕೀಯ ಕರ್ತವ್ಯಗಳನ್ನು ರಾಜ್ಯದಲ್ಲಿ ಕೈಗೂಡಿಸಲು ಮುಂದಾಗೋಣ.

ದೇಶದ ರಾಜಕೀಯದಲ್ಲಿ ....

ಪುಟ 1ರಿಂದ

ಯಲ್ಲಿ ಬೇಡಿಕೆ ಕುಸಿದಾಗ "ನ್ಯೂ ಲಕ್ಸ್" ಎಂಬ ಹೊಸ ಹೆಸರಿನ ಅಡಿಯಲ್ಲಿ ಹಳೆಯ ಸರಕನ್ನೇ ಮಾರಾಟ ಮಾಡಲು ಯತ್ನಿಸುವಂತೆ ದೇಶದ ಸಮಸ್ಯೆಗಳಿಗೆ ಹೊಸ ಆರ್ಥಿಕ ನೀತಿಯ ಕ್ರಮಗಳೇ ಪರಿಹಾರ ಎಂದು ಹೇಳಿಕೊಳ್ಳುತ್ತಿರುವ ನರಸಿಂಹರಾವ್ ಅವರ ಧೋರಣೆಯಾಗಿದೆ ಎಂದ ಅವರು ದೇಶವನ್ನು ಬಹುರಾಷ್ಟ್ರೀಯ ಕಂಪೆನಿಗಳ ಕೈಗೆ ಒಪ್ಪಿಸಿದರೆ ಅವುಗಳು ನಮ್ಮ ಹಳ್ಳಿಗಳಿಗೆ ಕುಡಿಯುವ ನೀರನ್ನು ಒದಗಿಸಬಹುದೆ? ನಮ್ಮ ಗ್ರಾಮೀಣ ಮಹಿಳೆಯರಿಗೆ ಸಾರ್ವಜನಿಕ ಶೌಚಾಲಯಗಳನ್ನು ಒದಗಿಸಬಹುದೆ? ನಮ್ಮ ಮಕ್ಕಳಿಗೆ ಕನಿಷ್ಠ ಶಿಕ್ಷಣ ನೀಡಬಹುದೆ? 12 ಕೋಟಿಗೂ ಮೀರಿರುವ ನಿರುದ್ಯೋಗಿ ಯುವಕರ ಕೈಗಳಿಗೆ ಉದ್ಯೋಗ ನೀಡಬಹುದೆ? ಎಂದು ಪ್ರಶ್ನೆಹಾಕಿದರು.

ಕೈ ಬೆರಳುಗಳಿಂದ ಎಣಿಸಬಹುದಾದ ಕೆಲವೇ ಕೆಲವು ಆಗರ್ಭ ಶ್ರೀಮಂತ ಕುಟುಂಬಗಳ ಹಿತಕಾಪಾಡುವ ಕಾಂಗ್ರೆ ಪಕ್ಷದ ಆರ್ಥಿಕ ನೀತಿಯನ್ನು ಬಿಜೆಪಿ ಬೆಂಬಲಿಸುತ್ತಿರುವುದನ್ನು ಪ್ರಸ್ತಾಪಿಸಿದ ಕಾಮ್ರೇಡ್ ಸಲೀಂ ಅವರು ಕಾಂಗ್ರೆ ಮತ್ತು ಬಿಜೆಪಿ ಒಂದೇ ನಾಣ್ಯದ ಎರಡು ಮುಖಗಳಾಗಿದ್ದು ಆಂಧ್ರ, ಕರ್ನಾಟಕ ಮೊದಲಾದ ರಾಜ್ಯಗಳ ಜನ ಇವೊಂದು ಚಲಾವಣೆ ಇಲ್ಲದ ನಾಣ್ಯವೆಂದು ಅದನ್ನು ತಿಪ್ಪೆಗೆ ಎಸೆದಿದ್ದಾರೆ ಎಂದರು.

ಕಾಂಗ್ರೆ ಮತ್ತು ಬಿಜೆಪಿಯನ್ನು ಅವುಗಳ ವರ್ಗಧೋರಣೆಗಾಗಿ ಅವುಗಳನ್ನು ಬೆಂಬಲಿಸುವ ಕೆಲವು ಪತ್ರಿಕೆಗಳು ದೇಶದಲ್ಲಿ ಎರಡು ಪಕ್ಷಗಳ ರಾಜಕೀಯ ಅಸ್ತಿತ್ವವಾಗಲಿವೆ ಎಂದು ಹೇಳುತ್ತಿದ್ದವು. ಆದರೆ ದೇಶದ ಅನೇಕ ರಾಜ್ಯಗಳಲ್ಲಿನ ಬೆಳವಣಿಗೆಗಳನ್ನು ಗಮನಿಸಿದರೆ ಜನತೆ ಈ ಎರಡೂ ಪಕ್ಷಗಳನ್ನು ತಿರಸ್ಕರಿಸಿ ಎಡ ಪ್ರಜಾಸತ್ತಾತ್ಮಕ ಜಾತ್ಯಾತೀತ ಪರ್ಯಾಯವನ್ನು ಕಂಡು ಕೊಳ್ಳುತ್ತಿರುವುದು ಸ್ಪಷ್ಟವಾಗಿದೆ. ಈ ಮೂರನೇ ಶಕ್ತಿ ಕೇವಲ ಕೆಲವು ರಾಜಕೀಯ ಪಕ್ಷಗಳ ಸಂಯುಕ್ತ ರಂಗವಾಗದೆ ಒಂದು ಕನಿಷ್ಠ ಕಾರ್ಯಕ್ರಮದ ಆಧಾರದಲ್ಲಿ ಮೂಡಿಬರಲಿರುವ ಪರ್ಯಾಯವಾಗಿದೆ ಎಂದು ಹೇಳಿದರು.

ದೇಶಕ್ಕೆ ಇಂದು ಅವಶ್ಯವಾಗಿರುವ ಈ ತೃತೀಯ ಶಕ್ತಿಯಲ್ಲಿ ಸಿಪಿಐ(ಎಂ) ಪಕ್ಷಕ್ಕೆ ಒಂದು ನಿರ್ಣಾಯಕ ಸ್ಥಾನ ಖಚಿತವಾಗಿದೆ ಎಂದು ಹೇಳಿದ ಅವರು ಅನೇಕ ಅಡ್ಡಿ ಆತಂಕಗಳ ನಡುವೆ ನಮ್ಮ ಪಕ್ಷಕ್ಕೆ ಪಶ್ಚಿಮ ಬಂಗಾಲದಲ್ಲಿ 18 ವರ್ಷಗಳ ಒಂದು ಸ್ಥಿರ ಸರ್ಕಾರವನ್ನು ನೀಡಲು ಸಾಧ್ಯವಾಗಿರುವುದು ಒಂದು ವಿಶ್ವ ದಾಖಲೆಯಾಗಿದೆ ಎಂದರು.

ಮಾರುಕಟ್ಟೆ ಆರ್ಥಿಕತೆಯ ಪರತ್ತುಗಳ ಅನುಷ್ಠಾನದಿಂದಾಗಿ ಮುಂಬರುವ ವರ್ಷಗಳಲ್ಲಿ ಗ್ರಾಮೀಣ ದಾರಿದ್ರ್ಯ ಅಸಹನೀಯವಾಗಲಿದೆ ಎಂದು ಐ.ಎಲ್.ಓ. ವರದಿಯನ್ನು ಉಲ್ಲೇಖಿಸಿದ ಕಾಂ. ಸಲೀಂ ಅವರು ಅಂತಹ ಭೀಕರ ದಿನಗಳಲ್ಲಿ ಜನಹಿತ ಕಾಪಡಲು ನಮ್ಮ ಪಕ್ಷ ಸನ್ನದ್ಧವಾಗಬೇಕಾಗಿದೆ ಎಂದು ಹೇಳಿದರು.

ನಮಗೆ ಬಡಜನತೆಯ ಏಕತೆ ಮುಖ್ಯ. ನಾವು ಧರ್ಮ, ಭಾಷೆ, ಬಣ್ಣದ ಹೆಸರಿನಲ್ಲಿ ನಮ್ಮ ನಮ್ಮೊಳಗೆ ಜಗಳಾಡುವುದಿಲ್ಲ, ಆದರೆ ಬಿಜೆಪಿ ಅಂತಹ ಪ್ರತಿಗಾಮಿ ಪಕ್ಷಗಳಲ್ಲಿ ಬಡವರೆಲ್ಲ ಒಂದಾಗಬೇಕೆಂಬ ಘೋಷಣೆ ಇರುವುದಿಲ್ಲ. ರಾಜಕೀಯ ಲಾಭ ಪಡೆಯಲು ಅವರು ದೇಶಕ್ಕೆ ಬೆಂಕಿ ಹಚ್ಚಲು ಹೇಸುವುದಿಲ್ಲ.

ಹುಬ್ಬಳ್ಳಿ ಈದ್ಗಾ ಮೈದಾನದಲ್ಲಿ ತ್ರಿವರ್ಣ ಧ್ವಜ ಹಾರಿಸದಿದ್ದರೆ ಮುಸಲ್ಮಾನರು ದೇಶದ್ರೋಹಿಗಳೆಂದು ಸಾಬೀತುಮಾಡಲು ಹೊರಟಿದ್ದ ಇವರು ಮಹಾರಾಷ್ಟ್ರದ ವಿಧಾನಸಭಾ ಕಟ್ಟದ ಮೇಲೆ ರಾಷ್ಟ್ರಧ್ವಜದ ಬದಲು ಶಿವಸೇನೆಯ ಕೇಸರಿ ಧ್ವಜ ಹಾರುತ್ತಿರುವ ಚಿತ್ರವನ್ನು ಮುದ್ರಿಸಿ ಹಂಚುತ್ತಿರುವ ದೇಶದ್ರೋಹಿಗಳಿಗೆ ಏನು ಶಿಕ್ಷೆ ಕೊಡುತ್ತಾರೆ? ಎಂದು ಅವರು ಸವಾಲು ಹಾಕಿದರು.

ಗುಲ್ಬರ್ಗಾದಲ್ಲಿ ನಡೆದ ಪಕ್ಷದ ಕಾರ್ಯಕರ್ತ ಮಾದುರಾಯ ಧನ್ನೂರ್ ಅವರ ಕೊಲೆಯನ್ನು ಖಂಡಿಸಿದ ಕಾಂ. ಸಲೀಂ ಅವರು ಕಾರ್ಯಕರ್ತರನ್ನು ಕೊಲ್ಲುವ ಮೂಲಕ ಸಿಪಿಐ(ಎಂ) ಪಕ್ಷದ ಆಂದೋಲನವನ್ನು ನಿಲ್ಲಿಸಲಾಗದು ಎಂಬುದನ್ನು ತ್ರಿಪುರಾದಲ್ಲಿ, ಪಂಜಾಬದಲ್ಲಿ, ಕೇರಳದಲ್ಲಿ ನಮ್ಮ ಸಂಗಾತಿಗಳು ಸಾಬೀತು ಮಾಡಿದ್ದಾರೆ ಎಂದರು.

ಮಾರ್ಕ್ಸ್‌ವಾದ ಸತ್ತುಹೋಗಿದೆ ಎಂದು ಖುಶಿಪಟ್ಟುಕೊಂಡಿದ್ದವರ ಬಗ್ಗೆ ಪ್ರಸ್ತಾಪಿಸುತ್ತಾ ಇಂದು ರಶಿಯಾ ದೇಶದಲ್ಲಾಗಲಿ ಮಾಜಿ ಸಮಾಜವಾದಿ ರಾಷ್ಟ್ರಗಳಲ್ಲಾಗಲಿ ನಿಧಿಯೊಂದನ್ನು ಕಳೆದುಕೊಂಡವರು ಅದನ್ನು ಮರಳಿ ಪಡೆಯಲು ಪರಿತಪಿಸುತ್ತಿರುವವರ ಬಗ್ಗೆ ಈಗ ಏಕೆ ಮೌನವಾಗಿದ್ದಾರೆ ಎಂದು ಪ್ರಶ್ನಿಸಿದರು. ಪಶ್ಚಿಮ ಬಂಗಾಳದಲ್ಲಿ ನಮ್ಮ ಸರ್ಕಾರಕ್ಕೆ ತೊಂದರೆ ಕೊಡುವ ಉದ್ದೇಶದಿಂದ ಡಾರ್ಜಿಲಿಂಗ್ ನಲ್ಲಿ ಘೀಸಿಂಗ್‌ಗೆ ಕುಮ್ಮಕ್ಕು ಕೊಡಲಾಯಿತು. ಆದರೆ ಇಂದು ಹಿಮಾಲಯ ಪರ್ವತ ಶ್ರೇಣಿಗಳ ಮೇಲೆ ನೇಪಾಳದಲ್ಲಿ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಬಾವುಟ ಹಾರಾಡಲಾರಂಭಿಸಿರುವುದು ಕ್ರಾಂತಿಕಾರಿ ಕಮ್ಯುನಿಸ್ಟ್ ಸಿದ್ಧಾಂತದ ಜೀವಂತಿಕೆಯನ್ನು ತೋರಿಸುತ್ತದೆ ಎಂದು ಹೇಳಿದರು. ಸಾಕಷ್ಟು ಅನ್ನ ಉತ್ಪಾದನೆಯಾದರೂ ಜನರು ಹೊಟ್ಟೆಗಿಲ್ಲದೆ ಉಪವಾಸ ಬೀಳುತ್ತಿರುವ ಈ ನಮ್ಮ ದೇಶದಲ್ಲಿ ಸಮತಾವಾದದ ಕನಸು ಇದ್ದೇ ಇರುತ್ತದೆ ಎಂದು ಹೇಳಿದ ಅವರು ಒಂದು ಸಮಾಜದಲ್ಲಿ ಕೆಲವೇ ಕೆಲವು ಜನರು ಎಲ್ಲ ಸುಖಭೋಗಗಳನ್ನು ಅನುಭವಿಸುವಾಗ ಮತ್ತು ಇನ್ನುಳಿದ ಬಹು ಸಂಖ್ಯಾತರು ಕನಿಷ್ಠ ಸೌಲಭ್ಯಗಳಿಂದಲೂ ವಂಚಿತರಾಗಿ ಬದುಕುತ್ತಿರುವಾಗ ಕ್ರಾಂತಿಯ ಅವಶ್ಯಕತೆ ಇದ್ದೇ ಇರುತ್ತದೆ ಎಂದರು.

ಆರಂಭದಲ್ಲಿ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷ ಕಾಮ್ರೇಡ್ ಮಾರುತಿ ಮಾನ್ಪಡೆ ಸ್ವಾಗತಿಸಿದರು. ಸಭೆಯ ಅಧ್ಯಕ್ಷತೆಯನ್ನು ಪಕ್ಷದ ಹಿರಿಯ ಮುಖಂಡರಾದ ಕಾಮ್ರೇಡ್ ಎಸ್. ಸೂರ್ಯನಾರಾಯಣ ರಾವ್ ವಹಿಸಿದ್ದರು.

ಹುತಾತ್ಮ ಮಾದುರಾಯ ಧನ್ನೂರ್ ಅವರ ಗ್ರಾಮದಿಂದ ಕಾಲ್ನಡಿಗೆಯಿಂದ ತರಲಾದ ಹುತಾತ್ಮ ಜ್ಯೋತಿ, ಹಾಗೂ ಬಾವುಟವನ್ನು ಸಭೆಯಲ್ಲಿ ಬರ ಮಾಡಿಕೊಳ್ಳಲಾಯಿತು. ಕೊನೆಯಲ್ಲಿ ಗುಲ್ಬರ್ಗಾ ಜಿಲ್ಲಾ ಸಮಿತಿ ಸದಸ್ಯ ಕಾಮ್ರೇಡ್ ಬಸವರಾಜ ಮರಡಿ ವಂದಿಸಿದರು.

ಬಹಿರಂಗ ಸಭೆಗೆ ಮೊದಲು ಹೊರಡಿಸಲಾಗಿದ್ದ ಬೃಹತ್ ರ್‍ಯಾಲಿಯು ಗುಲ್ಬರ್ಗಾ ನಗರದ ಎಲ್ಲಾ ಮುಖ್ಯ ಬೀದಿಗಳಲ್ಲಿ ಸಂಚರಿಸಿ ನಗರವಾಸಿಗಳ ಗಮನ ಸೆಳೆಯಿತು. ಶಹಬಾದ್‌ನ ಎಬಿಎಲ್ ಕಾರ್ಖಾನೆಯ ಕಾರ್ಮಿಕರು, ಮಳಖೇಡದ ರಾಜಶ್ರೀ ಸಿಮೆಂಟ್ ಕಾರ್ಖಾನೆಯ ಕಾರ್ಮಿಕರು ಮತ್ತು ಆಳಂದ ತಾಲೂಕಿನ ಯುವ ರೈತರು ಕೆಂಪು ಸಮವಸ್ತ್ರ ಧಾರಿಗಳಾಗಿ ಮೆರವಣಿಗೆಯ ಮುಂಚೂಣಿಯಲ್ಲಿದ್ದರು. ಚಿಕ್ಕ ಮಕ್ಕಳ ಲೇಜಿಂ ಕುಣಿತ, ಡೊಳ್ಳು ಮತ್ತಿತರ ಗ್ರಾಮೀಣ ವಾದ್ಯಗಳು ಮೆರವಣಿಗೆ ವಿಶೇಷ ಶೋಭೆಯನ್ನುಂಟು ಮಾಡಿದವು.

ಕರ್ನಾಟಕ ಕೈ ಮಗ್ಗ ಅಭಿವೃದ್ಧಿ ನಿಗಮದ ನೇಕಾರರ ಹೋರಾಟಕ್ಕೆ ಬೆಂಬಲ

ರಾಜ್ಯ ಸರ್ಕಾರ ಕಚ್ಚಾ ನೂಲನ್ನು ಪೂರೈಸಲು ವಿಫಲವಾಗಿರುವ ಕಾರಣದಿಂದ ಕಳೆದ ಕೆಲವು ತಿಂಗಳುಗಳಿಂದ ಕೆಲಸ ಇಲ್ಲದೆ ಕಂಗಾಲಾಗಿರುವ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ನೇಕಾರರು ವಿಧಾನಸೌಧದ ಎದುರು ನಡೆಸಲು ಉದ್ದೇಶಿಸಿರುವ ಅನಿರ್ದಿಷ್ಟ ಅವಧಿಯ ಸಾಮೂಹಿಕ ಸತ್ಯಾಗ್ರಹಕ್ಕೆ ರಾಜ್ಯ ಸಮ್ಮೇಳನವು ಬೆಂಬಲ ವ್ಯಕ್ತಪಡಿಸಿದೆ. ವರ್ಷವಿಡಿ ಕೆಲಸ ಇಲ್ಲದೆ ಮಗ್ಗ ನೂಲಿಗಾಗಿ ಬ್ಯಾಂಕುಗಳಿಂದ ಪಡೆದ ಸಾಲವನ್ನು ತೀರಿಸಲಾಗದೆ ಊರುಬಿಟ್ಟು ವಲಸೆ ಹೋಗುವ ಧಾರುಣ ಪರಿಸ್ಥಿತಿಗೆ ಒಳಗಾಗಿರುವ ರಾಜ್ಯದ ಸಾವಿರಾರು ಕೈಮಗ್ಗ ನೇಕಾರರ ಕುಟುಂಬಗಳ ಬಗ್ಗೆ ಸರ್ಕಾರ ಸಹಾನುಭೂತಿಪರ ಧೋರಣೆಯನ್ನು ತಾಳದೆ ಇರುವುದು ಖಂಡನೀಯ. ನೂತನ ಜನತಾದಳ ಸರ್ಕಾರದ ಜವಳಿ ಮಂತ್ರಿಗಳು ರಾಜ್ಯದ ನೇಕಾರ ಸಂಘಟನೆಗಳ ಮುಖಂಡರನ್ನು ತಕ್ಷಣ ಮಾತುಕತೆಗೆ ಕರೆದು ಅವರ ಬೇಡಿಕೆಗಳನ್ನು ಈಡೇರಿಸಲು ಕ್ರಮ ಕೈಗೊಳ್ಳಬೇಕೆಂದು ಮತ್ತು ನೇಕಾರರನ್ನು ಒಂದು ಕಾನೂನಿನ ಅಡಿಯಲ್ಲಿ ತರಲು ಸರ್ಕಾರ ಗಂಭೀರ ವಿಚಾರ ಮಾಡಬೇಕೆಂದು ಸಮ್ಮೇಳನ ಆಗ್ರಹಿಸಿದೆ.

ಮಂಡನೆ: ಎಸ್.ಪ್ರಸನ್ನಕುಮಾರ್ **ಅನುಮೋದನೆ:** ಡೇವಿಡ್ ಕರ್ಕಡ

ಇಂಡಿಯನ್ ಪ್ಲೈವುಡ್ ಕಾರ್ಖಾನೆಗಳನ್ನು ಪುನರುಜ್ಜೀವನಗೊಳಿಸಬೇಕು

ಭಾರತದಲ್ಲೇ ಉತ್ತಮ ಗುಣಮಟ್ಟದ ಪ್ಲೈವುಡ್ ತಯಾರಿಸಿದ್ದಕ್ಕಾಗಿ ರಫ್ತು ಪ್ರಶಸ್ತಿ ಪಡೆದಿದ್ದ ಕಾರ್ಖಾನೆಯ ಘಟಕಗಳು ಈಗ 1992ರಿಂದ ಹಣಕಾಸಿನ ಬಿಕ್ಕಟ್ಟು, ಕಚ್ಚಾನೂಲಿನ ಕೊರತೆ ಎದುರಿಸುತ್ತಿದೆ. ಇದಕ್ಕೆ ಸರಕಾರ ನೀತಿಯನ್ನು ಮುಂದೆ ಮಾಡಿ ಉತ್ಪಾದನೆಯನ್ನು ಸ್ಥಗಿತಗೊಳಿಸಲಾಗುತ್ತಿದೆ. ಸುಮಾರು 6 ತಿಂಗಳಿಂದ ವೇತನ ಹಾಗೂ 2 ವರ್ಷಗಳ ಬೋನಸ್ ಬಾಕಿಯಾಗಿದೆ. ಈ ಬಗ್ಗೆ ಐಕ್ಯಚಳುವಳಿ ಮುಂಚೂಣಿಯಲ್ಲಿರುವ ಧಾರವಾಡ ಕಾರ್ಖಾನೆ ಮಾತ್ರ ಇನ್ನು ಕೆಲಸ ಆರಂಭಿಸಿಲ್ಲ. ಅದನ್ನು ಸಣ್ಣ ಕೈಗಾರಿಕಾ ಘಟಕವಾಗಿ ಮಾಡಲು ಆಡಳಿತ ಪಟ್ಟು ಹಿಡಿದಿದೆ. ಕಾರ್ಮಿಕ ಆಯುಕ್ತರ ಮಧ್ಯಸ್ಥಿಕೆಯಲ್ಲಿ ಒಪ್ಪಿರುವ ಹಲವಾರು ಅಂಶಗಳನ್ನು ಅದು ಜಾರಿಮಾಡುತ್ತಿಲ್ಲ. ಇದರಿಂದ ಸುಮಾರು 2500 ಕಾರ್ಮಿಕ ಕುಟುಂಬಗಳು ಬೀದಿ ಪಾಲಾಗುವ ಸ್ಥಿತಿ ಬಂದಿದೆ. ಈ ಕಾರ್ಖಾನೆಗಳ ಪುನರುಜ್ಜೀವನಕ್ಕೆ ಸೂಕ್ತ ಕ್ರಮ ವಹಿಸಲು ತೀವ್ರ ಮಧ್ಯಪ್ರವೇಶ ಮಾಡಬೇಕೆಂದು ಸಮ್ಮೇಳನ ಸರಕಾರವನ್ನು ಒತ್ತಾಯಿಸಿದೆ.

ಮಂಡನೆ: ಎಂ.ಬಿ.ಕಟ್ಟಿ **ಅನುಮೋದನೆ:** ಅಕ್ರಂ ಖಾನ್

ಕನಿಷ್ಠ ಕೂಲಿ ಪರಿಷ್ಕರಣವಾಗಬೇಕು

ಹೊಸ ಆರ್ಥಿಕ ನೀತಿಗಳಿಂದಾಗಿ ಜೀವನ ಮತ್ತಷ್ಟು ದುರ್ಭರವಾಗಿರುವ ಅಸಂಘಟಿತ ವಲಯದ ಕಾರ್ಮಿಕರ ಕನಿಷ್ಠ ಕೂಲಿಯನ್ನು ದೀರ್ಘ ಸಮಯದ ನಂತರ ಈಗಲಾದರೂ ಪರಿಷ್ಕರಿಸಬೇಕು ಎಂದು ಸಮ್ಮೇಳನ ಒತ್ತಾಯಿಸಿದೆ. ಕಾರ್ಮಿಕ ಮಂತ್ರಿಗಳ ಸಭೆಯಲ್ಲಿ ನಿರ್ಧಾರವಾಗಿರುವಂತೆ ತಿಂಗಳಿಗೆ 1800 ರೂ. ಕನಿಷ್ಠ ಕೂಲಿ ಹಾಗೂ 1300 ಪಾಯಿಂಟುಗಳನ್ನು ಮೀರಿದ ಪ್ರತಿಯೊಂದು ಪಾಯಿಂಟಿಗೆ 5 ಪೈಸೆ ತುಟ್ಟಿಭತ್ಯೆ ಪ್ರಕಟಿಸಬೇಕು ಎಂದು ಜನತಾದಳ ಸರಕಾರವನ್ನು ಒತ್ತಾಯಿಸಿದೆ. ಈ ಬೇಡಿಕೆಯನ್ನು ಸಾಧಿಸಲು ತೀವ್ರ ರೀತಿಯ ಚಳುವಳಿ ನಡೆಸಬೇಕೆಂದು ರಾಜ್ಯದ ಅಸಂಘಟಿತ ಕಾರ್ಮಿಕರಿಗೆ ಸಮ್ಮೇಳನ ಕರೆ ನೀಡಿದೆ.

ಮಂಡನೆ: ವಿ. ಸುಕುಮಾರ್ **ಅನುಮೋದನೆ:** ಜೆ. ಬಾಲಕೃಷ್ಣ

ಬೀಡಿ ಕಾರ್ಮಿಕರ ಹೋರಾಟ

ಕರ್ನಾಟಕ ರಾಜ್ಯದಲ್ಲಿರುವ 3.55 ಲಕ್ಷ ಬೀಡಿ ಕಾರ್ಮಿಕರ ಕಲ್ಯಾಣ ಯೋಜನೆಗಳನ್ನು ರಾಜ್ಯ ಸರ್ಕಾರ ಸಿದ್ಧಪಡಿಸಿಲ್ಲ, ಅದನ್ನು ಸಿದ್ಧಪಡಿಸಿ ಬೀಡಿ ಕಾರ್ಮಿಕರಿಗೆ ಗುರುತಿನ ಚೀಟಿ ನೀಡಬೇಕು. ಬೀಡಿ ಕಾರ್ಮಿಕರ ಜೀವನ ಪರಿಸ್ಥಿತಿಯನ್ನು ಅಧ್ಯಯನ ಮಾಡಿದ ಚಂದ್ರಪ್ರಭಾ ಅರಸ್ ಸಮಿತಿಯ ವರದಿಯನ್ನು ಕೂಡಲೇ ಅಂಗೀಕರಿಸಬೇಕು ಎಂದು ಸಮ್ಮೇಳನ ಒತ್ತಾಯಿಸಿದೆ. ಕಾರ್ಮಿಕ ಮಂತ್ರಿಗಳ ಅಖಿಲ ಭಾರತ ಸಭೆಯಲ್ಲಿ ಅಂಗೀಕಾರವಾದಂತೆ ಕನಿಷ್ಠ ಕೂಲಿ ನಿರ್ಧರಿಸಬೇಕು, ತಾತ್ಕಾಲಿಕವಾಗಿ 1000 ಬೀಡಿಗಳಿಗೆ 50 ರೂ. ಕನಿಷ್ಠ ಕೂಲಿ ಹಾಗೂ ಇತರ ಸೌಲಭ್ಯಗಳಿಗಾಗಿ ಬೀಡಿ ಕಾರ್ಮಿಕರು ಏಪ್ರಿಲ್ ೨೪ರಿಂದ ನಡೆಸಲಿರುವ ಅನಿರ್ದಿಷ್ಟ ಕಾಲದ ಹೋರಾಟವನ್ನು ಸಮ್ಮೇಳನ ಬೆಂಬಲಿಸಿದೆ.

ಮಂಡನೆ: ಕೆ. ಶಂಕರ್ **ಅನುಮೋದನೆ:** ಮಹಮ್ಮದ್ ದಸ್ತೀರ್

ಪ್ಲಾಂಟೇಶನ್ ಕಾರ್ಮಿಕರ ಕನಿಷ್ಠ ಕೂಲಿ ಪರಿಷ್ಕರಣೆ

3 ಲಕ್ಷದಷ್ಟಿರುವ ಪ್ಲಾಂಟೇಶನ್ ಕಾರ್ಮಿಕರಿಗೆ ಕನಿಷ್ಠ ಕೂಲಿಗೆ ಸಂಬಂಧಪಟ್ಟಂತೆ ಬಂಗಾರಪ್ಪ ಸರ್ಕಾರದ ಕಾಲದಲ್ಲಿ ತೀವ್ರ ಅನ್ಯಾಯವಾಗಿತ್ತು. ಸಲಹಾ ಸಮಿತಿ ಶಿಫಾರಸು ಮಾಡಿದ್ದಕ್ಕಿಂತ ಕನಿಷ್ಠ ಕೂಲಿ ನಿಗದಿ ಮಾಡಲಾಯಿತು. ಇದರ ವಿರುದ್ಧ ಹೋರಾಟದ ಫಲವಾಗಿ ಏಪ್ರಿಲ್ 1984ರಲ್ಲಿ ಕನಿಷ್ಠ ಕೂಲಿ ಪರಿಷ್ಕರಿಸಿ ಕರಡು ಪ್ರಕಟಣೆ ಹೊರಡಿಸಿದ್ದರೂ. ಅಂತಿಮ ಪ್ರಕಟಣೆ ಬರಲೇ ಇಲ್ಲ, ಈ ನಡುವೆ ಕೆಲವು ಕಾರ್ಮಿಕ ಸಂಘಗಳ ಶಾಮೀಲಿನಿಂದಾಗಿ ಇದಕ್ಕಿಂತ ಕಡಿಮೆ ಕೂಲಿಗೆ ಒಪ್ಪಂದವಾಗಿ ಅದನ್ನೇ ಕನಿಷ್ಠ ಕೂಲಿಯೆಂದು ಪ್ರಕಟಿಸುವ ಪ್ಲಾಂಟೇಶನ್ ಮಾಲಕರು ಅತೀ ಹೆಚ್ಚು ಲಾಭ ಪಡೆಯುತ್ತಿರುವ ಈ ಕಾಲಘಟ್ಟದಲ್ಲಿ ಅವರು ಕಾರ್ಮಿಕರಿಗೆ ಹೆಚ್ಚಿನ ಕೂಲಿ ಕೊಡಲು ಶಕ್ತರಾಗಿರುವುದರಿಂದ ಬೆಲೆಯೇರಿಕೆಯಿಂದ ತತ್ತರಿಸುತ್ತಿರುವ ತೋಟ ಕಾರ್ಮಿಕರಿಗೆ ಕನಿಷ್ಠ ದಿನಗೂಲಿ ೫೦ ರೂ. ಹಾಗೂ ತುಟ್ಟಿಭತ್ಯೆ ೧೩೦೪ ಪಾಯಿಂಟಿಗಿಂತ ಹೆಚ್ಚಿದ ಪ್ರತಿ ಪಾಯಿಂಟಿಗೆ ೫ ಪೈಸೆ ಲೆಕ್ಕದಲ್ಲಿ ನೀಡಬೇಕೆಂಬ ಅವರ ಬೇಡಿಕೆಯನ್ನು ಈಡೇರಿಸಲು ಕ್ರಮ ಕೈಗೊಳ್ಳಬೇಕೆಂದು ಸಮ್ಮೇಳನ ಒತ್ತಾಯಿಸಿದೆ.

ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಲು ಆಗ್ರಹ

ಇತ್ತೀಚಿಗೆ ನಡೆಸಿದ ಕಾಯ್ದೆ ಭಂಗ ಚಳುವಳಿಯಲ್ಲಿ ಭಾಗವಹಿಸಿದವರ ವಿರುದ್ಧ, ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಸರ್ಕಾರಿ ಭೂಮಿ ಸಾಗುವಳಿ ಮಾಡುತ್ತಿರುವ ಭೂಹೀನ ಬಡವರ ವಿರುದ್ಧ, ಮಳಖೇಡ ರಾಜಶ್ರೀ ಸಿಮೆಂಟ್ ಕಾರ್ಮಿಕರ ವಿರುದ್ಧ, ಧಾರವಾಡದ ಪ್ಲೈವುಡ್ ಕಾರ್ಮಿಕರ ವಿರುದ್ಧ, ಬೆಂಗಳೂರಿನ ಕೆಲವು ಕಾರ್ಖಾನೆಗಳ ಕಾರ್ಮಿಕರ ವಿರುದ್ಧ ದಾಖಲು ಮಾಡಲಾದ ಕೇಸುಗಳನ್ನು ಹಿಂತೆಗೆದುಕೊಳ್ಳಬೇಕೆಂದು ಸಮ್ಮೇಳನ ಸರಕಾರವನ್ನು ಒತ್ತಾಯಿಸಿದೆ.

ಬರಗಾಲ-ಪ್ರವಾಹಕ್ಕೆ ಶಾಶ್ವತ ಪರಿಹಾರ

ಸತತವಾಗಿ ರಾಜ್ಯವನ್ನು ಒಂದೆಡೆ ಬರಗಾಲ, ಇನ್ನೊಂದೆಡೆ ಪ್ರವಾಹ ಬಾಧಿಸುತ್ತಿದ್ದರೂ ಈ ಬಗ್ಗೆ ಸರ್ಕಾರದಿಂದ ಶಾಶ್ವತ ಪರಿಹಾರ ವ್ಯವಸ್ಥೆ ಇನ್ನೂ ಆಗಿಲ್ಲ, ಇದು ತಪ್ಪಬೇಕು, ಕೊನೇ ಹಂತದಲ್ಲಿ ಕೇಂದ್ರದ ಮುಂದೆ ಗೋಗರೆವುದು ತಪ್ಪುವಂತಾಗಬೇಕು, ಕೇಂದ್ರ-ರಾಜ್ಯ ಸರಕಾರಗಳೆರಡೂ ಈ ಬಗ್ಗೆ ಸಮರೋಪಾದಿಯಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಒಂದು ನಿರ್ಣಯ ಆಗ್ರಹಿಸಿದೆ.

ವಿಮಾ-ಬ್ಯಾಂಕ್ ಖಾಸಗೀಕರಣ ಬೇಡ

ವಿಮಾವಲಯ ಹಣಕಾಸು ವಲಯದ ಖಾಸಗೀಕರಣವನ್ನು ವಿರೋಧಿಸಿ ಎರಡು ಪ್ರತ್ಯೇಕ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಐ.ಎಂ.ಎಫ್.-ವಿಶ್ವ ಬ್ಯಾಂಕ್ ಕುಟಿಲ ತಂತ್ರಗಳಿಗೆ ಬಲಿಯಾಗಿ ವಿಮಾರಂಗ ಕುರಿತಾದ ಮಲ್ಹೋತ್ರಾ ವರದಿಯನ್ನು ಅಂಗೀಕರಿಸಬಾರದು. ಕೋಟ್ಯಾಂತರ ರೂಪಾಯಿ ವಿಮಾ ನಿಧಿಯನ್ನು ದೇಶದ ಅಭಿವೃದ್ಧಿಗೆ ಬಳಸುವ, ಅನಿಧಿಗೆ ಖಾಸಗಿ ನೀಡುವ ಇದುವರೆಗಿನ ನೀತಿಯನ್ನು ಮುಂದುವರಿಸಬೇಕು ಎಂದು ಸಮ್ಮೇಳನ ಒತ್ತಾಯಿಸಿದೆ.

ಬ್ಯಾಂಕಿಂಗ್ ರಂಗವೂ ಸರಕಾರದ ನೀತಿಗಳಿಂದಾಗಿ ವಿದೇಶೀ ಹಿತಾಶಕ್ತಿಗಳ ಹಿಡಿತಕ್ಕೆ ಸಿಲುಕುವ ಅಪಾಯವಿದೆ. ಉದಾರೀಕರಣ ನೀತಿಯಿಂದಾಗಿ ಉಂಟಾದ ಶೇರು ಹಗರಣದಲ್ಲಿ ಬ್ಯಾಂಕಿಂಗ್ ಉದ್ಯಮಕ್ಕೆ ಸಾವಿರಾರು ಕೋಟಿ ರೂ. ನಷ್ಟವಾಗಿದೆ. ಗ್ರಾಮೀಣ ಕ್ಷೇತ್ರದಲ್ಲಿ ಸಾಲದ ವ್ಯವಸ್ಥೆ ನಿಂತು ಹೋಗಿದೆ. ಇಡೀ ಬ್ಯಾಂಕಿಂಗ್ ವ್ಯವಸ್ಥೆ ಕ್ರಮೇಣ ಕುಸಿಯುತ್ತಿದೆ. ಅದರ ಸ್ಥಾನವನ್ನು ವಿದೇಶೀ ಬ್ಯಾಂಕುಗಳ ಹಾಗೂ ಎನ್.ಬಿ.ಎಫ್.ಸಿ.ಗಳು ವಶಪಡಿಸಿಕೊಳ್ಳುತ್ತಿವೆ ಎಂದು ಸಮ್ಮೇಳನ ಖೇದ ವ್ಯಕ್ತಪಡಿಸಿದೆ.

೧೯೬ ಜಿಲ್ಲೆಗಳಲ್ಲಿ ೧೪ ಸಾವಿರಕ್ಕೂ ಹೆಚ್ಚು ಶಾಖೆಗಳ ಮೂಲಕ ಕಾರ್ಯನಿರ್ವಹಿಸುತ್ತಿರುವ ಗ್ರಾಮೀಣ ಬ್ಯಾಂಕುಗಳನ್ನು ಸೇರಿಸಿ ರಾಷ್ಟ್ರೀಯ ಗ್ರಾಮೀಣ ಬ್ಯಾಂಕ್ ಸ್ಥಾಪಿಸಬೇಕೆಂದೂ ಸಮ್ಮೇಳನ ಒತ್ತಾಯಿಸಿದೆ.

ಎಡರಂಗ ಸರ್ಕಾರಗಳಿಗೆ ಅಭಿನಂದನೆ

ಭಾರತದಲ್ಲಿ ಪ್ರಜಾಪ್ರಭುತ್ವದ ಕಾವಲ ಬುರುಜುಗಳಂತಿರುವ ಪಶ್ಚಿಮ ಬಂಗಾಳ ಹಾಗೂ ತ್ರಿಪುರಾ ಎಡರಂಗದ ಸರಕಾರಗಳನ್ನು ಅಭಿನಂದಿಸುತ್ತಾ ಸಮ್ಮೇಳನ ಒಂದು, ನಿರ್ಣಯ ಅಂಗೀಕರಿಸಿತು. ಪಂಚಾಯತುಗಳ ಮೂಲಕ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ, ಭೂಸುಧಾರಣೆ ಹಾಗೂ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಮೂಲಕ ಗ್ರಾಮೀಣ ಬಡವರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಿ ಈಗ ಒಂದು ಹೊಸ ಕೈಗಾರಿಕಾ ನೀತಿಯನ್ನು ಅಂಗೀಕರಿಸಿ ಪಶ್ಚಿಮ ಬಂಗಾಳದ ಎಡರಂಗ ಸರಕಾರ ಐ.ಎಂ.ಎಫ್.-ವಿಶ್ವ ಬ್ಯಾಂಕ್ ಗ್ಯಾಟ್ ನೀತಿಗಳನ್ನು ಅಂಗೀಕರಿಸುವುದು ಬಿಟ್ಟು ಬೇರೆ ದಾರಿಯಿಲ್ಲ ಎಂಬುವುದರ ಕಣ್ಣು ತೆರೆಸಿದೆ. ತ್ರಿಪುರಾದಲ್ಲಿ ಎಡರಂಗ ಸರ್ಕಾರದಿಂದಾಗಿ ಉಗ್ರಗಾಮಿ ಚಟುವಟಿಕೆಗಳಿಂದ ತತ್ತರಿಸುತ್ತಿರುವ ಈಶಾನ್ಯ ಭಾರತದಲ್ಲಿ ಬುಡಕಟ್ಟು ಜನರು ಮತ್ತು ಇತರರ ಐಕ್ಯತೆಯ ದೀಪದಂತಿದೆ ಎಂದಿರುವ ಸಮ್ಮೇಳನ ಈ ಎರಡು ಸರಕಾರಗಳಿಂದ ಸ್ಫೂರ್ತಿ ಪಡೆದು ರಾಜ್ಯದಲ್ಲಿ ಎಡ-ಪ್ರಜಾಪ್ರಭುತ್ವ ಪರ್ಯಾಯವನ್ನು ಕಟ್ಟಿ ಬೆಳೆಸಬೇಕೆಂದು ಕರೆ ನೀಡಿದೆ.

ದಳ ಸರ್ಕಾರದ ವಿದ್ಯುತ್ ನೀತಿ

25-29% ವಿದ್ಯುತ್ ಬರದಿಂದ ನರಳುತ್ತಿರುವ ರಾಜ್ಯದಲ್ಲಿ ಕರ್ನಾಟಕದ ಜನ ಸಾಮಾನ್ಯರಿಗೆ ಹಾಗೂ ದೇಶದ ಒಟ್ಟು ಹಿತಕ್ಕೆ ಮಾರಕವಾಗದಂತೆ ಸ್ಪರ್ಧಾತ್ಮಕವಾಗಿ ಅಗ್ಗದ ಬೆಲೆಯಲ್ಲಿ ವಿದ್ಯುತ್ ಒದಗಿಸುವುದಕ್ಕಾಗಿ ರಾಜ್ಯ ಸರ್ಕಾರ ದೇಶೀ-ವಿದೇಶೀ ಖಾಸಗಿ ಬಂಡವಾಳದ ಜತೆಗೂಡಿ ಜಂಟಿ ಉದ್ಯಮವನ್ನು ಸ್ಥಾಪಿಸುವುದನ್ನು ಸ್ವಾಗತಿಸುತ್ತಾ ಪಶ್ಚಿಮ ಬಂಗಳಾದ ಮಾದರಿಯಲ್ಲಿ ವಿದ್ಯುತ್ ನೀತಿಯನ್ನು ಅನುಸರಿಸಬೇಕು, ಮಹಾರಾಷ್ಟ್ರದ ಎನ್ರೋನ್ ಮಾದರಿಯನ್ನು ಕೈಬಿಡಬೇಕು ಎಂದು ಸಮ್ಮೇಳನ ಹೇಳಿದೆ. ಕೊಜೆಂಟ್ರಿಕ್ಸ್‌ನೊಳಗೆ ಮಾಡಿಕೊಂಡ ಒಪ್ಪಂದದ ಶರತ್ತುಗಳನ್ನು ಬಹಿರಂಗ ಪಡಿಸಬೇಕೆಂದೂ ಸಮ್ಮೇಳನ ಆಗ್ರಹಪಡಿಸಿದೆ.



ಬಹಿರಂಗ ಸಭೆಯಲ್ಲಿ ಸ್ವಾಗತ ಸಮಿತಿ ಅಧ್ಯಕ್ಷ ಕಾಂ. ಮಾರುತಿ ಮಾನ್ಪಡೆ

ಇದೇ ಫೆಬ್ರವರಿ 24-27ರವರೆಗೆ ಗುಲ್ಬರ್ಗಾದಲ್ಲಿ ನಡೆದ 15ನೇ ರಾಜ್ಯ ಸಮ್ಮೇಳನ 30 ನಿರ್ಣಯಗಳನ್ನು ಅಂಗೀಕರಿಸಿತು. ಈ ನಿರ್ಣಯಗಳ ಸಾರಾಂಶ ಈ ಪುಟ ಹಾಗೂ 2ನೇ ಪುಟದಲ್ಲಿದೆ. ಇನ್ನು 3 ನಿರ್ಣಯಗಳು ಪುಟ 4 ಹಾಗೂ 8ರಲ್ಲಿ ಇವೆ.

15ನೇ ರಾಜ್ಯ ಸಮ್ಮೇಳನದ ನಿರ್ಣಯಗಳು

ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ನಿಗಮದ ಕುರಿತು

ಹೈದರಾಬಾದ್ ನಿಜಾಮನ ಆಳ್ವಿಕೆಯಲ್ಲಿದ್ದ ಕರ್ನಾಟಕದ ನಾಲ್ಕು ಜಿಲ್ಲೆಗಳು ನಿಜಾಮನ ಆಡಳಿತದಲ್ಲಿ ನಿರ್ಲಕ್ಷಿಸಲ್ಪಟ್ಟಿದ್ದವು. ಏಕೀಕೃತ ಕರ್ನಾಟಕದಲ್ಲಿ ಇಂತಹ ನಿರ್ಲಕ್ಷ್ಯ ಇರಲಿಕ್ಕಿಲ್ಲ ಎಂಬ ಆಶಯವೂ ನಂತರ ಈಡೇರಲಿಲ್ಲ, ಇಂದರಿಂದ ಜನರಲ್ಲಿ ಅಸಮಾಧಾನ ಉಂಟಾಗಿ ಈ ಪ್ರದೇಶಕ್ಕಾಗಿ ಒಂದು ಪ್ರತ್ಯೇಕ ಅಭಿವೃದ್ಧಿ ಮಂಡಳಿ ರಚನೆಯಾಗಬೇಕೆಂದು ಬೇಡಿಕೆ ಮೂಡಿ ಬಂತು. ಕೊನೆಗೂ ಮೂರು ವರ್ಷಗಳ ಹಿಂದೆ ಅಭಿವೃದ್ಧಿ ನಿಗಮ ಸ್ಥಾಪನೆಗೊಂಡಿದೆ. ಆದರೆ ಇದಕ್ಕೆ ನೀಡಿದ್ದ ೧೮೦ ಕೋಟಿ ರೂಪಾಯಿಗಳಷ್ಟು ಹಣದ ದುರುಪಯೋಗದಿಂದ ಈಗಲೂ ಅಭಿವೃದ್ಧಿ ಕಂಡು ಬಂದಿಲ್ಲ, ಆದ್ದರಿಂದ ಈ ಮಂಡಳಿ ತನ್ನ ಕರ್ತವ್ಯ ಪೂರೈಸುವಂತೆ, ಭ್ರಷ್ಟಾಚಾರವನ್ನು ಸಂಪೂರ್ಣ ತಡೆಗಟ್ಟುವಂತೆ ಸರಕಾರ ನೋಡಿಕೊಳ್ಳಬೇಕೆಂದೂ ಈ ಪ್ರದೇಶದ ಅಭಿವೃದ್ಧಿಗೆ ಇನ್ನೂ ಹೆಚ್ಚು ಧನಸಹಾಯ ಒದಗಿಸಬೇಕು ಎಂದು ಸಮ್ಮೇಳನ ಕೇಳಿದೆ.

ಗುಲ್ಬರ್ಗಾ ಜಿಲ್ಲೆಯಲ್ಲಿ ನೀರಾವರಿ

ಗುಲ್ಬರ್ಗಾ ಜಿಲ್ಲೆಯಲ್ಲಿ ನೀರಾವರಿ ಯೋಜನೆಗಳಿಗೆ ಸಿಮೆಂಟ್ ಮುಂತಾದ ಬೆಳವಣಿಗೆಗೆ ಸಾಕಷ್ಟು ಅವಕಾಶಗಳಿದ್ದರೂ ಕೈಗಾರಿಕೆಗಳ ಬರಗಾಲದ ಬವಣೆಗೆ ತುತ್ತಾಗುತ್ತಿದೆ. ಬಡತನದಿಂದ ಬಳಲಬೇಕಾಗಿದೆ. ಆದ್ದರಿಂದ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ನಾಲ್ಕು ನೀರಾವರಿ ಯೋಜನೆಗಳನ್ನು, ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಕೂಡಲೇ ಪೂರ್ಣಗೊಳಿಸಬೇಕೆಂದು ಸಮ್ಮೇಳನ ಒತ್ತಾಯಿಸಿದೆ. ಈ ಬಗ್ಗೆ ತೀವ್ರ ಹೋರಾಟ ನಡೆಸಬೇಕೆಂದೂ ಸಮ್ಮೇಳನ ಕರೆ ನೀಡಿದೆ.

ಶರಾವತಿ ಸೇತುವೆಯನ್ನು ಹೊಸದಾಗಿ ನಿರ್ಮಿಸಬೇಕು

ಪಶ್ಚಿಮ ಕರಾವಳಿಯುದ್ದಕ್ಕೂ ಸಾರಿಗೆ ಸಂಪರ್ಕ ಉತ್ತಮಪಡಿಸುವ ಸಾಧನವಾದ ಶರಾವತಿ ಸೇತುವೆ ಜಖಂನಿಂದಾಗಿ ಸಾರಿಗೆಗೆ ತಡೆ ಬಂದಿದ್ದು ನಂತರ ಕಾರ್ಮಿಕರ, ಇತರರ ಚಳುವಳಿಯಿಂದಾಗಿ ಈಗ ಭಾರಿ ವಾಹನಗಳನ್ನು ಬಿಟ್ಟು ಇತರ ವಾಹನಗಳ ಸಂಚಾರ ಆರಂಭವಾಗಿದೆ. ಭಾರೀ ವಾಹನಗಳನ್ನು ಬಿಡುವುದು ಸಾಧ್ಯವಿಲ್ಲ ಎನ್ನುವುದಾದಲ್ಲಿ ತಜ್ಞರಿಂದ ತನಿಖೆ ನಡೆಸಿ ತುರ್ತಾಗಿ ಈ ಸೇತುವೆಯನ್ನು ಹೊಸದಾಗಿ ನಿರ್ಮಿಸಬೇಕು ಈ ಬಗ್ಗೆ ರಾಜ್ಯ ಸರಕಾರ ಕೇಂದ್ರ ಸರಕಾರವನ್ನು ಒತ್ತಾಯಿಸುವ ಕ್ರಮಗಳನ್ನು ಕೈಗೊಳ್ಳಬೇಕೆಂದು ಒಂದು ನಿರ್ಣಯದಲ್ಲಿ ಕೇಳಲಾಗಿದೆ.

ಕೋಲಾರದಲ್ಲಿ ಕುಡಿಯುವ ನೀರಿನಲ್ಲಿ ವಿಷಪೂರಿತ ಲವಣಗಳ ಸಮಸ್ಯೆ

ಕೊಳವೆಬಾವಿಗಳಿಂದ ಪಡೆಯುವ ಕುಡಿಯುವ ನೀರಿನಲ್ಲಿ ಲವಣಗಳು ಬಹಳ ಹೆಚ್ಚಿದ್ದು ಇವು ಜನರ ಆರೋಗ್ಯಕ್ಕೆ ಬಹಳ ಕೆಡುಕುಂಟು ಮಾಡುತ್ತದೆ ಎಂದು ತಿಳಿದು ಬಂದಿರುವ ಹಿನ್ನೆಲೆಯಲ್ಲಿ ಕೋಲಾರ ಜಿಲ್ಲೆಯಲ್ಲೂ ಕುಡಿಯುವ ನೀರಿನ ಪೂರೈಕೆಗೆ ಕ್ರಮ ಕೈಗೊಳ್ಳಬೇಕು, ನೀರಿಗಾಗಿ ಯೋಜನೆಗಳನ್ನು ಕೈಗೆತ್ತಿಕೊಂಡು ಕುಡಿಯುವ ನೀರಿನ ಸಮಸ್ಯೆಯ ಶಾಶ್ವತ ಪರಿಹಾರಕ್ಕಾಗಿ ಪ್ರಯತ್ನಿಬೇಕು ಎಂದು ಸಮ್ಮೇಳನ ಒತ್ತಾಯಿಸಿದೆ.

ವಿದೇಶೀ ಸಮೂಹ ಮಾಧ್ಯಮಗಳ ಧಾಳಿಯ ಕುರಿತು

ನಮ್ಮ ದೇಶದೊಳಗೆ ವಿದೇಶೀ ಸಮೂಹ ಮಾಧ್ಯಮಗಳು ವಿದ್ಯುನ್ಮಾನ ಮಾಧ್ಯಮಗಳು ಪ್ರವೇಶ ಮಾಡಿ ನಮ್ಮ ಸಾಂಸ್ಕೃತಿಕ ನೆಲೆಯನ್ನು ಕಲುಷಿತಗೊಳಿಸುತ್ತಿರುವುದನ್ನು ಸಮ್ಮೇಳನವು ಗಂಭೀರವಾಗಿ ಪರಿಗಣಿಸಿದೆ.

ದೇಶದ ಭವಿಷ್ಯವನ್ನು ಕರಾಳಗೊಳಿಸುತ್ತಿರುವ ಈ ಮಾಧ್ಯಮಗಳ ಅವ್ಯಾಹತ ಪ್ರಸಾರವನ್ನು ನಿಯಂತ್ರಿಸಬೇಕು. ಈ ನಿಟ್ಟಿನಲ್ಲಿ "ಮಾಧ್ಯಮ ನಿಯಂತ್ರಣಾ ಕೇಂದ್ರ"ಗಳನ್ನು ಈ ತಕ್ಷಣದಲ್ಲಿ ಸ್ಥಾಪಿಸಬೇಕೆಂದು ಸಮ್ಮೇಳನವು ಒತ್ತಾಯಿಸಿದೆ.

KRNM/BGS-405 MAG (2) PRB DECR 319-78/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್. ಸಂಪಾದಕರು: ಪಿ.ರಾಮಚಂದ್ರರಾವ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು-27. ಫೋನ್ ನಂ. 2236462
ಮುದ್ರಣ: ರಾಜಾ ಪ್ರಿಂಟರ್ಸ್, ಸಂಪಂಗಿರಾಮನಗರ, ಬೆಂಗಳೂರು. -27

ಇನ್ನೊಂದು ಸುತ್ತಿನ ಕೋಮು ದಳ್ಳುರಿಗೆ ವಿಶ್ವ ಹಿಂದೂ ಪರಿಷತ್ತಿನ "ಕಾಶೀ ಆಂದೋಲನ"

15ನೇ ರಾಜ್ಯ ಸಮ್ಮೇಳನ ಖಂಡನೆ

ಬಾಬ್ರಿ ಮಸೀದಿಯನ್ನು ನಾಶಮಾಡುವ ಮೂಲಕ ಹಚ್ಚಿದ ಬೆಂಕಿ ಇನ್ನೂ ಆರಿಲ್ಲ, ಬೀದಿಗಳಲ್ಲಿ ಹರಿದ ರಕ್ತ ಇನ್ನೂ ಮಾಸಿಲ್ಲ. ಮುಗ್ಧ ಹಿಂದೂ-ಮುಸಲ್ಮಾನರ ನಡುವಿನ ಸಂಶಯ-ಸಂದೇಹಗಳ ಅಂತರ ಮುಚ್ಚಿಲ್ಲ. ಆಗಲೇ ಹಿಂದೂ ಕೋಮುವಾದಿಗಳು ಇನ್ನೊಂದು ಸುತ್ತಿನ ಕರಾಳ ಕೃತ್ಯಗಳಿಗೆ ಹವಣಿಸುತ್ತಿದ್ದಾರೆ. -ಈ ಬಾರಿ 'ಕಾಶೀ ಆಂದೋಲನ'ದ ಮೂಲಕ. ಕೋಮುವಾದಿ ಶಕ್ತಿಗಳ ಈ ಕುತಂತ್ರಗಳನ್ನು ವಿಫಲಗೊಳಿಸಬೇಕು, ಕೋಮುವಾದದ ವಿರುದ್ಧ, ದಣಿವರಿಯದ ಹೋರಾಟ ಮುನ್ನಡೆಯಬೇಕು, ಕೋಮುವಾದಿ ಶಕ್ತಿಗಳು ಹುಟ್ಟಿಹಾಕುವ ದಂಗೆಗಳನ್ನು ತಡೆಯಲು, ಹಾಗೆ ನಡೆದಾಗ ಅಲ್ಪಸಂಖ್ಯಾತರ ಜೀವ ಹಾಗೂ ಆಸ್ತಿ-ಪಾಸ್ತಿಗಳಿಗೆ ರಕ್ಷಣೆ ಕೊಡಲು ಪಕ್ಷದ ಕಾರ್ಯಕರ್ತರು ಎಂತಹ ಗಂಭೀರ ಪರಿಸ್ಥಿತಿಯಲ್ಲೂ ಹಿಂದೇಟು ಹಾಕಲಾರದೆಂದು ಸಮ್ಮೇಳನ ಒಂದು ನಿರ್ಣಯ ಅಂಗೀಕರಿಸಿ ಕರೆ ನೀಡಿದೆ. ಈ ನಿರ್ಣಯವನ್ನು ಕಾಂ. ಜಿ.ವಿ. ಶ್ರೀರಾಮರೆಡ್ಡಿ ಮಂಡಿಸಿದರು. ಕಾಂ.ಎಸ್. ಸೂರ್ಯನಾರಾಯಣರಾವ್ ಅನುಮೋದಿಸಿದರು ನಿರ್ಣಯದ ಪೂರ್ಣ ಪಾಠ ಹೀಗಿದೆ.

ನಿಷೇಧಿತ ವಿಶ್ವ ಹಿಂದು ಪರಿಷತ್ "ಹಿಂದು ಸಂಘ" ಎಂಬ ಹೊಸ ಹೆಸರಿನಲ್ಲಿ ಕಾಶಿ ವಿಶ್ವನಾಥ ದೇವಸ್ಥಾನ ವಿಮೋಚನಾ ಆಂದೋಲನಕ್ಕೆ ಕರೆ ಕೊಡುವ ಮೂಲಕ ಇನ್ನೊಂದು ಸುತ್ತಿನ ಕೋಮುದಳ್ಳುರಿಗೆ ದೇಶವನ್ನು ನೂಕಲು ಹೊರಟಿರುವುದನ್ನು ಗುಲಬರ್ಗಾದಲ್ಲಿ ನಡೆಯುತ್ತಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 15ನೇ ರಾಜ್ಯ ಸಮ್ಮೇಳನವು ತೀವ್ರವಾಗಿ ಖಂಡಿಸುತ್ತದೆ.

ಐತಿಹಾಸಿಕ ಬಾಬ್ರಿ ಮಸೀದಿಯನ್ನು ಹಾಡುಹಗಲಿನಲ್ಲಿ ಧ್ವಂಸಮಾಡಿದ ಸಂಘ ಪರಿವಾರದವರು ಸಾರ್ವತ್ರಿಕವಾಗಿ ಖಂಡನೆಗೆ ಗುರಿಯಾಗಿದ್ದರೂ ಅವರ ವಿರುದ್ಧ ತೀವ್ರ ಕಾನೂನು ಕ್ರಮ ಜರುಗಿಸಲು ಕೇಂದ್ರದ ಕಾಂಗ್ರೆ ಸರ್ಕಾರ ಹಿಂದೇಟು ಹಾಕಿದ್ದರಿಂದ ಕುಮ್ಮಕ್ಕು ಪಡೆದು ಈಗ ಮತ್ತೆ ಕಾಶಿಯಲ್ಲಿರುವ ಗ್ಯಾನವಾಪಿ ಮಸೀದಿಯನ್ನು ಧ್ವಂಸಮಾಡಲು ಹೊರಟಿದ್ದಾರೆ. ಮಥುರಾದಲ್ಲಿರುವ ಇನ್ನೊಂದು ಮಸೀದಿಯನ್ನು ಇದೇ ರೀತಿ ನಾಶಮಾಡುವುದು ಅವರ ಅಜೆಂಡಾದಲ್ಲಿದೆ.

ಈ ಕೋಮುವಾದಿ ಶಕ್ತಿಗಳಿಗೆ ಇದೇ ರೀತಿಯಲ್ಲಿ ಬಿಟ್ಟಿದ್ದೆ ಆದರೆ ದೇಶದಲ್ಲಿ ಉಂಟಾಗಬಹುದಾದ ಅಲ್ಲೋಲಕಲ್ಲೋಲ ಪರಿಸ್ಥಿತಿಯನ್ನು ಅಂದಾಜು ಮಾಡಲು ಸಾಧ್ಯವಿಲ್ಲ, ಬಾಬ್ರಿ ಮಸೀದಿಯನ್ನು ನಾಶಮಾಡುವ ಮೂಲಕ ಇವರು ಹಚ್ಚಿದ ಬೆಂಕಿ ಇನ್ನೂ ಆರಿಲ್ಲ, ಬೀದಿಗಳಲ್ಲಿ ಹರಿದ ರಕ್ತ ಇನ್ನೂ ಮಾಸಿಲ್ಲ, ಮುಗ್ಧ ಹಿಂದುಗಳ ಮತ್ತು ಮುಸಲ್ಮಾನರ ನಡುವೆ ಆಳಗೊಂಡ ಸಂಶಯ ಸಂದೇಹಗಳ ಅಂತರವನ್ನು ಮುಚ್ಚಲು ದೀರ್ಘಕಾಲವೇ ಬೇಕಾಗಲಿದೆ. ಈ ಪರಿಸ್ಥಿತಿಯ ಲಾಭ ಪಡೆದು ಭಾರತ ಭೂಖಂಡದಲ್ಲಿ ಸಾಮ್ರಾಜ್ಯಶಾಹಿ ಶಕ್ತಿಗಳ ಬುಡಮೇಲು ಕೃತ್ಯಗಳು ಹೆಚ್ಚಾಗುವ ಸಂಭವವನ್ನು ತಳ್ಳಿ ಹಾಕಲಾಗುವುದಿಲ್ಲ.

ಈ ಕೋಮುವಾದಿ ಶಕ್ತಿಗಳನ್ನು ಬಗ್ಗು ಬಡಿಯಲು ಕೇಂದ್ರ ಸರ್ಕಾರ ಸಂಪೂರ್ಣ ವಿಫಲವಾಗಿರುವುದು ಮಾತ್ರವಲ್ಲ, ತನ್ನ ರಾಜಕೀಯ ಲಾಭಕ್ಕಾಗಿ ಕೋಮುವಾದಿ ಶಕ್ತಿಗಳೊಂದಿಗೆ ಆಟವಾಡುತ್ತಿರುವುದು ಅತ್ಯಂತ ಆತಂಕಕಾರಿ ವಿಷಯವಾಗಿದೆ.

ಕೇಂದ್ರ ಸರ್ಕಾರ ಬಾಬ್ರಿ ಮಸೀದಿ ವಿಷಯದಲ್ಲಿ ನಡೆದುಕೊಂಡ ರೀತಿಯಲ್ಲಿ ನಡೆದುಕೊಳ್ಳಬಾರದೆಂದು, ಬಿಜೆಪಿ ನೇತೃತ್ವದ ಸಂಘ ಪರಿವಾರ ದುಷ್ಟ ಉದ್ದೇಶಗಳ ಬಗ್ಗೆ ಹಗುರವಾಗಿ ತಿಳಿಯಬಾರದೆಂದು, ಕಾಶಿಯಲ್ಲಿ ಶಿವರಾತ್ರಿಯ ದಿನ ಅನಿಯಂತ್ರಿತ ಜನಜಂಗುಳಿ ಸಭೆ ಸೇರುವುದನ್ನು ಪರಿಣಾಮಕಾರಿಯಾಗಿ ತಡೆಗಟ್ಟಬೇಕೆಂದು ಕಾಶಿಯಲ್ಲಿರುವ ಮಸೀದಿ ಹಾಗೂ ಅಲ್ಪಸಂಖ್ಯಾತರ ಮನೆ ಮಾರುಗಳಿಗೆ ಅವಶ್ಯಕ ರಕ್ಷಣೆ ಒದಗಿಸಬೇಕೆಂದು, ಕೋಮುವಾದಿ ಶಕ್ತಿಗಳ ಕುತಂತ್ರಗಳನ್ನು ವಿಫಲಗೊಳಿಸಲು ದಿಟ್ಟ ಹಾಗೂ ನಿರ್ದಾಕ್ಷಿಣ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮ್ಮೇಳನವು ಕೇಂದ್ರ ಸರ್ಕಾರವನ್ನು ಆಗ್ರಹಿಸುತ್ತದೆ.

ಗುಲ್ಬರ್ಗಾದಲ್ಲಿ ಫೆಬ್ರುವರಿ 24ರಿಂದ 27ರವರೆಗೆ ನಡೆದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯದ 15ನೇ ಸಮ್ಮೇಳನವು ಕೋಮುವಾದದ ವಿರುದ್ಧದ ಹೋರಾಟವನ್ನು ದಣಿಯದೆ ಮುನ್ನಡೆಸಬೇಕೆಂದು ಪಕ್ಷದ ಎಲ್ಲಾ ಶಾಖೆಗಳಿಗೆ ಮತ್ತು ಸಮಿತಿಗಳಿಗೆ ನಿರ್ದೇಶನ ನೀಡುತ್ತದೆ. ಕೋಮುವಾದದ ಅಪಾಯದ ಬಗ್ಗೆ, ದುಡಿಯುವ ಜನತೆಯ ಐಕ್ಯತೆಯನ್ನು ಗಟ್ಟಿಗೊಳಿಸಬೇಕಾದ ಅವಶ್ಯಕತೆಯನ್ನು ಜನತೆಗೆ ಮನವರಿಕೆ ಮಾಡಲು ಕಾರ್ಯಕ್ರಮಗಳಿಗೆ ವಿಶೇಷ ಆದ್ಯತೆ ನೀಡಬೇಕೆಂದೂ ಸೂಚಿಸುತ್ತದೆ. ಕೋಮುವಾದಿ ವಿಭಾಜಕ ಶಕ್ತಿಗಳು ಹುಟ್ಟುಹಾಕಬಹುದಾದ ದಂಗೆಗಳನ್ನು ತಡೆಗಟ್ಟುವಲ್ಲಿ, ಅಂತಹ ದಂಗೆಗಳು ನಡೆದಾಗ ಅಲ್ಪಸಂಖ್ಯಾತರ ಜೀವ ಹಾಗೂ ಆಸ್ತಿಪಾಸ್ತಿಗಳಿಗೆ ರಕ್ಷಣೆ ಕೊಡಲು ಪಕ್ಷದ ಕಾರ್ಯಕರ್ತರು ಎಂತಹ ಗಂಭೀರ ಪರಿಸ್ಥಿತಿಯಲ್ಲಿಯೂ ಹಿಂದೇಟು ಹಾಕಬಾರದೆಂದು ಸಮ್ಮೇಳನ ಕರೆ ನೀಡುತ್ತದೆ.

ಕಾಮ್ರೇಡ್ ಹಸನ್ ಖಾನ್ ಸ್ಮಾರಕ ಭವನ ಉದ್ಘಾಟನೆ

ಫೆಬ್ರುವರಿ 24 ರ ಸಂಜೆ ಗುಲ್ಬರ್ಗಾದ ಹಮಲವಾಡಿ ಗಲ್ಲಿಯಲ್ಲಿ ಎಂದಿಲ್ಲದ ಸಡಗರ. ಎಂದೂ ಸುದ್ದಿಯಲ್ಲಿ ಇಲ್ಲದ ಸಾಮಾನ್ಯ ಜನವಸತಿಯ ಈ ಪ್ರದೇಶದಲ್ಲಿ ಗುಲ್ಬರ್ಗಾ ಜಿಲ್ಲೆಯ ಕಾರ್ಮಿಕರು, ರೈತರು, ಕೂಲಿಕಾರರು ತಮ್ಮ ನೆಚ್ಚಿನ ನಾಯಕ ದಿವಂಗತ ಕಾಮ್ರೇಡ್ ಮಹಮ್ಮದ್ ಹಸನ್ ಖಾನ್ ಅವರ ನೆನಪಿಗಾಗಿ ನಿರ್ಮಿಸಿದ ಭವನದ ಉದ್ಘಾಟನಾ ಕಾರ್ಯಕ್ರಮಕ್ಕಾಗಿ ಪಕ್ಷದ ಸದಸ್ಯರು, ಹಿತೈಷಿಗಳು ಗುಂಪು ಗುಂಪಾಗಿ ಸೇರತೊಡಗಿದ್ದರು. ಸಮ್ಮೇಳನಕ್ಕಾಗಿ ಆಗಮಿಸಿದ್ದ ಪ್ರತಿನಿಧಿಗಳು ಸುಪರ್ ಮಾರ್ಕೆಟ್ ನಲ್ಲಿ ಬಹಿರಂಗ ಸಭೆ ಮುಗಿಸಿಕೊಂಡು ಇಲ್ಲಿಗೇ ಬಂದರು. ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಕಾಮ್ರೇಡ್ ಪಿ.ರಾಮಚಂದ್ರನ್ ಅವರು ಕಟ್ಟಡವನ್ನು ಸಾಂಕೇತಿಕವಾಗಿ ಉದ್ಘಾಟಿಸುತ್ತಿದ್ದಂತೆ "ಕಾಮ್ರೇಡ್ ಹಸನ್ ಖಾನ್ ಅವರ ನೆನಪು ಚಿರಾಯುವಾಗಲಿ" ಎಂಬ ಘೋಷಣೆ ಮುಗಿಲು ಮುಟ್ಟಿತು. ಅನಂತರ ನಡೆದ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಕಾಮ್ರೇಡ್ ಪಿ.ಆರ್.ಸಿ. ಅವರು ಗುಲ್ಬರ್ಗಾ ಜಿಲ್ಲೆಯಲ್ಲಿ ಪಕ್ಷವನ್ನು ಕಟ್ಟಲು ತುಂಬಾ ಶ್ರಮಿಸಿದ್ದ ಕಾಮ್ರೇಡ್ ಹಸನ್ ಖಾನ್ ಅವರ ಸ್ಮಾರಕವಾಗಿ ಕಟ್ಟಲಾದ ಈ ಕಟ್ಟಡವನ್ನು ಪಕ್ಷದ ಚಟುವಟಿಕೆಗಳ ಕೇಂದ್ರವಾಗಿ ಬೆಳೆಸಬೇಕು ಎಂದು ಕರೆ ನೀಡಿದರು. ಈ ಸಂದರ್ಭದಲ್ಲಿ ಕಾಮ್ರೇಡ್ ಪಿ. ರಾಮಚಂದ್ರರಾವ್, ಕಾಂ. ಎನ್.ಕೆ. ಉಪಾಧ್ಯಾಯ ಮತ್ತು ಕಾಂ. ಮಾರುತಿ ಮಾನ್ಪಡೆ ಅವರು ಮಾತನಾಡಿ ಕಾಮ್ರೇಡ್ ಹಸನ್ ಅವರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದ ಕಮ್ಯುನಿಸ್ಟ್ ಆದರ್ಶಗಳನ್ನು ಸ್ಮರಿಸಿ ಕೊಂಡಾಡಿದರು. ಕಾಮ್ರೇಡ್ ಹಸನ್ ಖಾನ್ ಅವರ ಕುಟುಂಬದ ಕೆಲ ಸದಸ್ಯರೂ ಈ ಸಭೆಯಲ್ಲಿ ಭಾಗವಹಿಸಿದ್ದರು. ಕಟ್ಟಡದ ನಿರ್ಮಾಣಕ್ಕೆ ಉದಾರ ಧನಸಹಾಯ ನೀಡಿದ ಕಾರ್ಮಿಕರಿಗೆ ಹಾಗೂ ಇತರರಿಗೆ ಸಭೆಯಲ್ಲಿ ಅಭಿನಂದನೆ ಸಲ್ಲಿಸಲಾಯಿತು.



ಸಿಪಿಐ(ಎಂ) ಶಾಖಾ ಸಮ್ಮೇಳನ

ಸಿದ್ದಾಪುರ: ಸಿಪಿಐ(ಎಂ)ನ ಸಿದ್ದಾಪುರ ಶಾಖಾ ಸಮ್ಮೇಳನವು ಜನವರಿ 8, 1995ರಂದು ನಡೆಯಿತು. ಸಮ್ಮೇಳನದ ಉದ್ಘಾಟನೆಯನ್ನು ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಕಾಂ. ಸಿ.ನಂಜುಂಡಪ್ಪನವರು ನೆರವೇರಿಸಿ ಮಾತನಾಡುತ್ತಾ ಪ್ರಸಕ್ತ ಅಂತರ್ರಾಷ್ಟ್ರೀಯ ವಿದ್ಯಮಾನಗಳನ್ನು ವಿವರಿಸಿದರು.

ಸಮ್ಮೇಳನವು ಮುಂದಿನ ಅವಧಿಗೆ ಶಾಖಾ ಕಾರ್ಯದರ್ಶಿಯಾಗಿ ಕಾಂ. ಹೆಚ್.ಎಂ. ಕಾಳಯ್ಯನವರನ್ನು ಕಾರ್ಯದರ್ಶಿಯಾಗಿ ಸರ್ವಾನುಮತದಿಂದ ಆರಿಸಿತು.

ಸಮ್ಮೇಳನದ ಅಂಗವಾಗಿ ಅಪರಾಹ್ನ ನೆಲ್ಯಹುದಿಕೇರಿಯಿಂದ ಪ್ರಾರಂಭಗೊಂಡು ವಾದ್ಯಗೋಷ್ಠಿಗಳೊಂದಿಗೆ ನಗರದಾದ್ಯಂತ ಮೆರವಣಿಗೆ ಹಾಗೂ ಬಹಿರಂಗ ಸಭೆಯನ್ನು ನಡೆಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಕಾಂ.ಪೀಟರ್ ಲೋಬೋರವರು ವಹಿಸಿದ್ದು ಸಭೆಯನ್ನುದ್ದೇಶಿಸಿ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಸಿ.ನಂಜಂಡಪ್ಪ ಹಾಗೂ ಜಿಲ್ಲಾ ಮುಖಂಡರಾದ ಕಾಂ. ಐ.ಆರ್. ಪ್ರಮೋದ್‌ರವರು ಮಾತನಾಡಿದರು. ಪ್ರಾರಂಭದಲ್ಲಿ ಕಾರ್ಯದರ್ಶಿ ಕಾಂ. ಹೆಚ್.ಎಂ.ಕಾಳಯ್ಯನವರು ಸ್ವಾಗತಿಸಿ, ಕೊನೆಯಲ್ಲಿ ಕಾಂ.ಎನ್.ಡಿ.ಕುಟ್ಟಪ್ಪನವರು ವಂದಿಸಿದರು.

ಸಕಲೇಶಪುರ:

ಮಲೆನಾಡು ಪ್ರಾದೇಶಿಕ ಸಮಿತಿಯ ಮೂರನೆಯ ಸಮ್ಮೇಳನವು ಜನವರಿ 31, 1995ರಂದು ಇಲ್ಲಿ ನಡೆಯಿತು. ಸಮ್ಮೇಳನದ ಕಾರ್ಯಕಲಾಪಗಳನ್ನು ಸಂಗಾತಿಗಳಾದ ಕೆ.ಸುಕುಮಾರ್, ರಾಜೇಂದ್ರ ಮತ್ತು ಎಂ.ರಾಘುಶೆಟ್ಟಿಯವರನ್ನೊಳಗೊಂಡ ಅಧ್ಯಕ್ಷ ಮಂಡಳಿಯವರು ವಹಿಸಿ ನಡೆಸಿಕೊಟ್ಟರು.

ಸಮ್ಮೇಳನದ ಪ್ರಾರಂಭಕ್ಕೆ ಮೊದಲು ಸಂಗಾತಿ ರಾಜೇಂದ್ರ ಧ್ವಜಾರೋಹಣ ಮಾಡಿದರು. ಸಮ್ಮೇಳನವನ್ನು ಉದ್ಘಾಟಿಸಿ ಸಂಗಾತಿ ಕಾಂ. ಸಿ.ನಂಜುಂಡಪ್ಪನವರು ಮಾತನಾಡಿದರು. ಕಾರ್ಯದರ್ಶಿ ವಿ.ಸುಕುಮಾರ್ ಕಳೆದ ಸಮ್ಮೇಳನದ ನಂತರದ ಅವಧಿಯಲ್ಲಿ ನಡೆದ ಚಟುವಟಿಕೆಗಳ ಬಗ್ಗೆ ಮಂಡಿಸಿದ ದೀರ್ಘ ವರದಿಯ ಮೇಲೆ ಪ್ರತಿನಿಧಿಗಳನೇಕರು ಚರ್ಚಿಸಿದ ನಂತರ ವರದಿಯು ಸರ್ವಾನುಮತದಿಂದ ಅಂಗೀಕಾರವಾಯಿತು.

ಮುಂದಿನ ಅವಧಿಗೆ ಸಂಗಾತಿ ವಿ.ಸುಕುಮಾರ್ ಕಾರ್ಯದರ್ಶಿಯಾಗಿಯೂ, ಸಂಗಾತಿಗಳಾದ ಕೆ.ಸುಕುಮಾರ್, ರಾಜೇಂದ್ರ, ಎಸ್.ಪಿ.ಪ್ರಕಾಶ್, ಕೆ.ಟಿ.ರಾಘವೇಂದ್ರ, ದೂಜ ಮತ್ತು ಎಂ.ರಾಘುಶೆಟ್ಟಿ ಸಮಿತಿಯ ಸದಸ್ಯರಾಗಿಯೂ ಚುನಾಯಿಸಲಾಯಿತು.

ಸಮ್ಮೇಳನದ ಅಂಗವಾಗಿ ಏರ್ಪಡಿಸಿದ್ದ ಬಹಿರಂಗ ಸಭೆ, ಮೆರವಣಿಗೆಯಲ್ಲಿ ನೂರಾರು ಜನ ಭಾಗವಹಿಸಿದ್ದರು. ಪುರಭವನದಲ್ಲಿ ಏರ್ಪಡಿಸಿದ್ದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಕಾಂ. ವಿ.ಸುಕುಮಾರ್ ವಹಿಸಿದ್ದು ಕಾಂ. ಸಿ.ನಂಜುಂಡಪ್ಪ, ಕಾಂ.ಕೆ.ಸುಕುಮಾರ್ ಬಹಿರಂಗ ಸಭೆಯಲ್ಲಿ ಮಾತನಾಡಿದರು.

ಹೊಸ ರಾಜ್ಯ ಸಮಿತಿ

ಸಿಪಿಐ(ಎಂ)ನ 15ನೇ ಕರ್ನಾಟಕ ರಾಜ್ಯ ಸಮ್ಮೇಳನ 37 ಸದಸ್ಯ ಸಂಖ್ಯೆಯುಳ್ಳ ರಾಜ್ಯ ಸಮಿತಿಯನ್ನು ಸರ್ವಾನುಮತದಿಂದ ಆರಿಸಿತು. ಹೊಸ ರಾಜ್ಯ ಸಮಿತಿ ಕಾಂ.ಪಿ.ರಾಮಚಂದ್ರರಾವ್ ಅವರನ್ನು ಕಾರ್ಯದರ್ಶಿಯಾಗಿ ಹಾಗೂ ಅವರೂ ಸೇರಿದಂತೆ 9 ಸದಸ್ಯರಿರುವ ಕಾರ್ಯದರ್ಶಿ ಮಂಡಳಿಯನ್ನು ಆರಿಸಿದೆ. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರ ಹೆಸರುಗಳು ಹೀಗಿವೆ.

ಪಿ. ರಾಮಚಂದ್ರರಾವ್(ಕಾರ್ಯದರ್ಶಿ)
ಎಸ್.ಸೂರ್ಯನಾರಾಯಣರಾವ್
ಎನ್.ಕೆ.ಉಪಾಧ್ಯಾಯ
ವಿ.ಜೆ.ಕೆ.ನಾಯರ್
ಸಿ.ನಂಜುಂಡಪ್ಪ
ಕೆ.ಆರ್.ಶ್ರೀಯಾನ್
ಜಿ.ವಿ.ಶ್ರೀರಾಮರೆಡ್ಡಿ
ಜಿ.ಎನ್.ನಾಗರಾಜ್
ನಿತ್ಯಾನಂದಸ್ವಾಮಿ

ರಾಜ್ಯ ಸಮಿತಿಯ ಇತರ ಸದಸ್ಯರುಗಳು:

ಕೆ.ಮೂಸಬ್ಬ
ಅಬ್ರಹಾಂ ಕರ್ಕಡ
ಡೇವಿಡ್ ಕರ್ಕಡ
ಕೆ.ಶಂಕರ್
ಟಿ.ಎಸ್.ಮಣಿ
ಕೆ.ಎಂ.ವೆಂಕಟೇಶ್
ಜಿ.ಸಿ.ಬೈರೆಡ್ಡಿ
ಪಿ.ಜಗನ್ನಾಥ್
ಎಸ್.ರೇವಣ್ಣ
ಆರ್.ಶ್ರೀನಿವಾಸ್
ವೇದರಾಜ್
ಸಿ.ಆರ್.ಭಟ್
ವಿ.ಪಿ.ಕುಲಕರ್ಣಿ
ಪ್ರಸನ್ನಕುಮಾರ್
ಎಸ್.ವೈ.ಗುರುಶಾಂತ್
ಯು.ಬಸವರಾಜ್
ಮಾರುತಿ ಮಾನ್ಪಡೆ
ಕಲ್ಲಪ್ಪ ಕಿರಣಗಿ
ಸಿ.ಎಸ್.ಬಾಳೆ
ಬಿ.ಲಿಂಗಪ್ಪ
ಎಂ.ಎನ್.ಉಗ್ರಪ್ಪ
ಮಹಮ್ಮದ್ ದಸ್ತಗೀರ್
ವಿ.ಸುಕುಮಾರ್
ಭೀಮಸಿ ಕಲಾದಗಿ
ಎಸ್.ಬಿ.ಶಿವಶಂಕರ್
ಟಿ.ಎಸ್. ನಾಯಕ್

ಇನ್ನು ಎರಡು ಸ್ಥಾನಗಳು ತೆರವಾಗಿವೆ. ಇವನ್ನು ನಂತರ ತುಂಬಲು ಸಮ್ಮೇಳನ ರಾಜ್ಯ ಸಮಿತಿಗೆ ಅಧಿಕಾರ ನೀಡಿತು.

15ನೇ ಮಹಾಧಿವೇಶನಕ್ಕೆ ರಾಜ್ಯದ ಪ್ರತಿನಿಧಿಗಳು

ಚಂಡೀಗಢದಲ್ಲಿ ಏಪ್ರಿಲ್ 3-8ರವರೆಗೆ ನಡೆಯಲಿರುವ 15ನೇ ಮಹಾಧಿವೇಶನದಲ್ಲಿ ಭಾಗವಹಿಸುವ ರಾಜ್ಯದ ಪ್ರತಿನಿಧಿಗಳನ್ನು ಸಮ್ಮೇಳನ ಆರಿಸಿತು.

ಪ್ರತಿನಿಧಿಗಳು:

ಎಸ್.ಸೂರ್ಯನಾರಾಯಣರಾವ್
ವಿ.ಜೆ.ಕೆ.ನಾಯರ್
ಕೆ.ಆರ್.ಶ್ರೀಯಾನ್
ಎನ್.ಕೆ.ಉಪಾಧ್ಯಾಯ
ಜಿ.ಎನ್.ನಾಗರಾಜ್
ಜಿ.ಸಿ.ಭಯ್ಯಾರೆಡ್ಡಿ
ಕೆ.ನೀಲಾ

ವೀಕ್ಷಕರು:

ಮಾರುತಿ ಮಾನ್ಪಡೆ,
ಡೇವಿಡ್ ಕರ್ಕಡ

ಪರ್ಯಾಯ ಪ್ರತಿನಿಧಿಗಳು:

ಸಿ.ನಂಜುಂಡಪ್ಪ
ಎಸ್.ವೈ.ಗುರುಶಾಂತ್